CC-O. In Public Domain. Digitized by eGangotri

ಶ್ರೀಮಚ್ಛಂಕರ ಭಗವತ್ಪಾದ

ರಚಿತ

ಶ್ರೀ ಸಾಂಬ ದಶಶ್ಲೋಕೀ

ನಮಃ ಶಿವಾಯ ಸಾಂಬಾಯ ಸರ್ವಂ ಶಿವಮಯಂ ಜಗತ್ ।
ತದನ್ಯದಶಿವಂ ನಿತ್ಯಂ ಶಿವಮೇವ ಸಮಾಶ್ರಯೇ ॥

**ಸಾಂಬೋ ನಃ ಕುಲದೈವತಂ ಪಶುಪತೇ ಸಾಂಬ ತ್ವದೀಯಾ ವಯಂ
ಸಾಂಬಂ ನೌಮಿ ಸುರಾಸುರೋರಗ ಗಣಾಃ ಸಾಂಬೇನ ಸಂತಾರಿತಾಃ ।
ಸಾಂಬಾಯಾಸ್ತು ನಮೋ ಮಯಾ ವಿರಚಿತಂ ಸಾಂಬಾತ್ಪರಂ ನೋ
ಭಜೇ ಸಾಂಬಸ್ಯಾನುಚರೋಽಸ್ಮ್ಯಹಂ ಮಮ ರತಿಃ ಸಾಂಬೇ ಪರ
ಬ್ರಹ್ಮಣೇ ॥೧॥**

ಪಶುಪತೇ :— ಕರ್ಮಾಧೀನರಾಗಿ ಸಂಸಾರ ದುಃಖ ಸಾಗರದಲ್ಲಿ ಮುಳುಗಿರುವ ಜೀವಸಮೂಹವೆಲ್ಲ, ಪರಾಧೀನಸ್ಥಿತಿಯ ಪಶುಗಳಂತೆ ಪಶುಗಳೆನಿಸುವರು ಈ ಪಶುಗಳನ್ನು, ಇಹಪರಗಳ ಶ್ರೇಯಃ ಸಾಧನೆಯ ಮಾರ್ಗವನ್ನು ಉಪದೇಶಿಸಿ ದುಃಖದಿಂದ ರಕ್ಷಿಸುವ ಸರ್ವ ಜಗದಧಿಪತಿಯಾದ ಶ್ರೀ ಪರಶಿವನು ಪಶುಪತಿಯು. ಇಂಥ ಪರಮೇಶ್ವರನ ಅನುಗ್ರಹವಿಲ್ಲದೆ ಸಂಸಾರದುಃಖವನ್ನು ಪರಿಹರಿಸಿಕೊಳ್ಳುವುದು ಸಾಧ್ಯವಿಲ್ಲ. ಶ್ರೀ ಪರಮೇಶ್ವರನನ್ನು ಸ್ತುತಿಸಿ ಪ್ರಾರ್ಥಿಸುವುದು ಅವನ ಅನುಗ್ರಹವನ್ನು ಪಡೆಯುವುದಕ್ಕೆ ಉಪಾಯವಾಗಿದೆ. "ಗುಣಿನಿಷ್ಠ ಗುಣಾಭಿಧಾನಂ ಸ್ತೋತ್ರಂ" - ಎಂಬಂತೆ - ಗುಣವುಳ್ಳ ವಸ್ತುವಿನ ಗುಣಗಳನ್ನು ಕೀರ್ತಿಸುವುದು ಸ್ತೋತ್ರವು. ಹೇ ಪಶುಪತೇ! ನಿನ್ನ ಮಹಿಮೆಯನ್ನು ಜ್ಞಾಪಿಸಿಕೊಳ್ಳುತ್ತ ನಿನ್ನನ್ನು ಪ್ರಾರ್ಥಿಸುತ್ತೇನೆ. ನೀನೇ ನಮಗೆಲ್ಲ ಗತಿಯು - ರಕ್ಷಕನು ಎಂದು ಈ ಸಂಬೋಧನೆಯ ಅಭಿಪ್ರಾಯವು. ಅಕಾರಾಂತ ಪುಲ್ಲಿಂಗದ ಸಾಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಬ್ದವು ಕ್ರಮವಾಗಿ ಎಂಟು ವಿಭಕ್ತಿಗಳ ಏಕವಚನದ ರೂಪಗಳಲ್ಲಿ ಪ್ರಯುಕ್ತವಾಗಿರುವ ವಿಶೇಷವು ಈ ಪದ್ಯದಲ್ಲಿ ಇದೆ.

ಸಾಂಬಃ :— ಜಗನ್ಮಾತೆಯಾದ ಪರಾಶಕ್ತಿಯೊಡನೆ ಯಾವಾಗಲೂ ಕೂಡಿ ಇರುವ ಶ್ರೀ ಪರಮೇಶ್ವರನು, **ನಃ ಕುಲದೈವತಂ** ನಾವು ಮನುಷ್ಯ ಕುಲದವರು, ನಮ್ಮ ಮನುಷ್ಯ ಕುಲಕ್ಕೆ ಪರದೈವವು. ಮನುಷ್ಯ ಮಾತ್ರನು ಸಾಂಬ ಪರಮೇಶ್ವರನನ್ನು ಕುಲ ದೇವತೆಯಂತೆ ಆರಾಧಿಸಬೇಕು. ಮಾಯಾ ಶಕ್ತಿ ಸಹಿತವಾದ ನಿರ್ಗುಣ ಪರಬ್ರಹ್ಮ ಚೈತನ್ಯವೇ ಪರಮೇಶ್ವರನು. ಆದ್ದರಿಂದ ಪರಮೇಶ್ವರನು ಯಾವಾಗಲೂ ಅಂಬಾ ಸಹಿತನಾಗಿದ್ದು ಸಾಂಬನೆನಿಸಿದ್ದಾನೆ.

ಆದ್ದರಿಂದ **ಸಾಂಬ** — ಹೇ ಪರಮೇಶ್ವರ ; **ವಯಂ ತ್ವದೀಯಾಃ :—** ನಾವು ನಿನ್ನವರು,– ನಿನ್ನ ರಕ್ಷಣೆಗೆ ಸೇರಿದವರು– ನೀನೇ ನಮ್ಮ ರಕ್ಷಣೆಯನ್ನು ಮಾಡತಕ್ಕದ್ದಾಗಿದೆ.

ಸಾಂಬಂ ನೌಮಿ:—ಇದಕ್ಕಾಗಿ ನಾನು ನಿನಗೆ ಶರಣಾಗತನಾಗಿದ್ದೇನೆ.

ಸುರಾಸುರೋರಗಗಣಾಃ ಸಾಂಬೇನ ಸಂತಾರಿತಾಃ :– ಶರಣಾಗತರಾದ ದೇವತೆಗಳು, ಅಸುರರು, ಉರಗ(ಸರ್ಪ)–ಮುಂತಾದ ಎಲ್ಲರನ್ನೂ ಈ ಸಂಸಾರ ಸಾಗರದಿಂದ ಪಾರು ಮಾಡಿದವನು ನೀನೇ ಆಗಿರುವೆ.

ಮಯಾ ವಿರಚಿತಂ ನಮಃ ಸಾಂಬಾಯ ಅಸ್ತು:—ಆದ ಕಾರಣ ನನ್ನ ನಮಸ್ಕಾರವು ಶ್ರೀ ಸಾಂಬ ಶಿವನಿಗೇ ಮೀಸಲಾದುದು.

ಸಾಂಬಾತ್ ಪರಂ ನೋ ಭಜೇ — ಶ್ರೀ ಸಾಂಬಸದಾಶಿವನನ್ನಲ್ಲದೆ ಬೇರೆ ಯಾರನ್ನು ನಾನು ಆಶ್ರಯಿಸುವುದಿಲ್ಲ.

ಸಾಂಬಸ್ಯ ಅಹಂ ಅನುಚರಃ ಅಸ್ಮಿ — ನಾನು ಶ್ರೀ ಸಾಂಬಸದಾಶಿವನ ಸೇವಕನೇ ಆಗಿರುತ್ತೇನೆ.

ಪರಬ್ರಹ್ಮಣಿ ಸಾಂಬೇ ಮಮ ರತಿಃ :— ಶ್ರೀ ಸಾಂಬಸದಾಶಿವನು ಪರಮಾರ್ಥವಾಗಿ ನಿತ್ಯಶುದ್ಧಬುದ್ಧಮುಕ್ತಾದ್ವಿತೀಯಪರಬ್ರಹ್ಮವೇ ಆಗಿರುತ್ತಾನೆ, ಅವನಲ್ಲಿಯೇ ನನಗೆ [illegible] ಭಕ್ತಿಯು [illegible]

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷ್ಣ್ವಾದ್ಯಾಶ್ಚ ಪುರತ್ರಯಂ ಸುರಗಣಾ ಜೇತುಂ ನ ಶಕ್ತಾಃ ಸ್ವಯಂ, ಯಂ ಶಂಭುಂ ಭಗವನ್ ವಯಂತು ಪಶವೋಽಸ್ಮಾಕಂ ತ್ವಮೇವೇಶ್ವರಃ। ಸ್ವಸ್ವಸ್ಥಾನನಿಯೋಜಿತಾಃ ಸುಮನಸಃ ಸ್ವಸ್ಥಾ ಬಭೂವುಸ್ತತಃ, ತಸ್ಮಿನ್ಮೇ ಹೃದಯಂ ಸುಖೇನ ರಮತಾಂ ಸಾಂಬೇ ಪರಬ್ರಹ್ಮಣಿ ॥೨॥

ಶ್ರೀ ಪರಮೇಶ್ವರನ ಪರಮಹಿಮೆಯನ್ನು ವರ್ಣಿಸುತ್ತ ಪರಮಾತ್ಮ ತತ್ತ್ವವನ್ನು ಅನುಸಂಧಾನ ಮಾಡುತ್ತಾರೆ.

ವಿಷ್ಣ್ವಾದ್ಯಾಃ ಸುರಗಣಾ: ಚ — ಶ್ರೀ ಮಹಾವಿಷ್ಣು — ಮೊದಲಾದ ಎಲ್ಲ ದೇವತೆಗಳೂ ಒಟ್ಟಾಗಿ ಸೇರಿಯೂ ; **ಪುರತ್ರಯಂ** ತ್ರಿಪುರಾಸುರರ ಆ ಮೂರು ಪಟ್ಟಣಗಳನ್ನು ; **ಜೇತುಂ ಸ್ವಯಂ ನ ಶಕ್ತಾ** :— ತಾವೇ ಜಯಿಸಲು ಸಮರ್ಥರಾಗದೆ; **ಭಗವನ್** ಮಹಾ ಮಹಿಮ ಶಾಲಿಯಾದ ಶ್ರೀ ಪರಮೇಶ್ವರನೇ ; **ವಯಂ ತು ಪಶವಃ** — ನಾವೆಲ್ಲರೂ ನಿನ್ನ ಅಧೀನರಾಗಿ ರಕ್ಷಣೆಗೆ ಒಳಪಟ್ಟಿರುವ ಪಶುಗಳಾಗಿದ್ದೇವೆ ; **ತ್ವಂ ಏವ ಈಶ್ವರಃ** — ನೀನೇ ನಮ್ಮನ್ನು ರಕ್ಷಿಸಲು ಸಮರ್ಥನಾಗಿದ್ದೀಯೆ ; ಆದ್ದರಿಂದ ಈ ತ್ರಿಪುರರನ್ನು ಜಯಿಸಿ, ಅವರ ಬಾಧೆಯನ್ನು ಪರಿಹರಿಸಿ ಕಾಪಾಡಬೇಕು – ಎಂದು, **ಶಂಭುಂ** – ಶ್ರೀ ಪರಮೇಶ್ವರನನ್ನು ಶರಣು ಹೊಂದಿ ; **ಸುಮನಸಃ** — ಆ ದೇವತೆಗಳು ; **ಸ್ವಸ್ವಸ್ಥಾನನಿಯೋಜಿತಾಃ** — ಈಶ್ವರನಿಂದ ನಿಯಮಿತವಾದ ತಮ್ಮ ತಮ್ಮ ಸ್ಥಾನದಲ್ಲಿದ್ದು ; **ಸ್ವಸ್ಥಾಃ ಬಭೂವುಃ** — ನೆಮ್ಮದಿಯನ್ನು ಪಡೆದು ಕ್ಷೇಮವನ್ನು ಹೊಂದಿದರು. **ತತಃ** — ಆದ್ದರಿಂದ ; **ತಸ್ಮಿನ್** – ಇಂಥ ಸರ್ವಜಗದ್ರಕ್ಷಕನಾಗಿರುವ ; **ಪರಬ್ರಹ್ಮಣಿ ಸಾಂಬೇ** –ಪರಮಾರ್ಥ ಪರಬ್ರಹ್ಮಸ್ವರೂಪನಾದ ಶ್ರೀ ಸಾಂಬಸದಾಶಿವನಲ್ಲಿಯೇ ; **ಮೇ ಹೃದಯಂ** ನನ್ನ ಹೃದಯವು ; **ಸುಖೇನ ರಮತಾಂ** — ಆನಂದದಿಂದ ಆಸಕ್ತವಾಗಿರಲಿ–೨.

ತ್ರಿಪುರಾಸುರರೆಂದು ಪ್ರಸಿದ್ಧರಾದ ಮೂವರು ದಾನವರು ಅಂತರಿಕ್ಷದಲ್ಲಿ ಚಿನ್ನ ಬೆಳ್ಳಿ ಮತ್ತು ಕಬ್ಬಿಣಗಳಿಂದ ಮೂರು ಪಟ್ಟಣಗಳನ್ನು ಕಟ್ಟಿಕೊಂಡು ಅತ್ಯಂತ ಬಲಿಷ್ಠರಾಗಿ ಲೋಕಕಂಟಕರಾಗಿದ್ದರು. ದೇವಾದಿಗಳು ಯಾರೂ ಇವರನ್ನು ಎದುರಿಸಲು ಸಾಧ್ಯವಾಗದೆ, ಇವರ ಬಾಧೆಯನ್ನು ತಾಳಲಾರದೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಪರಮೇಶ್ವರನನ್ನು ಶರಣು ಹೊಕ್ಕರು. ದಯಾಮಯನಾದ ಶ್ರೀ ಪರಮೇಶ್ವರನು ಆಗ ಭೂಮಿಯನ್ನು ರಥವನ್ನಾಗಿಯೂ, ಸೂರ್ಯ ಚಂದ್ರರನ್ನು ರಥದ ಚಕ್ರಗಳನ್ನಾಗಿಯೂ, ನಾಲ್ಕು ವೇದಗಳನ್ನು ಕುದುರೆಗಳನ್ನಾಗಿಯೂ ಬ್ರಹ್ಮನನ್ನು ಸಾರಥಿಯನ್ನಾಗಿಯೂ, ಮೇರು ಪರ್ವತವನ್ನು ಧನುಸ್ಸನ್ನಾಗಿಯೂ, ವಾಸುಕಿಯನ್ನು ಬಿಲ್ಲಿನ ಹಗ್ಗವನ್ನಾಗಿಯೂ, ವಿಷ್ಣುವನ್ನು ಬಾಣವನ್ನಾಗಿಯೂ ಮಾಡಿಕೊಂಡು ಆ ತ್ರಿಪುರಗಳನ್ನೂ ತ್ರಿಪುರಾಸುರರನ್ನು ಒಂದೇ ಬಾಣದಿಂದ ಧ್ವಂಸ ಮಾಡಿ, ಲೋಕವನ್ನೆಲ್ಲ ರಕ್ಷಿಸಿದನು. ಈ ಮಹಿಮೆಯು ಶ್ರುತಿ ಸ್ಮೃತಿ ಪುರಾಣಗಳಲ್ಲಿ ವಿಸ್ತಾರವಾಗಿ ನಿರೂಪಿತವಾಗಿದೆ. ಇದನ್ನು ಮುಂದಿನ ಪದ್ಯದಲ್ಲಿ ವರ್ಣಿಸುತ್ತಾರೆ.

ಕ್ಷೋಣೀ ಯಸ್ಯ ರಥೋ ರಥಾಂಗಯುಗಲಂ ಚಂದ್ರಾರ್ಕ ಬಿಂಬ ದ್ವಯಂ ಕೋದಂಡಃ ಕನಕಾಚಲೋ ಹರಿರಭೂದ್ಬಾಣೋ ವಿಧಿಃ ಸಾರಥಿಃ। ತೂಣೀರೋ ಜಲಧಿರ್ಹಯಾಃ ಶ್ರುತಿಚಯೋ ಮೌರ್ವೀ ಭುಜಂಗಾಧಿಪಃ ತಸ್ಮಿನ್ಮೇ ಹೃದಯಂ ಸುಖೇನ ರಮತಾಂ ಸಾಂಬೇ ಪರಬ್ರಹ್ಮಣಿ ॥೩॥

ತ್ರಿಪುರ ಸಂಹಾರದಲ್ಲಿ **ಯಸ್ಯ** – ಯಾವ ಪರಮೇಶ್ವರನಿಗೆ ; **ಕ್ಷೋಣೀ ರಥಃ ಅಭೂತ್** - ಭೂಮಿಯು ರಥವಾಯಿತೋ ; **ಚಂದಾರ್ಕ ಬಿಂಬ ದ್ವಯಂ ರಥಾಂಗಯುಗಲಂ** – ಸೂರ್ಯ ಚಂದ್ರರ ಎರಡು ಬಿಂಬ (ಮಂಡಲ) ಗಳು ರಥದ ಎರಡು ಚಕ್ರಗಳಾದುವೋ ; **ಕನಕಾಚಲಃ ಕೋದಂಡಃ** — ಸುವರ್ಣ ಪರ್ವತವಾದ ಮೇರುವು ಬಿಲ್ಲು ಆಯಿತೋ ; **ಹರಿಃ ಬಾಣಃ** — ಶ್ರೀ ವಿಷ್ಣುವು ಬಾಣವಾದನೋ ; **ವಿಧಿಃ ಸಾರಥಿಃ** — ಬ್ರಹ್ಮನು ಸಾರಥಿಯಾದನೋ ; **ಜಲಧಿಃ ತೂಣೀರಃ** — ಸಮುದ್ರವು ಬತ್ತಳಿಕೆಯಾಯಿತೋ, **ಶ್ರುತಿಚಯಃ ಹಯಾಃ**–ವೇದ ಸಮೂಹವು ಕುದುರೆಗಳಾದುವೋ ; **ಭುಜಂಗಾಧಿಪಃ ಮೌರ್ವೀ** — ಸರ್ಪರಾಜನಾದ ವಾಸುಕಿಯು ಬಿಲ್ಲಿನ ಹಗ್ಗವಾದನೋ ; **ತಸ್ಮಿನ್** – ಇಂಥ ಸರ್ವಾಧಿಪತಿಯಾದ, **ಸಾಂಬೇ ಪರಬ್ರಹ್ಮಣಿ** – ಪರಬ್ರಹ್ಮಸ್ವರೂಪನಾದ ಶ್ರೀ ಸಾಂಬ ಸದಾಶಿವ ಪರಮೇಶ್ವರನಲ್ಲಿ ; **ಮೇ ಹೃದಯಂ** – ನನ್ನ ಮನಸ್ಸು ; **ಸುಖೇನ ರಮತಾಂ** — ಅನಾಯಾಸವಾಗಿ ವಿಹರಿಸುತ್ತಿರಲಿ — ॥೩॥

Sri Vidyabharathi Book Centre, Sringeri

CC-O. In Public Domain. Digitized by eGangotri

ಯೇನಾಪಾದಿತಮಂಗಜಾಂಗ ಭಸಿತಂ ದಿವ್ಯಾಂಗರಾಗೈಃ ಸಮಂ
ಯೇನ ಸ್ವೀಕೃತಮಬ್ಜ ಸಂಭವಶಿರಃ ಸೌವರ್ಣಪಾತ್ರೈಃ ಸಮಂ ।
ಯೇನಾಂಗೀಕೃತ ಮಚ್ಯುತಸ್ಯ ನಯನಂ ಪೂಜಾರವಿಂದೈಃ ಸಮಂ
ತಸ್ಮಿನ್ಮೇ ಹೃದಯಂ ಸುಖೇನ ರಮತಾಂ ಸಾಂಬೇ ಪರಬ್ರಹ್ಮಣಿ ॥೪॥

ಯೇನ ಅಪಾದಿತಂ ಅಂಗಜಾಂಗ ಭಸಿತಂ—ಯಾರಿಂದ ಬೂದಿಯಾಗಿ ಮಾಡಲ್ಪಟ್ಟ ಕಾಮನ ದೇಹದ ಬೂದಿಯು, **ದಿವ್ಯಾಂಗರಾಗೈಃ ಸಮಂ**—ಅತ್ಯಂತ ಶ್ರೇಷ್ಠಗಳಾದ ಅಂಗರಾಗ (ದೇಹಕ್ಕೆ ಸೊಬಗನ್ನು ಉಂಟುಮಾಡುವಂಥ ಪರಿಮಳದ್ರವ್ಯ) ಗಳಿಗೆ ಸಮವಾಯಿತೋ; **ಯೇನ ಸ್ವೀಕೃತಂ ಅಬ್ಜ ಸಂಭವ ಶಿರಃ**—ಯಾರು ಸ್ವೀಕರಿಸಿದ ಬ್ರಹ್ಮದೇವನ ತಲೆಯೋಡು; **ಸೌವರ್ಣ ಪಾತ್ರೈಃ ಸಮಂ**....ಚಿನ್ನದಿಂದ ಮಾಡಿದ ಪಾತ್ರೆಗಳಿಗೆ ಸಮವಾಯಿತೋ; **ಯೇನ ಅಂಗೀಕೃತಂ ಅಚ್ಯುತಸ್ಯನಯನಂ**—ಯಾರು ಅಂಗೀಕರಿಸಿದ ವಿಷ್ಣುವಿನ ನೇತ್ರವು; **ಪೂಜಾರವಿಂದೈಃ ಸಮಂ**__ಶ್ರೀ ಶಿವನ ಆರಾಧನೆಗೆ ಯೋಗ್ಯವಾದ ಕಮಲ ಪುಷ್ಪಗಳಿಗೆ ಸಮವಾಯಿತೋ, **ತಸ್ಮಿನ್ ಸಾಂಬೇ ಪರಬ್ರಹ್ಮಣಿ ಮೇ ಹೃದಯಂ ಸುಖೇನ ರಮತಾಂ** ॥ ೪ ॥

ದಕ್ಷಬ್ರಹ್ಮನು ತನ್ನ ಮಗಳಾದ ದಾಕ್ಷಾಯಣಿಯನ್ನು ಬ್ರಹ್ಮಾದಿಗಳ ಸಲಹೆಯಂತೆ ಶ್ರೀ ಪರಮೇಶ್ವರನಿಗೆ ಮದುವೆ ಮಾಡಿಕೊಟ್ಟನು. ಕಾರಣಾಂತರಗಳಿಂದ ಶ್ರೀ ಶಿವನ ಮೇಲೆ ದ್ವೇಷವನ್ನು ಹೊಂದಿ, ತಾನು ಮಾಡಿದ ಯಜ್ಞದಲ್ಲಿ ಈಶ್ವರನಿಗೆ ಹವಿಸ್ಸನ್ನು ಕೊಡದೆ ತಿರಸ್ಕರಿಸಿ ನಿಂದಿಸಿದನು. ಪತಿನಿಂದೆಯನ್ನು ಕೇಳಲಾರದೆ ಸತೀ ದೇವಿಯೆಂಬ ಆ ದಾಕ್ಷಾಯಣಿಯು ಯಜ್ಞಕುಂಡದಲ್ಲಿ ದೇಹತ್ಯಾಗ ಮಾಡಿದಳು. ಕುಪಿತನಾದ ಪರಮೇಶ್ವರನು ದಕ್ಷನ ಯಜ್ಞವನ್ನು ಧ್ವಂಸಮಾಡಿ ಹಿಮವತ್ಪರ್ವತದಲ್ಲಿ ತಪೋ ನಿರತನಾದನು. ಶ್ರೀ ಸತೀ ದೇವಿಯು ಹಿಮವಂತನ ಕುವರಿಯಾಗಿ ಜನಿಸಿ, ಈಶ್ವರನನ್ನು ಒಲಿಸುವುದಕ್ಕಾಗಿ ತಪೋನಿರತನಾಗಿದ್ದ ಅವನ ಸೇವೆಯಲ್ಲಿ ನಿರತಳಾಗಿದ್ದಳು. ಈಶ್ವರನ ಮಗನಿಂದಲ್ಲವೆ ಬೇರೆಯಾರಿಂದಲೂ ತನಗೆ ಮರಣವಾಗಬಾರದೆಂದು ಬ್ರಹ್ಮದೇವನಿಂದ ವರವನ್ನು ಪಡೆದು ಲೋಕ ಕಂಟಕನಾಗಿದ್ದ ತಾರಕಾಸುರನ ಬಾಧೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯನ್ನು ತಾಳಲಾರದೆ ದೇವತೆಗಳು ಬ್ರಹ್ಮದೇವನಿಗೆ ಮೊರೆಯಿಟ್ಟರು. ಆಗ ಬ್ರಹ್ಮದೇವನು ತಪೋನಿರತನಾಗಿದ್ದು ಪಾರ್ವತೀ ದೇವಿಯಿಂದ ಸೇವಿತನಾಗಿರುವ ಪರಶಿವನು ಪಾರ್ವತಿಗೆ ಒಲಿದು ವಿವಾಹಿತನಾಗುವಂತೆ ಮಾಡಿರೆಂದು ಸಲಹೆಯಿತ್ತನು. ಆಗ ದೇವತೆಗಳೆಲ್ಲರೂ ಸೇರಿ ಈ ಕಾರ್ಯದಲ್ಲಿ ಕಾಮನೇ ಸಮರ್ಥನೆಂದು ನಿಶ್ಚಯಿಸಿ ಅವನನ್ನು ಕಳುಹಿಸಿಕೊಟ್ಟರು. ಮನ್ಮಥನು ತಪಸ್ಥಿತನಾಗಿದ್ದ ಪರಶಿವನನ್ನು ಕಂಡೊಡನೆಯೇ ನಿರ್ವೀರ್ಯನಾದರೂ ಅಷ್ಟರಲ್ಲಿಯೇ ಈಶ್ವರನ ಸಮೀಪಕ್ಕೆ ಬಂದ ಪಾರ್ವತಿಯನ್ನು ಕಂಡು ಸ್ವಲ್ಪ ಚೇತರಿಸಿಕೊಂಡು, ಮೋಹನಾಸ್ತ್ರವನ್ನು ಈಶ್ವರನ ಮೇಲೆ ಪ್ರಯೋಗ ಮಾಡಿದನು. ಇದರಿಂದ ಬಹಿರ್ಮುಖನಾದ ಪರಶಿವನು ಅಗ್ನಿ ರೂಪವಾದ ತನ್ನ ಮೂರನೆಯ ಫಾಲನೇತ್ರದಿಂದ ಮನ್ಮಥನನ್ನು ಕ್ಷಣಮಾತ್ರದಲ್ಲಿ ಸುಟ್ಟು ಬೂದಿ ಮಾಡಿದನು. ಅನಂತರ ದೇವತೆಗಳ ಪ್ರಾರ್ಥನೆಯಂತೆ ಆ ಬೂದಿಯನ್ನು ತನ್ನ ಮೈಯಲ್ಲೆಲ್ಲ ಹಚ್ಚಿಕೊಂಡು ಮನ್ಮಥನನ್ನು ಅನುಗ್ರಹಿಸಿದನು. ಹೀಗೆ ಅತ್ಯಂತ ಹೇಯವಾದ ದೇಹದ ಸುಟ್ಟ ಬೂದಿಯೂ ಈಶ್ವರನಿಂದ ಸ್ವೀಕೃತವಾಗಿ ದಿವ್ಯಾಂಗರಾಗಕ್ಕೆ ಸಮವಾಯಿತು.

ಪಂಚ ಮುಖನಾದ ಈಶ್ವರನಂತೆಯೇ ಬ್ರಹ್ಮದೇವನಿಗೂ ಐದು ಮುಖಗಳಿದ್ದುವು. ಇದರಿಂದ ಗರ್ವಿತನಾದ ಬ್ರಹ್ಮ ದೇವನು ತಾನೇ ಈಶ್ವರನೆಂದು ಹೇಳಿ ಕೊಳ್ಳಲಾರಂಭಿಸಿದನು. ಇವನ ಅಹಂಕಾರವನ್ನು ಮುರಿಯುತ್ತ ಶ್ರೀ ಪರಮೇಶ್ವರನು ಅವನ ಒಂದು ತಲೆಯನ್ನು ಉಗುರಿನಿಂದ ಚಿವುಟಿ ಕತ್ತರಿಸಿ ಹಾಕಿದನು. ಆಗ ಶರಣಾಗತನಾದ ಬ್ರಹ್ಮನ ಪ್ರಾರ್ಥನೆಯಂತೆ ಅವನ ಆ ತಲೆಯೋಡನ್ನು ಕೈಯಲ್ಲಿ ಧರಿಸಿಕೊಂಡು ಭಿಕ್ಷಾಟನೆಯ ನಟನೆಯನ್ನು ನಟಿಸಿದನು. ಸರ್ವೇಶ್ವರನಾದ ಪರಮೇಶ್ವರನು ಸುವರ್ಣ ಪಾತ್ರೆಯನ್ನು ಧರಿಸುವುದು ಉಚಿತವು. ಪರಮೇಶ್ವರನು ಧರಿಸಿದ್ದರಿಂದ ಬ್ರಹ್ಮನ ಆ ಶಿರಸ್ಸು ಹೀಗೆ ಸುವರ್ಣ ಪಾತ್ರೆಗೆ ಸಮವಾಯಿತು.

ಶ್ರೀ ಮಹಾವಿಷ್ಣುವು ಪರಶಿವನಲ್ಲಿ ಅತಿಶಯವಾದ ಭಕ್ತಿಯನ್ನು ಹೊಂದಿ, ಸಹಸ್ರಕಮಲಗಳಿಂದ ಈಶ್ವರನನ್ನು ಪೂಜಿಸಲು ಉದ್ದೇಶಿಸಿ ಸಾವಿರ ಕಮಲಗಳನ್ನು ಸಂಪಾದಿಸಿಕೊಂಡು ಸಿದ್ಧಪಡಿಸಿಕೊಂಡು, ಅರ್ಚನೆಗೆ ಆರಂಭಿಸಿದನು. ಪರಶಿವನು ಅವನ ಭಕ್ತಿಯನ್ನು ಪರೀಕ್ಷಿಸುವ ನೆಪದಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ಕಮಲ ಪುಷ್ಪವನ್ನು ಅಪಹರಿಸಿದನು. ಅರ್ಚನೆ ಮಾಡುತ್ತ ಬರುವಲ್ಲಿ ಒಂದು ಪುಷ್ಪವು ಕಡಿಮೆಯಾದುದನ್ನು ಕಂಡು, ಶ್ರೀ ಮಹಾವಿಷ್ಣುವು ಅರ್ಚನೆಯನ್ನು ಬಿಟ್ಟು ಮಧ್ಯದಲ್ಲಿ ಎದ್ದು ಹೋಗುವುದು ತಪ್ಪಾದ್ದರಿಂದ, ಏನುಮಾಡಬೇಕೆಂದು ಚಿಂತಾಕ್ರಾಂತನಾದನು. ಅನಂತರ ಪರ್ಯಾಲೋಚಿಸಿ ತನ್ನನ್ನು ಪುಂಡರೀಕಾಕ್ಷ (ಕಮಲನಯನ) ನೆಂದು ಎಲ್ಲರೂ ಕರೆಯುವುದನ್ನು ಗಮನಿಸಿ, ತನ್ನ ಕಣ್ಣನ್ನೇ ಕಿತ್ತು ಭಕ್ತ್ಯತಿಶಯದಿಂದ ಶ್ರೀ ಪರಶಿವನ ಪಾದಾರವಿಂದಗಳನ್ನು ಆರಾಧಿಸಿ ಕೃತಾರ್ಥನಾದನು. ದೇಹದ ಅವಯವವು, ಅದರಲ್ಲಿಯೂ ದೇಹದಿಂದ ಬೇರೆಯಾದದ್ದು, ಅತ್ಯಂತ ಮಲಿನವೂ ಅಶುಚಿಯೂ ಆದುದು. ಆದರೂ, ಶ್ರೀ ಪರಶಿವನಿಂದ ಸ್ವೀಕೃತವಾದ ಕಾರಣದಿಂದ ಶ್ರೀ ವಿಷ್ಣುವಿನ ನೇತ್ರ ಕಮಲವೂ ಪೂಜೆಗೆ ಯೋಗ್ಯವಾದ ಕಮಲಪುಷ್ಪಕ್ಕೆ ಸಮಾನವಾಯಿತು. ಶ್ರೀ ಪರಮೇಶ್ವರನು ಪರಿಗ್ರಹಿಸಿದುದೆಲ್ಲ ಪರಮ ಪವಿತ್ರವೂ ಪರಮ ಶ್ರೇಷ್ಟವೂ ಆಗುವುದೆಂದು ಭಾವವು—೪.

ಗೋವಿಂದಾಧಿಕಂ ನ ದೈವತಮಿತಿ ಪ್ರೋಚ್ಚಾರ್ಯ ಹಸ್ತಾವುಭೌ ಉದ್ಧೃತ್ಯಾಥ ಶಿವಸ್ಯ ಸನ್ನಿಧಿಗತೋ ವ್ಯಾಸೋ ಮುನೀನಾಂ ವರಃ । ಯಸ್ಯ ಸ್ತಂಭಿತಪಾಣಿರಾನತಿಕೃತಾ ನಂದೀಶ್ವರೇಣಾ ಭವತ್ ತಸ್ಮಿನ್ಮೇ ಹೃದಯಂ ಸುಖೇನ ರಮತಾಂ ಸಾಂಬೇ ಪರಬ್ರಹ್ಮಣಿ ॥ ೫ ॥

ಹಸ್ತೌ ಉಭೌ ಉದ್ಧೃತ್ಯ—ಎರಡು ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ; **ಗೋವಿಂದಾತ್ ಅಧಿಕಂ ದೈವತಂ ನ**—ವಿಷ್ಣುವೇ ಸರ್ವೋತ್ತಮನು ಆವನಿಗಿಂತ ಹೆಚ್ಚಿನ ದೇವರುಯಾರೂ ಇಲ್ಲ ಎಂದು, **ಪ್ರೋಚ್ಚಾರ್ಯ**-ಗಟ್ಟಿಯಾಗಿ ಹೇಳುತ್ತಾ, **ಶಿವಸ್ಯ ಸನ್ನಿಧಿಗತಃ ಮುನೀನಾಂ ವರಃ ವ್ಯಾಸಃ**—ಮುನಿಶ್ರೇಷ್ಟರಾದ ವ್ಯಾಸರು ಈಶ್ವರನ ಸಮೀಪಕ್ಕೆ ಬಂದರು; ಆಗ **ನಂದಿಕೇಶ್ವರೇಣ ತಸ್ಯ ಸ್ತಂಭಿತಪಾಣಿಃ ಆನತಿ ಕೃತಾ ಅಭವತ್**— ನಂದಿಕೇಶ್ವರನಿಂದ ಆ ವ್ಯಾಸರ ಕೈಯು ಹಾಗೆಯೇ ತಡೆಗಟ್ಟಲ್ಪಟ್ಟದ್ದಾಯಿತು. ಆಮೇಲೆ ಕ್ಷಮಾಪಣೆ ಕೇಳಿಕೊಳ್ಳಲಾಗಿ ಅವರ ಕೈಯು ಇಳಿಸಲ್ಪಟ್ಟಿತು. ಇದರಿಂದ ಶ್ರೀಪರಮೇಶ್ವರನೇ ಸರ್ವ ದೇವೋತ್ತಮನೆಂದು ಸ್ಥಿರಪಟ್ಟದ್ದಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ತಸ್ಮಿನ್ಮೇ ಹೃದಯಂ ಸುಖೇನ ರಮತಾಂ ಸಾಂಬೇ ಪರಬ್ರಹ್ಮಣಿ:— ಇಂಥ ಸರ್ವೋತ್ತಮನಾದ ಪರಬ್ರಹ್ಮ ಸ್ವರೂಪನಾದ ಶ್ರೀ ಸಾಂಬ ಸದಾಶಿವನಲ್ಲಿಯೇ ನನ್ನ ಮನಸ್ಸು ನಿತ್ಯವೂ ಭಕ್ತಿಯಿಂದ ಆಸಕ್ತವಾಗಿದೆ.—೫

**ಆಕಾಶಶ್ಚಿಕುರಾಯತೇ ದಶದಿಶಾ ಭೋಗೋ ದುಕೂಲಾಯತೇ
ಶೀತಾಂಶುಃ ಪ್ರಸವಾಯತೇ ಸ್ಥಿರತರಾನಂದಃ ಸ್ವರೂಪಾಯತೇ ।
ವೇದಾಂತೋ ನಿಲಯಾಯತೇ ಸುವಿನಯೋ ಯಸ್ಯ ಸ್ವಭಾವಾಯತೇ
ತಸ್ಮಿನ್ಮೇ ಹೃದಯಂ ಸುಖೇನ ರಮತಾಂ ಸಾಂಬೇ ಪರಬ್ರಹ್ಮಣಿ ॥೬॥**

ಪರಬ್ರಹ್ಮ ಸ್ವರೂಪನಾದ ಪರಮಾತ್ಮನು ನಿತ್ಯನಿರತಿಶಯಾದ್ವಿತೀಯ–ಸಚ್ಚಿದಾನಂದ ಸ್ವರೂಪನಾಗಿರುತ್ತ, ದೇಶಕಾಲವಸ್ತು ಪರಿಚ್ಛೇದ ರಹಿತನಾಗಿ ಅಪರಿಚ್ಛಿನ್ನನಾಗಿದ್ದಾನೆ. ಮಾಯೋಪಾಧಿಕನಾಗಿ ಸಗುಣ ಬ್ರಹ್ಮಸ್ವರೂಪನಾದ ಶ್ರೀ ಪರಮೇಶ್ವರನೂ ಸರ್ವಜಗತ್ಕಾರಣನಾಗಿ ಸರ್ವೇಶ್ವರನೂ, ಸರ್ವಾಂತರ್ಯಾಮಿಯೂ, ಸರ್ವ ವ್ಯಾಪಕನೂ, ಸರ್ವಾತ್ಮಕನೂ ಆಗಿ ಅಪರಿಚ್ಛಿನ್ನ ಸ್ವರೂಪನೇ ಆಗಿರುತ್ತಾನೆ. ಆದುದರಿಂದ **ಯಸ್ಯ** –ಯಾವ ಈಶ್ವರನಿಗೆ; **ಆಕಾಶಃ ಚಿಕುರಾಯತೇ**– ವ್ಯಾಪಕವಾದ ಆಕಾಶವು ತಲೆಯ ಮೇಲೆ ಓಲಾಡುವ ಮುಂಗುರುಳಾಗಿದೆ; **ದಶದಿಶಾಭೋಗಃ ದುಕೂಲಾಯತೇ**– ಅನಂತವಾದ ಹತ್ತು ದಿಕ್ಕುಗಳ ವಿಶಾಲತೆಯು ವಸ್ತ್ರಾಲಂಕಾರವಾಗಿದೆ; **ಶೀತಾಂಶುಃ ಪ್ರಸವಾಯತೇ** - ಅಂತರಿಕ್ಷಕ್ಕೆ ಅಲಂಕಾರನಾಗಿರುವ ಚಂದ್ರನು ಶಿರೋಭೂಷಣವಾದ ಪುಷ್ಪವಾಗಿದೆ; **ಸ್ಥಿರತರಾನಂದಃ ಸ್ವರೂಪಾಯತೇ**– ನಿತ್ಯ ನಿರತಿಶಯವಾದ ಆನಂದವು ಸ್ವರೂಪವಾಗಿದೆ, **ವೇದಾಂತಃ ನಿಲಯಾಯತೇ**– ವೇದಾಂತಗಳೆಂಬ ಉಪನಿಷತ್ತುಗಳು ಮನೆಯಾಗಿವೆ, **ಸುವಿನಯಃ ಸ್ವಭಾವಾಯತೇ** ವಿನಯಾದಿ ಗುಣ ಸಮೂಹವು ಸ್ವಭಾವವಾಗಿದೆ. ; ಇಂಥ ಲೋಕೋತ್ತರ ಗುಣಗಣ ಮಂಡಿತನಾಗಿರುವ **ತಸ್ಮಿನ್ ಸಾಂಬೇ ಪರಬ್ರಹ್ಮಣಿ ಮೇ ಹೃದಯಂ ಸುಖೇನ ರಮತಾಂ**- ಸಾಂಬ ಪರಬ್ರಹ್ಮನಲ್ಲಿ ನನ್ನ ಮನಸ್ಸು ನಿರಂತರವೂ ಕ್ರೀಡಿಸುತ್ತಿರಲಿ.—೬

ನಾಲ್ಕನೆಯ ಪದ್ಯದ ಮೂರನೆಯ ಪಾದದಲ್ಲಿ ಸೂಚಿತವಾಗಿರುವ ಅಂಶವನ್ನು ವಿಸ್ತರಿಸಿ ಹೇಳುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷ್ಣುರ್ಯಸ್ಯ ಸಹಸ್ರನಾಮನಿಯಮಾದಂಭೋರುಹಾಣ್ಯರ್ಚಯನ್,
ಏಕೋನೇಽಪಚಿತೇಷು ನೇತ್ರಕಮಲಂ ನೈಜಂ ಪದಾಬ್ಜದ್ವಯೋಃ।
ಸಂಪೂಜ್ಯಾಸುರಸಂಹತಿಂ ವಿದಲಯಂಸ್ತ್ರೈಲೋಕ್ಯನಾಥೋಽಭವತ್,
ತಸ್ಮಿನ್ಮೇ ಹೃದಯಂ ಸುಖೇನ ರಮತಾಂ ಸಾಂಬೇ ಪರಬ್ರಹ್ಮಣಿ ॥೭॥

ವಿಷ್ಣುಃ— ಶ್ರೀ ಮಹಾ ವಿಷ್ಣುವು; **ಯಸ್ಯ ಸಹಸ್ರನಾಮನಿಯಮಾತ್ ಅಂಭೋರುಹಾಣಿ ಅರ್ಚಯನ್**— ಪ್ರತಿದಿನವೂ ಶ್ರೀ ಶಿವ ಸಹಸ್ರ ನಾಮದಿಂದ ಶ್ರೀ ಪರಮೇಶ್ವರನ ಪಾದ ಪದ್ಮಗಳನ್ನು ಸಹಸ್ರ ಕಮಲ ಪುಷ್ಪಗಳಿಂದ ಪೂಜಿಸುತ್ತೇನೆ ಎಂದು ವ್ರತನಿಯಮವನ್ನು ಮಾಡಿಕೊಂಡು ಬಹುಕಾಲ ಅರ್ಚನೆ ಮಾಡುತ್ತಿರಲು; **ಅಪಚಿತೇಷು ಏಕೋನೇ**— ಒಂದು ದಿನ ಪೂಜೆಗಾಗಿ ಕೊಯ್ದು ತಂದಿದ್ದ ಕಮಲಗಳಲ್ಲಿ ಒಂದು ಕಮಲವು ಕಡಿಮೆಯಾಗಿರಲು; **ನೈಜಂ ನೇತ್ರಕಮಲಂ ಪದಾಬ್ಜದ್ವಯೋಃ ಸಂಪೂಜ್ಯ**— ಭಕ್ತ್ಯತಿಶಯದಿಂದ ತನ್ನ ನೇತ್ರ ಕಮಲವನ್ನೇ ಪರಶಿವನ ಪಾದ ಕಮಲಗಳಲ್ಲಿ ಪೂಜೆ ಮಾಡಿ; ಶ್ರೀ ಪರಮೇಶ್ವರನು ಇವನ ಭಕ್ತಿಗೆ ಮೆಚ್ಚಿ ಅನುಗ್ರಹಿಸಿದ ಚಕ್ರಾಯುಧದಿಂದ; **ಅಸುರಸಂಹತಿಂ ವಿದಲಯನ್**— ಅಸುರ ಸಮೂಹವನ್ನು ನಾಶ ಮಾಡುತ್ತ; **ತ್ರೈಲೋಕ್ಯಪಾಲಃ ಅಭವತ್**— ಮೂರುಲೋಕಗಳ ರಕ್ಷಕ ಪದವಿಯನ್ನು ಪಡೆದು ಬೆಳಗಿದನೋ; **ತಸ್ಮಿನ್ ಮೇ ಹೃದಯಂ ಸುಖೇನ ರಮತಾಂ ಸಾಂಬೇ ಪರಬ್ರಹ್ಮಣಿ**— ಅಂಥ ಸಾಂಬ ಪರಬ್ರಹ್ಮನಲ್ಲಿಯೇ ನನ್ನ ಮನಸ್ಸು ಆನಂದಿಸುತ್ತಿರಲಿ—೭

ಶೌರಿಂ ಸತ್ಯಗಿರಂ ವರಾಹವಪುಷಂ ಪಾದಾಂಬುಜಾದರ್ಶನೇ
ಚಕ್ರೇ ಯೋ ದಯಯಾ ಸಮಸ್ತಜಗತಾಂ ನಾಥಂ ಶಿರೋದರ್ಶನೇ।
ಮಿಥ್ಯಾವಾಚಮಪೂಜ್ಯಮೇವ ಸತತಂ ಹಂಸಸ್ವರೂಪಂ ವಿಧಿಂ
ತಸ್ಮಿನ್ಮೇ ಹೃದಯಂ ಸುಖೇನ ರಮತಾಂ ಸಾಂಬೇ ಪರಬ್ರಹ್ಮಣಿ ॥೮॥

ಪಾದಾಂಬುಜಾದರ್ಶನೇ ಸತ್ಯಗಿರಂ ಶೌರಿಂ — ತನ್ನ ಪಾದಕಮಲಗಳನ್ನು ಕಾಣಲಾರದೆ ಸತ್ಯವನ್ನು ಹೇಳಿದ ಶ್ರೀ ವಿಷ್ಣುವನ್ನು ; **ವರಾಹ-ವಪುಷಂ**— ಹಂದಿಯ ರೂಪದಲ್ಲಿದ್ದವನನ್ನೂ ಸಹ ; **ಯಃ** - ಯಾವ ಪರಮೇಶ್ವರನು ; **ದಯಯಾ ಸಮಸ್ತಜಗತಾಂ ನಾಥಂ ಚಕ್ರೇ**-ದಯೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಿಂದಸರ್ವಲೋಕಕ್ಕೂ ಅಧಿಪತಿಯನ್ನಾಗಿ ಮಾಡಿದನೋ ; **ಶಿರೋದರ್ಶನೇ ಮಿಥ್ಯಾವಾಚಂ ವಿಧಿಂ**- ತಲೆಯನ್ನು ಕಾಣುವುದರಲ್ಲಿ ಸುಳ್ಳುಹೇಳಿದ ಬ್ರಹ್ಮನನ್ನು ; **ಹಂಸಸ್ವರೂಪಂ** — ಹಂಸದ ರೂಪದಲ್ಲಿದ್ದವನನ್ನೂ ಸಹ ; **ಸತತಂ ಅಪೂಜ್ಯಂಏವ** —ಯಾವಾಗಲೂ ಪೂಜೆಗೆ ಅರ್ಹನಲ್ಲವೆಂದೇ **ಚಕ್ರೇ**—ಮಾಡಿದನೋ ; **ತಸ್ಮಿನ್ ಮೇ ಹೃದಯಂ ಸುಖೇನ ರಮತಾಂ ಸಾಂಬೇ ಪರಬ್ರಹ್ಮಣಿ** ॥

ಬ್ರಹ್ಮನೂ ವಿಷ್ಣುವೂ ಒಂದು ಸಮಯದಲ್ಲಿ ತಾನೇ ಜಗದಧಿಪತಿಯೆಂದು ಜಗಳವಾಡುತ್ತ ಯುದ್ಧಕ್ಕೆ ಸಿದ್ಧರಾದರು. ಇವರ ದುರಹಂಕಾರವನ್ನು ಮುರಿದು ಅನುಗ್ರಹಿಸುವ ಉದ್ದೇಶದಿಂದ ಶ್ರೀ ಪರಮೇಶ್ವರನು ದಿವ್ಯವಾದ ಜ್ಯೋತಿರ್ಲಿಂಗಾಕಾರವಾಗಿ ಇವರೀರ್ವರ ಮಧ್ಯದಲ್ಲಿ ಆವಿರ್ಭವಿಸಿದನು. ಇದೇನೆಂದು ಆಶ್ಚರ್ಯಚಕಿತರಾಗಿ ಇವರು ನಿಂತಿರುವಾಗ – ಈ ಲಿಂಗದ ಆದ್ಯಂತಗಳನ್ನು ಕಂಡು ಹಿಡಿದವರೇ ಶ್ರೇಷ್ಠರು - ಎಂದು ಅಶರೀರವಾಣಿಯು ಕೇಳಿಬಂತು. ಆಗ ಬ್ರಹ್ಮನು ತಾನು ಇದರ ಶಿರೋಭಾಗವನ್ನು ನೋಡಿ ಬರುವುದಾಗಿ ಹಂಸದರೂಪವನ್ನು ತಾಳಿ ಮೇಲಕ್ಕೆ ಹಾರಿ ಹೊರಟನು. ವಿಷ್ಣುವು ವರಾಹರೂಪವನ್ನುಧರಿಸಿ ಇದರ ತಳವನ್ನು ಕಾಣಲು ಭೂಮಿಯನ್ನು ಭೇದಿಸುತ್ತ ಹೊರಟನು. ಬಹು ಕಾಲದ ಅನಂತರ ವಿಷ್ಣುವು ಆ ಲಿಂಗದ ಆದಿಯನ್ನು ಕಾಣಲು ಶಕ್ತನಾಗದೆ ಹಿಂತಿರುಗಿ ಮೇಲಕ್ಕೆ ಬಂದನು. ಬ್ರಹ್ಮನುಇದರ ತುದಿಯನ್ನು ಕಾಣಲಾರದೆ ಹಿಂತಿರುಗಿ ಬರುವಷ್ಟರಲ್ಲಿ, ಲಿಂಗದ ಮೇಲೆ ಇದ್ದ ಕೇದಗೆ ಪುಷ್ಪವೊಂದು ಜಾರಿ ಬೀಳುತ್ತಿದ್ದುದನ್ನು ಕಂಡು ಅದನ್ನು ಪ್ರಶ್ನೆಮಾಡಿದನು. ತಾನು ಈಶ್ವರನ ತಲೆಯಿಂದ ಬಂದುದಾಗಿ ಹೇಳಲು, ಬ್ರಹ್ಮನು– ಹಾಗಾದರೆ ನಾನು ಈಶ್ವರನ ಶಿರಸ್ಸನ್ನು ನೋಡಿ ಬಂದೆನೆಂಬಲ್ಲಿ ನೀನು ಸಾಕ್ಷಿಯಾಗು– ಎಂದು ಅದನ್ನು ಒಪ್ಪಿಸಿಕೊಂಡು ಅದರೊಡನೆ ಕೆಳಕ್ಕಿಳಿದು ಬಂದನು. ಆಗ ವಿಷ್ಣುವನ್ನು ಕಂಡು ತಾನು ಲಿಂಗದ ತುದಿಯನ್ನು ನೋಡಿ ಬಂದಿರುವುದಾಗಿಯೂ, ಇದರಲ್ಲಿ ಈ ಕೇದಗೆಯೇ ಸಾಕ್ಷಿಯೆಂದೂ ಹೇಳಿದನು. ವಿಷ್ಣುವು ಇದನ್ನು ನಂಬಿಕೊಂಡು ಬ್ರಹ್ಮನು ತನಗಿಂತಲೂ ಶ್ರೇಷ್ಠನೆಂದು ಒಪ್ಪಿಕೊಂಡನು. ಇಷ್ಟರಲ್ಲಿ ಶ್ರೀ ಪರಮೇಶ್ವರನು ಪ್ರತ್ಯಕ್ಷನಾಗಿ – ಲಿಂಗದ ಪಾದವನ್ನು ಕಾಣದೆ, ಕಾಣಲಿಲ್ಲವೆಂದು ಸತ್ಯವನ್ನು ಹೇಳಿದ ವಿಷ್ಣುವನ್ನು ಜಗ

Sri Vidyabharathi Book Centre, Sringeri

CC-O. In Public Domain. Digitized by eGangotri

ದಧಿಪತಿಯನ್ನಾಗಿ ಮಾಡಿದನು ; ಮತ್ತು ಲಿಂಗದ ಶಿರೋಭಾಗವನ್ನು ಕಾಣ ದಿದ್ದರೂ ಕಂಡೆನೆಂದು ಸುಳ್ಳು ಹೇಳಿದ ಬ್ರಹ್ಮನನ್ನು ಲೋಕದಲ್ಲಿ ಪೂಜಾರ್ಹ ನಲ್ಲದವನನ್ನಾಗಿ ಮಾಡಿದನು. ಹಾಗೆಯೇ ಸುಳ್ಳು ಸಾಕ್ಷ್ಯವನ್ನು ಹೇಳಿದ ಕೇದಗೆ ಪುಷ್ಪವನ್ನು ತನ್ನ ಪೂಜೆಗೆ ಯೋಗ್ಯವಲ್ಲವೆಂದು ಮಾಡಿದನು. ಈ ಈಶ್ವರಾಜ್ಞೆಯು ಇವತ್ತಿಗೂ ನಡೆದು ಬರುತ್ತಿದೆ. ಜ್ಯೋತಿರ್ಲಿಂಗವು ಆವಿರ್ಭಾ ವವಾದ ಆ ದಿವಸವು ಮಹಾ ಶಿವರಾತ್ರಿಯೆಂದು ಇವತ್ತಿಗೂ ಪರಮ ಪವಿತ್ರ ವಾದ ಪರಶಿವಾರಾಧನೆಗೆ ಪ್ರಶಸ್ತವಾಗಿದೆ. ಶಿವರಾತ್ರಿಯ ಒಂದು ದಿವಸ ಮಾತ್ರವೇ ತನಗೆ ಕೇದಗೆಯ ಅರ್ಚನೆಗೆ ಶ್ರೀ ಪರಶಿವನು ಅನಂತರ ಅನುಜ್ಞೆ ಯಿತ್ತಿದ್ದಾನೆ. ಇಂಥ ಪರಮ ಮಹಿಮಶಾಲಿ ಶ್ರೀ ಪರಮೇಶ್ವರನು ಸರ್ವೋ ತ್ತಮೋತ್ತಮನೆಂಬಲ್ಲಿ ಸಂದೇಹವೇನಿದೆ?

ಯಸ್ಯಾಸನ್ ಧರಣೀಜಲಾಗ್ನಿಪವನವ್ಯೋಮಾರ್ಕಚಂದ್ರಾದಯೋ
ವಿಖ್ಯಾತಾಸ್ತನವೋಽಷ್ಟಧಾ ಪರಿಣತಾ ನಾನ್ಯತ್ತತೋ ವರ್ತತೇ।
ಓಂಕಾರಾರ್ಥವಿವೇಚನೀ ಶ್ರುತಿರಿಯಂ ಚಾಚಷ್ಟ ತುರ್ಯಂ ಶಿವಂ
ತಸ್ಮಿನ್ಮೇ ಹೃದಯಂ ಸುಖೇನ ರಮತಾಂ ಸಾಂಬೇ ಪರಬ್ರಹ್ಮಣಿ ॥೯॥

ಧರಣೀಜಲಾಗ್ನಿಪವನವ್ಯೋಮಾರ್ಕಚಂದ್ರಾದಯಃ— ಭೂಮಿ, ನೀರು, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ, ಯಜಮಾನ ಎಂದು; **ಅಷ್ಟಧಾ ಪರಿಣತಾಃ** - ಎಂಟು ವಿಧವಾಗಿ ಪರಿಣಾಮ ಹೊಂದಿರುವ ಇವು; **ಯಸ್ಯ**-ಯಾವ ಪರಮೇಶ್ವರನ; **ತನವಃ**–ದೇಹಗಳಾಗಿವೆಯೋ; **ತತ್ ಅನ್ಯತ್ ನವರ್ತತೇ** - ಇವುಗಳನ್ನು ಬಿಟ್ಟು ಜಗತ್ತಿನಲ್ಲಿ ಬೇರೊಂದು ಏನೂ ಇರುವುದಿಲ್ಲವೋ; ಮತ್ತು **ಓಂಕಾರಾರ್ಥ ವಿವೇಚನೀ ಇಯಂ ಶ್ರುತಿಃ**– ಓಂಕಾರ ರೂಪವಾದ ಪ್ರಣವ ಮಂತ್ರದ ಅರ್ಥವನ್ನು ವಿವರಿಸುವ ಶ್ರುತಿಯು; **ಶಿವಂ ತುರ್ಯಂ ಆಚಷ್ಟ** - ಶ್ರೀ ಪರಶಿವನನ್ನು ತುರೀಯನೆಂದು ಹೇಳು ತ್ತಿದೆಯೋ; **ತಸ್ಮಿನ್ಮೇ ಹೃದಯಂ ಸುಖೇನ ರಮತಾಂ ಸಾಂಬೇ ಪರ ಬ್ರಹ್ಮಣಿ** - ಅಂಥ ಶ್ರುತಿವೇದ್ಯಮಹಿಮಶಾಲಿಯಾದ ಸಾಂಬ ಪರಬ್ರಹ್ಮ ನಲ್ಲಿಯೇ ನನ್ನ ಮನಸ್ಸು ಯಾವಾಗಲೂ ರಮಿಸುತ್ತಿರಲಿ.

ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ– ಎಂಬ ಪಂಚ ಭೂತಗಳು ; ಸೂರ್ಯ ಚಂದ್ರರು ಮತ್ತು ಯಜಮಾನ(ಜೀವ) ಇವರು ಶ್ರೀ ಪರಮೇಶ್ವರನ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಟು ಶರೀರಗಳೆಂದೂ, ಆದ್ದರಿಂದ ಪರಶಿವನು ಅಷ್ಟಮೂರ್ತಿಯೆಂದೂ ಪ್ರಸಿದ್ಧವಾಗಿದೆ. ಈ ಎಂಟು ವಸ್ತುಗಳನ್ನು ಬಿಟ್ಟು ಬೇರೆ ಏನೊಂದೂ ಲೋಕದಲ್ಲಿ ಇರುವುದಿಲ್ಲ. ಆದ್ದರಿಂದ ಶ್ರೀ ಪರಮೇಶ್ವರನು ಸರ್ವಾತ್ಮಕನೆಂದು ವಿಶದವಾಗುವುದು – ಇವನೇ ಸರ್ವೇಶ್ವರನು.

ಓಂಕಾರವು ಅಕಾರ ಉಕಾರ ಮತ್ತು ಮಕಾರಗಳು ಸೇರಿರುವ ಸ್ವರೂಪವು. ಈ ಮೂರು ಅಕ್ಷರಗಳು ಕಾಲತ್ರಯ, ಲೋಕತ್ರಯ, ಜಾಗ್ರದಾದ್ಯವಸ್ಥಾತ್ರಯ, – ಇವೇ ಮುಂತಾಗಿ ಮೂರುಮೂರಾಗಿರುವ ಸರ್ವಜಗದ್ರೂಪವಾಗಿವೆ. ಈ ಓಂಕಾರಕ್ಕೆ ಪರಶಿವನೇ ಅರ್ಥವಾಗಿದ್ದಾನೆ. ಆದ್ದರಿಂದ ಈ ಪರಶಿವನು ಸರ್ವಾತ್ಮಕನಾಗಿದ್ದಾನೆಂದು ಸ್ಪಷ್ಟವು. ಪ್ರಪಂಚವೆಲ್ಲ ಮಾಯಾಮಯವಾದ್ದರಿಂದ, ಪ್ರಪಂಚರೂಪವಾಗಿರುವ ಈಶ್ವರನ ಈ ರೂಪವು ಪಾರಮಾರ್ಥಿಕವಲ್ಲ. ಈ ಪ್ರಪಂಚದಲ್ಲೆಲ್ಲ ಅನುಗತವಾಗಿ, ಇದಕ್ಕೆಲ್ಲ ಸ್ವರೂಪವನ್ನು ಕೊಟ್ಟು, ಇದಕ್ಕೆ ಆಧಾರವಾಗಿದ್ದು ಇದರ ಸಂಬಂಧ ಲೇಶವೂ ಇಲ್ಲದೆ ಕೇವಲಾಖಂಡಸಚ್ಚಿದಾನಂದಸ್ವರೂಪವಾದ ಪರಬ್ರಹ್ಮವೇ ಪಾರಮಾರ್ಥಿಕವಸ್ತುವು. ಇದು ಈ ಮೂರು ರೂಪಕ್ಕೆ ಅತೀತವಾದ್ದರಿಂದ ಪಾರಮಾರ್ಥಿಕವಾದ ಈ ತತ್ವವನ್ನು ತುರೀಯ- ನಾಲ್ಕನೆಯದು - ಎಂದು ಓಂಕಾರದ ಅರ್ಥವನ್ನು ಶ್ರುತಿಯು ವಿವರಿಸಿರುತ್ತದೆ. ಇಂಥ ತುರೀಯ ಸ್ವರೂಪವಾದ ಪರಬ್ರಹ್ಮವೇ ಪರಶಿವನು.

ವಿಷ್ಣು ಬ್ರಹ್ಮಸುರಾಧಿಪ ಪ್ರಭೃತಯಃ ಸರ್ವೇಽಪಿ ದೇವಾ ಯದಾ
ಸಂಭೂತಾಜ್ಜಲಧೇರ್ವಿಷಾತ್ಪರಿಭವಂ ಪ್ರಾಪ್ತಾಸ್ತದಾ ಸತ್ವರಂ ।
ತಾನಾರ್ತಾನ್ ಶರಣಾಗತಾನಿತಿ ಸುರಾನ್ ಯೋಽರಕ್ಷದರ್ಧ ಕ್ಷಣಾತ್
ತಸ್ಮಿನ್ಮೇ ಹೃದಯಂ ಸುಖೇನ ರಮತಾಂ ಸಾಂಬೇ ಪರಬ್ರಹ್ಮಣಿ ॥೧೦॥

ಇತಿ ಶ್ರೀಮಚ್ಛಂಕರ ಭಗವತ್ಪಾದ ವಿರಚಿತಾ ಶ್ರೀ ಸಾಂಬದಶಶ್ಲೋಕೀ ಸಮಾಪ್ತಾ.

ವಿಷ್ಣು ಬ್ರಹ್ಮ ಸುರಾಧಿಪ ಪ್ರಭೃತಯಃ ಸರ್ವೇ ದೇವಾಃ ಅಪಿ– ವಿಷ್ಣು, ಬ್ರಹ್ಮ, ಇಂದ್ರ, ಮುಂತಾದ ಎಲ್ಲ ದೇವತೆಗಳೂ ಸಹ; **ಜಲಧೇಃ**

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಭೂತಾತ್ ವಿಷಾತ್ ಯದಾ ಪರಿಭವಂ ಪ್ರಾಪ್ತಾಃ—ಸಮುದ್ರದಿಂದ ಹುಟ್ಟಿಬಂದ ಭಯಂಕರವಾದ ಕಾಲಕೂಟ ವಿಷದಿಂದತಿರಸ್ಕೃತರಾದರೋ; **ತದಾ ತಾನ್ ಶರಣಾಗತಾನ್ ಸುರಾನ್**-ಆಗ ತನಗೆ ಶರಣಾಗತರಾಗಿ ಬಂದ ಅವರನ್ನು; **ಆರ್ತಾನ್ ಇತಿ**— ದುಃಖಿತರಾಗಿದ್ದಾರೆಂದು ದಯೆಯಿಂದ; **ಅರ್ಧ ಕ್ಷಣಾತ್ ಯಃ ಅರಕ್ಷತ್** --ಒಂದು ಅರ್ಧಕ್ಷಣಮಾತ್ರದಲ್ಲಿಯೇ ಆ ವಿಷವನ್ನು ಕುಡಿದು ಯಾರು ರಕ್ಷಿಸಿದನೋ; **ತಸ್ಮಿನ್ಮೇ ಹೃದಯಂ ಸುಖೇನ ರಮತಾಂ ಸಾಂಬೇ ಪರಬ್ರಹ್ಮಣಿ**–ಮಹಾ-ಆಪತ್ಕಾಲದಲ್ಲಿ ಜಗತ್ತನ್ನು ರಕ್ಷಿಸಲು ಸಮರ್ಥನಾಗಿರುವ ಆ ಪರಮೇಶ್ವರನೇ ಸರ್ವರಿಗೂ ಶರಣನು, ಸರ್ವೇಶ್ವರನು, ಸರ್ವಾಧಿಪತಿಯು, ಸರ್ವೋತ್ತಮನು, ಸರ್ವಸೇವ್ಯನು ; ಇಂಥ ಸಾಂಬ ಪರಶಿವಪರಬ್ರಹ್ಮನನ್ನೇ ನಿರಂತರವೂ ಧ್ಯಾನಿಸಿ ಸೇವಿಸತಕ್ಕದ್ದು.

ಸೃಷ್ಟಿಯ ಆರಂಭದಲ್ಲಿ ದೇವದಾನವರಿಗೆ ಪ್ರಬಲವಾದ ಕದನವು ಉಂಟಾಗಿ ದಾನವರು ದೇವತೆಗಳನ್ನು ಹೊಡೆದಟ್ಟಿ ಸ್ವರ್ಗವನ್ನೂ ಸರ್ವಲೋಕಾಧಿಪತ್ಯವನ್ನೂ ಆಕ್ರಮಿಸಿಕೊಂಡರು- ಆಗ ಶ್ರೀಮಹಾವಿಷ್ಣುವಿನ ಸಲಹೆಯಂತೆ ದೇವತೆಗಳು ದಾನವರೊಡನೆ ಸಂಧಿಮಾಡಿಕೊಂಡು ಕ್ಷೀರಸಮುದ್ರವನ್ನು ಕಡೆದು ಅದರಿಂದ ಅಮೃತವನ್ನು ಸಂಪಾದಿಸಿಕೊಂಡು, ಅದನ್ನು ಸೇವಿಸಿ ಅಜರಾಮರಣರಾಗಿ ಬೆಳಗೋಣ ಎಂದು ಸಂಕಲ್ಪಿಸಿದರು. ಅದರಂತೆ ಮಂದರಪರ್ವತವನ್ನು ಕಡೆಗೋಲನ್ನಾಗಿ ಮಾಡಿಕೊಂಡು, ವಾಸುಕಿಯನ್ನು ಹಗ್ಗವನ್ನಾಗಿ ಮಾಡಿಕೊಂಡು ದೇವದಾನವರು ಕ್ಷೀರಸಮುದ್ರವನ್ನು ಕಡೆದರು. ಹೀಗೆ ಕಡೆಯಲ್ಪಟ್ಟ ಸಮುದ್ರದಿಂದ ಕಲ್ಪತರು, ಕಾಮಧೇನು, ಚಿಂತಾಮಣಿ. ಅಪ್ಸರಸ್ತ್ರೀಯರು, ಚಂದ್ರ, ಉಚ್ಚೈಃಶ್ರವಸ್ಸು, ಐರಾವತ, ಲಕ್ಷ್ಮೀ ಮುಂತಾದ ಹಲವಾರು ಲೋಕೋತ್ತರ ದಿವ್ಯವಸ್ತುಗಳು ಹುಟ್ಟಿಬಂದವು. ಅಮೃತಕ್ಕಾಗಿ ಮತ್ತೆ ಮತ್ತೆ ಕಡೆದಾಗ, ಆ ಸಮುದ್ರದಿಂದ ಕಾಲಕೂಟವೆಂಬ ವಿಷವು ಹುಟ್ಟಿಬಂದು ದೇವದಾನವರನ್ನೆಲ್ಲ ಮೂರ್ಛೆಗೊಳಿಸಿ ಜಗತ್ತನ್ನೇ ಸುಡುತ್ತಾ ಬಂದಿತು. ಆಗ ಬ್ರಹ್ಮಾದಿಗಳು ಪ್ರಾರ್ಥಿಸಲಾಗಿ ಶ್ರೀ ಪರಮೇಶ್ವರನು ಬಂದು ಆ ವಿಷವನ್ನೆಲ್ಲ ಒಟ್ಟುಮಾಡಿ ಕುಡಿದುಬಿಟ್ಟು ಎಲ್ಲರನ್ನು ರಕ್ಷಿಸಿದನು.

ಇಹಪರಗಳಲ್ಲಿನ ಶ್ರೇಯೋಽಭ್ಯುದಯಗಳಿಗೆ ಒಂದೇ ಸಾಧನವಾಗಿರುವುದು, ಪಾರಮಾರ್ಥಿಕತತ್ತ್ವದ ತಿಳಿವು. ಈ ತತ್ವದಲ್ಲಿ, ಅಪೌರುಷೇಯವಾದ ವೇದ

Sri Vidyabharathi Book Centre, Sringeri

CC-O. In Public Domain. Digitized by eGangotri

ವೊಂದೇ ಪರಮಪ್ರಮಾಣವಾದುದು. ಈ ವೇದದ ಸಿದ್ಧಾಂತದಂತೆ-ನಿರ್ಗುಣವೂ ನಿರ್ವಿಶೇಷವೂ, ನಿರಾಕಾರವೂ, ನಿಷ್ಕ್ರಿಯವೂ, ಅಸಂಗವೂ, ಅಪರಿಚ್ಛಿನ್ನವೂ ಆಗಿ ಸಚ್ಚಿದಾನಂದ ರೂಪವಾದ ಬ್ರಹ್ಮವೇ ಈ ಪಾರಮಾರ್ಥಿಕತತ್ವವಾಗಿದೆ. ಈ ಬ್ರಹ್ಮವೇ ಸಮಸ್ತದ್ವೈತಪ್ರಪಂಚಕ್ಕೂ ಉತ್ಪತ್ತಿಸ್ಥಿತಿಲಯಗಳಿಗೆ ಕಾರಣವಾಗಿರುವುದೆಂದು ಶ್ರುತಿ (ವೇದ)ಯು ಪ್ರತಿಪಾದಿಸುತ್ತದೆ. ಕಾರಣವನ್ನು ಬಿಟ್ಟು ಕಾರ್ಯವೆಂಬುದು ಸ್ವತಂತ್ರವಾದ ವಸ್ತುವಲ್ಲದ್ದರಿಂದ ಬ್ರಹ್ಮವನ್ನು ಬಿಟ್ಟು ಬೇರೆ ಪ್ರಪಂಚವಿಲ್ಲ; ಆದ್ದರಿಂದ ಈ ಬ್ರಹ್ಮವು ನಿಷ್ಪ್ರಪಂಚಸ್ವರೂಪವಾದುದು; ಸರ್ವದ್ವೈತ ಪ್ರಪಂಚರಹಿತವಾದ ಅದ್ವಿತೀಯವಸ್ತುವು.

ಇದಲ್ಲದೆ-ಅಸಂಗಸ್ವರೂಪವೂ, ನಿರ್ವಿಕಾರವೂ ಆಗಿರುವ ಬ್ರಹ್ಮವು ವಸ್ತುತಃ ಜಗತ್ತಿಗೆ ಕಾರಣವೂ ಆಗುವಂತಿಲ್ಲ. ಆದಕಾರಣ ಪ್ರಪಂಚವೆಲ್ಲ-ನಿರ್ವಿಕಾರವಾಗಿರುವ ಹಗ್ಗದಲ್ಲಿ ತೋರಿಬರುವ ಹಾವಿನಂತೆ-ಬ್ರಹ್ಮದಲ್ಲಿ ತೋರಿಬರುವ ಭ್ರಮೆಮಾತ್ರವಾಗಿದೆ. ಆದ್ದರಿಂದ, ಬ್ರಹ್ಮವು ಅದ್ವಿತೀಯವೆಂಬುದು ಪೂರ್ಣವಾಗಿಯೇ ಪರಮಾರ್ಥವಾಗಿದೆ. ಅದ್ವಿತೀಯಬ್ರಹ್ಮವು ಕೇವಲ ಮಾಯೆಯಿಂದ ಪ್ರಪಂಚರೂಪವಾಗಿ ಕಂಡುಬರುವುದೆಂಬುದು ವೇದಾಂತ ಸಿದ್ಧಾಂತವು.

ಮಾಯೆಯ ಸಂಬಂಧದಿಂದ, ನಿರ್ವಿಶೇಷವಾದ ಈ ಪರಬ್ರಹ್ಮವು, ಪರಮೇಶ್ವರನೆನಿಸುವುದು-ಮಾಯೋಪಾಧಿಕವಾದ ಪರಬ್ರಹ್ಮವೇ ಪರಮೇಶ್ವರನು. ಮಾಯೆಯು ಅಪರಿಚ್ಛಿನ್ನವೂ, ವ್ಯಾಪಕವೂ, ಒಂದೂ ಆಗಿರುವುದರಿಂದ, ಇದರ ಔಪಾಧಿಕ-ರೂಪನಾದ ಪರಮೇಶ್ವರನೂ ಅಪರಿಚ್ಛಿನ್ನನೂ, ಸರ್ವವ್ಯಾಪಕನೂ, ಅದ್ವಿತೀಯನೂ ಆಗಿ, ಸರ್ವಜಗತ್ಕಾರಣನಾಗಿರುತ್ತ ಸರ್ವಾತ್ಮಕನೂ ಆಗಿರುತ್ತಾನೆ.

ಈ ಪರಮೇಶ್ವರನು, ತನಗೆ ಉಪಾಧಿಯಾಗಿರುವ ಮಾಯೆಯ ಸತ್ವ, ರಜಸ್ಸು, ತಮಸ್ಸು-ಎಂಬ ಮೂರು ಗುಣಗಳಿಂದ ಕ್ರಮವಾಗಿ ವಿಷ್ಣು, ಬ್ರಹ್ಮ ಮಹೇಶ್ವರ—ಎಂದು ತ್ರಿಮೂರ್ತಿಗಳ ರೂಪವಾಗುತ್ತಾನೆ. ಇವರು ಗುಣಮೂರ್ತಿಗಳೆಂದು ಹೇಳಲ್ಪಡುತ್ತಾರೆ. ಪರಮೇಶ್ವರನು ಈ ಗುಣಗಳ ಸಂಬಂಧವಿಲ್ಲದೆ ನಿರ್ಗುಣನೆನಿಸುತ್ತಾನೆ. ಮಾಯೆಯ ಉಪಾಧಿ ಸಂಬಂಧದ ಮಾತ್ರದಿಂದ ನಿರ್ವಿಶೇಷನಾದ ಪರಬ್ರಹ್ಮವೇ ಶ್ರೀ ಪರಮೇಶ್ವರನೆನಿಸುವನು; ಆದಕಾರಣ ಶ್ರೀ ಪರಮೇಶ್ವರನು ವಸ್ತುತಃ ಪರಬ್ರಹ್ಮವಸ್ತುವೇ ಆಗಿರುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಂಬಃ ಸಾಕ್ಷಾತ್ಪರಂ ಬ್ರಹ್ಮ ಸರ್ವಾತ್ಮಾ ಸರ್ವ ಕಾರಣಂ ।
ಅದ್ವಿತೀಯಂ ಪರಂ ತತ್ತ್ವಂ ಪ್ರತ್ಯಗೇಕರಸಂ ಮಹತ್ ॥

ಶೃಂಗಗಿರಿ – ಕವಿ – ನರಸಿಂಹಶರ್ಮ ವಿರಚಿತವಾದ
ಶ್ರೀ ಭಗವತ್ಪಾದೀಯ–ಶ್ರೀ ಸಾಂಬದಶಶ್ಲೋಕಿಯ
ವಿವರಣ ಸಹಿತ ಕನ್ನಡಾನುವಾದವು
ಪೂರ್ಣವು.

ಶ್ವರನ
ನಾದ ಶ್ರೀ
ಸಿದ್ಧಾಂತ
ಬೇರೆಯಾಗಿ ಪರ
ವಿಷ್ಣುವು ಒಬ್ಬನು ಇರು
ಉತ್ತಮಾಧಮವೆಂಬ ಕ

ಸತ್ವಂ ರಜಸ್ತಮ
ಯುಕ್ತಃ ಪರಃ
ಸ್ಥಿತ್ಯಾದಯೇ ಹರಿವಿರಿಂ
ಶ್ರೇಯಾಂಸಿ ತತ್ರ ಖಲು

"ಸತ್ವ, ರಜಸ್ಸು, ತಮಸ್ಸು– ಎಂಬ ಮ
ಈ ಗುಣಗಳಿಂದ ಯುಕ್ತನಾಗಿ ಪರಪುರುಷನು ಹ
ಹೆಸರುಗಳನ್ನು ಹೊಂದಿ, ಜಗತ್ತಿನ ಸ್ಥಿತಿ, ಉತ್ಪತ್ತಿ ಮ
ಸಾಗುತ್ತಾನೆ; ಇವರಲ್ಲಿ ಸ್ಥಿತಿ ಕಾಲದಲ್ಲಿ, ಅದಕ್ಕೆ ಕಾ
ಗುಣಶಾಲಿಯಾದ ಶ್ರೀ ವಿಷ್ಣುವಿನಿಂದ ಜನರಿಗೆ ಶ್ರೇಯೋ ಲಾಭ
ಎಂದು ವಿಷ್ಣು ಪುರಾಣವೆಂದು ಪ್ರಸಿದ್ಧವಾಗಿರುವ ಶ್ರೀಮದ್ಭಾಗವತ
ಈ ವಿಷಯವು ಅತ್ಯಂತ ಸ್ಫುಟವಾಗಿರುತ್ತದೆ. ಪ್ರಕೃತಿಯ ಗುಣಗಳಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ವೊಂದೇ ಪರಮಪ್ರಮಾಣವಾದುದು. ಈ ವೇದದ ಸಿದ್ಧಾಂತದಂತೆ-ನಿರ್ಗುಣವೂ ನಿರ್ವಿಶೇಷವೂ, ನಿರಾಕಾರವೂ, ನಿಷ್ಕ್ರಿಯವೂ, ಅಸಂಗವೂ, ಅಪರಿಚ್ಛಿನ್ನವೂ ಆಗಿ ಸಚ್ಚಿದಾನಂದ ರೂಪವಾದ ಬ್ರಹ್ಮವೇ ಈ ಪಾರಮಾರ್ಥಿಕತತ್ತ್ವವಾಗಿದೆ. ಈ ಬ್ರಹ್ಮವೇ ಸಮಸ್ತದ್ವೈತಪ್ರಪಂಚಕ್ಕೂ ಉತ್ಪತ್ತಿಸ್ಥಿತಿಲಯಗಳಿಗೆ ಕಾರಣ ವಾಗಿರುವುದೆಂದು ಶ್ರುತಿ (ವೇದ)ಯು ಪ್ರತಿಪಾದಿಸುತ್ತದೆ. ಕಾರಣವನ್ನು ಬಿಟ್ಟು ಕಾರ್ಯವೆಂಬುದು ಸ್ವತಂತ್ರವಾದ ವಸ್ತುವಲ್ಲದ್ದರಿಂದ ಬ್ರಹ್ಮವನ್ನು ಬಿಟ್ಟು ಬೇರೆ ಪ್ರಪಂಚವಿಲ್ಲ; ಆದ್ದರಿಂದ ಈ ಬ್ರಹ್ಮವು ನಿಷ್ಪ್ರಪಂಚಸ್ವರೂಪ ವಾದುದು; ಸರ್ವದ್ವೈತ ಪ್ರಪಂಚರಹಿತವಾದ ಅದ್ವಿತೀಯವಸ್ತುವು. ಎಲ್ಲ

ಇದಲ್ಲದೆ-ಅಸಂಗಸ್ವರೂಪವೂ, ನಿರ್ವಿಕಾರವೂ ಆಗಿರುವ ಬ...ವಾಗಿ ವಸ್ತುತಃ ಜಗತ್ತಿಗೆ ಕಾರಣವೂ ಆಗುವಂತಿಲ್ಲ. ಆದಕಾರಣ ಪ್ರಪಂಚವೆ...ರುವುದು ಕಾರವಾಗಿರುವ ಹಗ್ಗದಲ್ಲಿ ತೋರಿಬರುವ ಹಾವಿನಂತೆ-ಬ್ರಹ್ಮದ...' ಒಂದು ಬರುವ ಭ್ರಮೆಮಾತ್ರವಾಗಿದೆ. ಆದ್ದರಿಂದ, ಬ್ರಹ್ಮವು ಅ... ...ಳು. ಶೈವರು, ಪೂರ್ಣವಾಗಿಯೇ ಪರಮಾರ್ಥವಾಗಿದೆ. ಅದ್ವಿತೀಯಬ್ರ...ಷಂಡಿಗಳು—ಇವರು ಯಿಂದ ಪ್ರಪಂಚರೂಪವಾಗಿ ಕಂಡುಬರುವುದೆಂಬುದು ...ಂತಾದ ಒಂದೊಂದು ಇತರ ದೇವತೆಗಳನ್ನು

ಮಾಯೆಯು ಸಂಬಂಧದಿಂದ, ನಿರ್ವಿಶೇಷವಾ...ತೆಯಲ್ಲಿ (೧೮-೨೨) ಇಂಥ ಮೇಶ್ವರನೆನಿಸುವುದು-ಮಾಯೋಪಾಧಿತವಾದ ... ಇದು ಅಪ್ರಾಮಾಣಿಕವೂ, ಮಾಯೆಯು ಅಪರಿಚ್ಛಿನ್ನವೂ, ವ್ಯಾಪಕವೂ...ದುದು. ಆದ್ದರಿಂದ ಪರಮ ಔಪಾಧಿಕ-ರೂಪನಾದ ಪರಮೇಶ್ವರನೂ...ತದಂತೆ, ಮಾಯೋಪಾಧಿಕನಾಗಿ ಅದ್ವಿತೀಯನೂ ಆಗಿ, ಸರ್ವಜಗತ್...ರಮೇಶ್ವರನೇ ಸರ್ವೇಶ್ವರನಾಗಿದ್ದಾನೆ. ತ್ತಾನೆ. ...ಪರಮೇಶ್ವರನ ಪರಮತ್ವವನ್ನು ವಿಶದ

ಈ ಪರಮೇಶ್ವರನು, ...ಲ್ಲಿ ಪ್ರತಿಪಾದಿಸಿ ತೋರಿಸಿರುತ್ತಾರೆ. ಶ್ರೀ ರಜಸ್ಸು, ತಮಸ್ಸು-ಎಂನ್ನು ನಿತ್ಯವೂ ಅನುಸಂಧಾನಮಾಡುತ್ತಾ ಶಾಸ್ತ್ರಾನು ಮಹೇಶ್ವರ—ಎಂದು...ರ್ವಕವಾಗಿ ಶ್ರೀ ಪರಶಿವನನ್ನು ಆರಾಧಿಸಿ ಸೇವಿಸಿ ಮೂರ್ತಿಗಳೆಂದು...ಲ್ಲಿ ಶ್ರೇಯೋಭ್ಯುದಯಗಳಿಗೆ ಪಾತ್ರರಾಗತಕ್ಕದ್ದು. ಶ್ರೀ ವಿಲ್ಲವೆ ನಿರ್ಗು... ಈ ಮಹಿಮಾತಿಶಯವನ್ನು ಉಪದೇಶಿಸಿ ಜಗತ್ತಿಗೆಲ್ಲ ಸನ್ಮಾರ್ಗ ದಿಂದ ನಿರಿಸಿಕೊಟ್ಟಿರುವ ಶ್ರೀಭಗವತ್ಪಾದರಿಗೆ ಜಗತ್ತೇ ಚಿರಋಣಿಯಾಗಿದೆ!

ಕಾರಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಂಬಃ ಸಾಕ್ಷಾತ್ಪರಂ ಬ್ರಹ್ಮ ಸರ್ವಾತ್ಮಾ ಸರ್ವ ಕಾರಣಂ ।
ಅದ್ವಿತೀಯಂ ಪರಂ ತತ್ತ್ವಂ ಪ್ರತ್ಯಗೇಕರಸಂ ಮಹತ್ ॥

ಶೃಂಗಗಿರಿ – ಕವಿ – ನರಸಿಂಹಶರ್ಮ ವಿರಚಿತವಾದ
ಶ್ರೀ ಭಗವತ್ಪಾದೀಯ–ಶ್ರೀ ಸಾಂಬದಶಶ್ಲೋಕಿಯ
ವಿವರಣ ಸಹಿತ ಕನ್ನಡಾನುವಾದವು
ಪೂರ್ಣವು.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮಚ್ಛಂಕರ ಭಗವತ್ಪಾದ

ವಿರಚಿತಂ

ಶ್ರೀ ವಿಷ್ಣುಪಾದಾದಿ ಕೇಶಾಂತ ವರ್ಣನ ಸ್ತೋತ್ರಂ

—★—

ಪದ್ಮಾಯಾಃ ಕರಪದ್ಮಾಭ್ಯಾಂ ಹೃತ್ಪದ್ಮೇ ಲಾಲಿತಂ ಮುದಾ ।
ಪದ್ಮಾಕ್ಷ ಪದಪದ್ಮಂ ತದಾಶ್ರಯೇಽ ದ್ವಂದ್ವ ಹೇತವೇ॥

ಶ್ರೀಮಚ್ಛಂಕರ ಭಗವತ್ಪಾದರು ಅದ್ವಿತೀಯ ನಿರ್ಗುಣ ಬ್ರಹ್ಮತತ್ತ್ವ ಪ್ರತಿಪಾದಕರೆಂದು ಸರ್ವ ಪ್ರಸಿದ್ಧರಾಗಿದ್ದಾರೆ. ಪಾರಮಾರ್ಥಿಕತತ್ತ್ವವು ಇದೇ ಆದರೂ, ಈ ತತ್ತ್ವವು ಅನುಭವ ಸಿದ್ಧವಾಗುವವರೆವಿಗೂ, ವ್ಯಾವಹಾರಿಕ ಸ್ಥಿತಿಯಲ್ಲಿ – ಎಚ್ಚರವಾಗುವುದಕ್ಕೆ ಮುಂಚಿನ ಸ್ವಪ್ನದ ಸ್ಥಿತಿಯಲ್ಲಿ ಹೇಗೋ ಹಾಗೆ – ತೋರಿಬರುವ ದ್ವೈತಪ್ರಪಂಚವು ಸತ್ಯವೆಂದೇ ಅನುಭವಕ್ಕೆ ಬರುತ್ತಿರುತ್ತದೆ. ಇದರಲ್ಲಿ ಶಾಸ್ತ್ರಾನುಸಾರವಾಗಿ,–ಧರ್ಮಾಧರ್ಮಗಳು, ಯುಕ್ತಾಯುಕ್ತಗಳು, ಸುಖದುಃಖಗಳು–ಮುಂತಾದ ಎಲ್ಲ ಭೇದವೂ ಇದ್ದೇ ಇರುತ್ತದೆ. ಶಾಸ್ತ್ರಾನುಸಾರವಾಗಿ ಈ ನಿಯಮಗಳನ್ನನುಸರಿಸಿ ನಡೆಯುವವರಿಗೆ ಇಹಪರಗಳಲ್ಲಿ ಶ್ರೇಯಸ್ಸು ಲಭಿಸುತ್ತದೆ; ಶಾಸ್ತ್ರನಿಯಮಗಳನ್ನು ಮೀರುವವರಿಗೆ ಅನರ್ಥವು ಪ್ರಾಪ್ತವಾಗುವುದು. ನಿರ್ಗುಣತತ್ತ್ವವಾದಿಗಳಾಗಿರುವ ಶ್ರೀ ಭಗವತ್ಪಾದರು, ಈ ದೃಷ್ಟಿಯಿಂದ, ಜನರ ಶ್ರೇಯಸ್ಸಿಗಾಗಿ, ಹಲವಾರು ದೇವತಾಸ್ತೋತ್ರಗಳನ್ನು ವಿರಚಿಸಿಕೊಟ್ಟು ಅನುಗ್ರಹಿಸಿರುತ್ತಾರೆ. ಅದ್ವಿತೀಯ ನಿರ್ಗುಣತತ್ತ್ವವನ್ನು ಪ್ರತಿಪಾದಿಸಿರುವ ಶ್ರೀ ಭಗವತ್ಪಾದರ ಸಿದ್ಧಾಂತದಲ್ಲಿ, ದ್ವೈತವನ್ನು ಅಪೇಕ್ಷಿಸುವ ಭಕ್ತಿಗೆ ಅವಕಾಶವೇ ಇಲ್ಲವೆಂದು ಅಭಿಪ್ರಾಯಪಡುವವರು ಭ್ರಾಂತರೇ ಸರಿಯೆಂದು ಇದರಿಂದ ಸ್ಪಷ್ಟವಾಗುವುದು. ಎಲ್ಲ ದೇವತೆಗಳೂ ಪರತತ್ತ್ವದ ಮಾಯಿಕ ರೂಪಗಳೇ ಆಗಿದ್ದು ಇವುಗಳಲ್ಲಿ ಭೇದಭಾವನೆಗಾಗಲಿ, ತಾರತಮ್ಯಕ್ಕಾಗಲಿ ಅವಕಾಶವಿಲ್ಲವೆಂಬುದನ್ನು ಶ್ರೀ ಭಗವತ್ಪಾದರು ಈ ಅನೇಕ ದೇವತಾಸ್ತೋತ್ರಗಳಿಂದ ತಿಳಿಸುತ್ತಾರೆ. ಸರ್ವದೇವತಾಪರಗಳಾದ ಹದಿನೆಂಟು ಪುರಾಣಗಳನ್ನು ರಚಿಸಿರುವ ಶ್ರೀ ವೇದವ್ಯಾಸರೇ ಇದನ್ನು ವ್ಯಕ್ತಪಡಿಸಿರುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

"ತಸ್ಮಾನ್ಮುಮುಕ್ಷುಃ ದೇವಾರಾಧನಪರಃ ಶ್ರದ್ಧಾಭಕ್ತಿಪರಃ ಪ್ರಣೀಯೋ ಅಪ್ರಮಾದೀ ಸ್ಯಾದ್ವಿದ್ಯಾಪ್ರಾಪ್ತಿಂ ಪ್ರತಿ"

'ಮೋಕ್ಷಾಪೇಕ್ಷೆಯುಳ್ಳವನು ತತ್ವಜ್ಞಾನ ಸಿದ್ಧಿಗೋಸ್ಕರ, ಶ್ರಧ್ಧಾಭಕ್ತಿ ಪೂರ್ವಕವಾಗಿ, ಶೌಚಾಚಾರಾದಿನಿಯಮಗಳಿಂದ ಕೂಡಿ, ಪ್ರಮಾದಪಾಡದೆ, ಸಕಲ ದೇವತೆಗಳ ಆರಾಧನೆಯಲ್ಲಿ ನಿರತನಾಗಿರತಕ್ಕದ್ದು' (ಬೃ.ಭಾ. ೧-೪-೧೦) ಎಂದು ಶ್ರೀ ಭಗವತ್ಪಾದರು ಇದನ್ನು ಸ್ಪಷ್ಟವಾಗಿ ಉಪದೇಶಿಸಿರುತ್ತಾರೆ.

ಇತರವಾದಿಗಳೆಲ್ಲರಿಗೂ ಸಗುಣದೇವತೆಯೇ ಪರ ತತ್ವವಾಗಿರುತ್ತದೆಯಾಗಿ, ಆದರಲ್ಲಿಯೇ ಅವರಿಗೆ ಪರಮಭಕ್ತಿಯಿರುವುದು ಸಹಜವು. ಆದರೂ ಅವರಲ್ಲಿ ಯಾರೂ ಯಾವ ದೇವತೆಯ ಸ್ತುತಿಯನ್ನೂ ಶ್ರೀಭಗವತ್ಪಾದರಷ್ಟು ಶಬ್ದದಲ್ಲಾಗಲಿ, ಅರ್ಥದಲ್ಲಾಗಲಿ ಉತ್ತಮವಾಗಿ ಮಾಡಿರುವುದು ಕಂಡುಬರುವುದಿಲ್ಲ. ಶ್ರೀಭಗವತ್ಪಾದರ ಶ್ರೀ ವಿಷ್ಣುಪಾದಾದಿ ಕೇಶಾಂತವರ್ಣನ ಸ್ತುತಿಯು ಇದರಲ್ಲಿ ಅಗ್ರಗಣ್ಯವಾಗಿ ಶೋಭಿಸುತ್ತಿದೆ. ಈ ಸ್ತೋತ್ರದ ತಾತ್ಪರ್ಯವನ್ನು ಕನ್ನಡಿಗರ ಉಪಯೋಗಕ್ಕಾಗಿ ಕನ್ನಡ ನುಡಿಯಲ್ಲಿ ವಿವರಿಸುತ್ತೇನೆ. ಕೃತಾರ್ಥರೇ ಆಗಿ ಸರ್ವದೇವತಾತ್ಮಕರಾಗಿರುವ ಶ್ರೀ ಭಗವತ್ಪಾದರಿಗೆ ಈ ಸ್ತೋತ್ರಾದಿಗಳಿಂದ ಯಾವ ಪ್ರಯೋಜನವೂ ಆಗಬೇಕಾದ್ದಿರುವುದಿಲ್ಲ. ಲೋಕಸಂಗ್ರಹಕ್ಕಾಗಿ, ದೇವತಾಸ್ತುತಿಯನ್ನು ಮಾಡುವ ರೀತಿಯನ್ನು ಲೋಕಕ್ಕೆ ತೋರಿಸಿಕೊಟ್ಟಿರುತ್ತಾರೆಂದು ತಿಳಿಯತಕ್ಕದ್ದು.

ಶ್ರೀ ಮದ್ಭಗವತ್ಪಾದರು ಪರಿವಾರ ಸಮೇತನಾಗಿರುವ ಶ್ರೀ ಮಹಾವಿಷ್ಣುವನ್ನು ಸಂಪೂರ್ಣವಾಗಿ ವರ್ಣಿಸುವ ಉದ್ದೇಶದಿಂದ ಈ ಸ್ತೋತ್ರವನ್ನು ರಚಿಸಿರುತ್ತಾರೆ. ಪರಮಾತ್ಮನ ಉಪಾಧಿಯಾಗಿರುವ ಮಾಯೆಯು ಸತ್ತ್ವಗುಣ ಪ್ರಧಾನವಾದ ಪರಮಾತ್ಮನ ರೂಪವೇ ಶ್ರೀ ಮಹಾವಿಷ್ಣುವು. ಜಗತ್ತಿನ ಸ್ಥಿತಿ ಪಾಲಕನಾಗಿರುವ ಶ್ರೀ ಮಹಾವಿಷ್ಣುವಿನ ಅನುಗ್ರಹವು ಈಗ ಎಲ್ಲರಿಗೂ ಅವಶ್ಯವಾಗಿದೆ. ಅರ್ಥಜ್ಞಾನಪೂರ್ವಕವಾಗಿ ಶ್ರೀ ವಿಷ್ಣುವನ್ನು ಸ್ತುತಿಸುವುದು ಎಲ್ಲರ ಶ್ರೇಯಸ್ಸಿಗೂ ಕಾರಣವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಮಹಾವಿಷ್ಣುವಿನ ಕರಕಮಲದಲ್ಲಿ ವಿರಾಜಿಸುವ ಶಂಖವನ್ನು ಮೊದಲು ಸ್ತುತಿಸಿ ಪ್ರಾರ್ಥಿಸುತ್ತಾರೆ—

ಲಕ್ಷ್ಮೀಭರ್ತುರ್ಭುಜಾಗ್ರೇ ಕೃತವಸತಿ ಸಿತಂ ಯಸ್ಯ ರೂಪಂ ವಿಶಾಲಂ
ನೀಲಾದ್ರೇಸ್ತುಂಗಶೃಂಗಸ್ಥಿತಮಿವ ರಜನೀನಾಥಬಿಂಬಂ ವಿಭಾತಿ ।
ಪಾಯಾನ್ನಃ ಪಾಂಚಜನ್ಯಃ ಸ ಸಕಲದಿತಿಜತ್ರಾಸನೈಃ ಪೂರಯನ್ ಸ್ವೈಃ
ನಿರ್ಘೋಷೈರ್ನೀರದೌಘಧ್ವನಿ ಪರಿಭವದೈರಂಬರಂ ಕಂಬುರಾಜಃ
॥೧॥

ಲಕ್ಷ್ಮೀಭರ್ತುಃ—ನೀಲಮೇಘಶ್ಯಾಮನೂ ಸರ್ವಜಗದಾಕಾರನೂ ಆಗಿರುವ ಲಕ್ಷ್ಮೀಪತಿಯಾದ ಶ್ರೀ ಮಹಾವಿಷ್ಣುವಿನ ; **ಭುಜಾಗ್ರೇ ಕೃತವಸತಿ**—ಎತ್ತರವಾಗಿರುವ ಹೆಗಲಿನ ಮೇಲುಭಾಗದಲ್ಲಿ ಇರುವ; **ಯಸ್ಯ ರೂಪಂ ವಿಶಾಲಂ ಸಿತಂ**—ಅತ್ಯಂತ ಬಿಳುಪಾಗಿಯೂ ವಿಸ್ತಾರವಾಗಿಯೂ ಇರುವ ; ಆದ್ದರಿಂದಲೇ–**ನೀಲಾದ್ರೇ : ತುಂಗಶೃಂಗಸ್ಥಿತಂ ರಜನೀನಾಥಬಿಂಬಂ ಇವ ವಿಭಾತಿ**–ನೀಲಪರ್ವತದ ಎತ್ತರವಾದ ಶಿಖರದ ಮೇಲಿರುವ ಚಂದ್ರಬಿಂಬದಂತೆ ಶೋಭಿಸುತ್ತಿರುವ ; **ಸಕಲದಿತಿಜತ್ರಾಸನೈಃ**—ದೈತ್ಯಕುಲವನ್ನೆಲ್ಲ ಭಯಪಡಿಸುವಂಥ ; **ನೀರದೌಘಧ್ವನಿಪರಿಭವದೈಃ**—ಮೇಘಸಮೂಹದ ಗುಡುಗಿನ ಶಬ್ದವನ್ನೂ ತಿರಸ್ಕರಿಸುವ ; **ಸ್ವೈಃ ನಿರ್ಘೋಷೈಃ**—ತನ್ನ ದೊಡ್ಡ ಧ್ವನಿಯಿಂದ ; **ಅಂಬರಂ ಪೂರಯನ್**—ಆಕಾಶವನ್ನೆಲ್ಲ ತುಂಬುತ್ತಿರುವ ; **ಪಾಂಚಜನ್ಯಃ ಸಃ ಕಂಬು ರಾಜಃ**—ಪಾಂಚಜನ್ಯವೆಂಬ ಆ ಶ್ರೇಷ್ಠವಾದ ದಿವ್ಯ ಶಂಖವು ; **ನಃ ಪಾಯಾತ್**—ನಮ್ಮನ್ನು ಸಕಲ ಆಪತ್ತುಗಳಿಂದಲೂ ರಕ್ಷಿಸಲಿ.

ಪರಮ ಪವಿತ್ರ ಮೂರ್ತಿಯಾದ ಪರಮಾತ್ಮನಿಗೆ ಸಂಬಂಧಪಟ್ಟದ್ದೆಲ್ಲ ಪವಿತ್ರವೂ ದೇವತಾ ಸ್ವರೂಪವೂ ಆಗಿರುತ್ತದೆ. ಆದ್ದರಿಂದ ಶ್ರೀ ಮಹಾವಿಷ್ಣುವಿನ ಕರಕಮಲದಲ್ಲಿ ಪರಿಗೃಹೀತವಾಗಿ ಶೋಭಿಸುತ್ತಿರುವ ಪಾಂಚಜನ್ಯವೆಂಬ ದಿವ್ಯ ಶಂಖವು ದೇವತಾ ರೂಪದಿಂದ ಸ್ತುತ್ಯವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈಗ, ಶ್ರೀ ಮಹಾವಿಷ್ಣುವಿನ ಮತ್ತೊಂದು ಕೈಯಲ್ಲಿ ಶೋಭಿಸುವ ಚಕ್ರವನ್ನು ಸ್ತುತಿಸುತ್ತಾರೆ—

ಆಹುರ್ಯಸ್ಯ ಸ್ವರೂಪಂ ಕ್ಷಣಮುಖಮಖಿಲಂ ಸೂರಯಃ
ಕಾಲಮೇತಂ
ಧ್ವಾಂತಸ್ಯೈಕಾಂತಮಂತಂ ಯದಪಿ ಚ ಪರಮಂ ಸರ್ವ
ಧಾಮ್ನಾಂಚ ಧಾಮ।
ಚಕ್ರಂ ತಚ್ಚಕ್ರಪಾಣೇರ್ದಿತಿಜತನು ಗಲದ್ರಕ್ತಧಾರಾಕ್ತಧಾರಂ
ಶಶ್ವನ್ನೋ ವಿಶ್ವವಂದ್ಯಂ ವಿತರತು ವಿಪುಲಂ ಶರ್ಮ
ಘರ್ಮಾಂಶು ಶೋಭಂ ॥ ೨ ॥

ಕ್ಷಣಮುಖಂ ಅಖಿಲಂ ಏತಂ ಕಾಲಂ— ಕ್ಷಣ, ಮುಹೂರ್ತ, ದಿನ, ಪಕ್ಷ-ಮಾಸ, ಅಯನ, ಋತು, ವತ್ಸರ, ಶತಮಾನ, ಯುಗ, ಕಲ್ಪ-ಮುಂತಾದ ಎಲ್ಲ ಕಾಲವನ್ನೂ; **ಯಸ್ಯ ಸ್ವರೂಪಂ**- ಯಾವುದರ ಸ್ವರೂಪ ವೆಂದು; **ಸೂರಯಃ ಆಹುಃ**-ಬಲ್ಲವರು ಹೇಳುತ್ತಾರೋ; **ಅಪಿಚ**-ಮತ್ತು; **ಸರ್ವಧಾಮ್ನಾಂ ಚ ಧಾಮ ಯತ್**-ಎಲ್ಲ ಪ್ರಕಾಶಗಳಿಗೂ ಆಶ್ರಯವಾಗಿ ರುವ ಯಾವುದನ್ನು; **ಧ್ವಾಂತಸ್ಯ ಏಕಾಂತಂ ಅಂತಂ(ಅಹುಃ)**-ಕತ್ತಲೆ ಗೆಲ್ಲ ನಿಶ್ಚಿತವಾದ ಪೂರ್ಣನಾಶಕವೆಂದು ಯಾವುದನ್ನು ಹೇಳುವರೋ; **ದಿತಿ ಜತನು ಗಲದ್ರಕ್ತಧಾರಾಕ್ತಧಾರಂ**- ಚಕ್ರದಿಂದ ಸೀಳಲ್ಪಟ್ಟ ದೈತ್ಯರಶರೀರ ಗಳಿಂದ ಸುರಿಯುತ್ತಿರುವ ರಕ್ತ ಪ್ರವಾಹದಿಂದ ಅಂಟಿಕೊಂಡಿರುವ ಅಗ್ರಭಾಗ ವನ್ನುಳ್ಳ; **ಘರ್ಮಾಂಶು ಶೋಭಂ**-ಸೂರ್ಯನಂತೆ ಬೆಳಗುತ್ತಿರುವ; **ವಿಶ್ವ ವಂದ್ಯಂ**-ಸರ್ವರಿಂದಲೂ ನಮಸ್ಕರಿಸಲ್ಪಡುವಂಥ; **ಚಕ್ರಪಾಣೇಃ ತತ್ ಚಕ್ರಂ** - ಶ್ರೀಮಹಾವಿಷ್ಣುವಿನ ಕೈಯಲ್ಲಿರುವ ಆ ಚಕ್ರವು; **ನಃ** – ನಮಗೆ; **ವಿಪುಲಂ ಶರ್ಮ**—ನಿರತಿಶಯವಾದ ಶಾಂತಿ ಸುಖವನ್ನು; **ವಿತರತು**-ಅನು ಗ್ರಹಿಸಲಿ
॥೨॥

Sri Vidyabharathi Book Centre, Sringeri

CC-O. In Public Domain. Digitized by eGangotri

ಈಗ ಶಾರ್ಙ್ಗವೆಂಬ ಶ್ರೀ ಮಹಾವಿಷ್ಣುವಿನ ಧನುಸ್ಸನ್ನು ಪ್ರಾರ್ಥಿಸುತ್ತಾರೆ—

ಅವ್ಯಾನ್ನಿರ್ಘಾತಘೋರೋ ಹರಿಭುಜಪವನಾಮರ್ಶನಾಧ್ಮಾತಮೂರ್ತೇಃ,ಅಸ್ಮಾನ್ವಿಸ್ಮಾರನೇತ್ರತ್ರಿದಶನುತಿವಚಃಸಾಧುಕಾರೈಃಸುತಾರಃ। ಸರ್ವಂ ಸಂಹರ್ತುಮಿಚ್ಛೋರರಿಕುಲಭವನಂ ಸ್ಫಾರವಿಸ್ಫಾರನಾದಃ ಸಂಯತ್ಕಲ್ಪಾಂತಸಿಂಧೌ ಶರಸಲಿಲಘಟಾವಾರ್ಮುಚಃಕಾರ್ಮುಕಸ್ಯ॥ ॥೩॥

ಅರಿಕುಲಭುವನಂ ಸರ್ವಂ ಸಂಹರ್ತುಂ ಇಚ್ಛೋಃ— ಧರ್ಮಶತ್ರುಗಳಾದವರ ವಂಶವೆಂಬ ಪ್ರಪಂಚವನ್ನೆಲ್ಲ ಸಂಹರಿಸುವ ಇಚ್ಛೆಯುಳ್ಳ; **ಹರಿಭುಜಪವನಾಮರ್ಶನಾಧ್ಮಾತಮೂರ್ತೇಃ** –ಶ್ರೀಮಹಾವಿಷ್ಣುವಿನ ಬಲಿಷ್ಠಗಳಾದ ಭುಜಗಳೆಂಬ ಬಿರುಗಾಳಿಯಿಂದ ಆಕರ್ಷಿಸಲ್ಪಟ್ಟು ತುಂಬಿದ ಆಕಾರವನ್ನುಳ್ಳ; **ಸಂಯತ್ಕಲ್ಪಾಂತಸಿಂಧೌ ಶರಸಲಿಲಘಟಾವಾರ್ಮುಚಃ** – ಯುದ್ಧವೆಂಬ ಪ್ರಳಯಸಮುದ್ರದಲ್ಲಿ ಬಾಣಗಳೆಂಬ ನೀರುಗಳಿಂದ ಭರಿತವಾಗಿ ಅಂಥ ನೀರಿನ ಧಾರಾಕಾರವಾದ ಮಳೆಯನ್ನು ಅಖಂಡವಾಗಿ ಸುರಿಸುತ್ತಿರುವ; **ಕಾರ್ಮುಕಸ್ಯ**—ಧನುಸ್ಸಿನ ; **ವಿಸ್ಮಾರನೇತ್ರತ್ರಿದಶನುತಿವಚಃ ಸಾಧುಕಾರೈಃ ಸುತಾರಃ**—ಇದನ್ನು ಕಂಡು ಅತ್ಯದ್ಭುತಾಶ್ಚರ್ಯ ಚಕಿತರಾದ ದೇವಾದಿಗಳ ಸ್ತುತಿವಚನಪೂರ್ವಕಗಳಾದ ಸಾಧು ಶಬ್ದಗಳಿಂದ ಹೆಚ್ಚಿಸಲ್ಪಟ್ಟ; **ನಿರ್ಘಾತ ಘೋರಃ**....ಸಿಡಿಲಿನಂತೆ ಭಯಂಕರವಾದ; **ಸ್ಫಾರವಿಸ್ಫಾರನಾದಃ**-ವಿಸ್ತಾರವಾದ ಧನುಷ್ಟಂಕಾರಶಬ್ದವು; **ಅಸ್ಮಾನ್ ಅವ್ಯಾತ್** ನಮ್ಮನ್ನು ರಕ್ಷಿಸಲಿ.

ಸಕಲ ಜಗತ್ತನ್ನು ಸಂಹರಿಸುವ ಪ್ರಳಯಕಾಲದ ಮೇಘವು ಬಿರುಗಾಳಿಯಿಂದ ಹಾರಿಸಲ್ಪಟ್ಟು, ಭಯಂಕರವಾಗಿ ಗುಡುಗು ಸಿಡಿಲುಗಳಿಂದ ಘೋರವಾದ ಶಬ್ದವನ್ನು ಮಾಡುತ್ತ, ಧಾರಾಕಾರವಾಗಿ ಮಳೆಯನ್ನು ಸುರಿಸಿ, ಪ್ರಳಯ ಸಮುದ್ರವನ್ನು ಪೂರ್ಣಮಾಡುತ್ತದೆ. ಇದರಂತೆ, ಶ್ರೀ ಮಹಾವಿಷ್ಣುವಿನ ಧನಸ್ಸು, ಶ್ರೀ ವಿಷ್ಣುವಿನ ಭುಜಗಳೆಂಬ ಬಿರುಗಾಳಿಯಿಂದ ಆಕರ್ಷಿಸಲ್ಪಟ್ಟು, ಗುಡಗು ಸಿಡಿಲುಗಳಂತೆ ಭಯಂಕರವಾಗಿ ಶಬ್ದಮಾಡುತ್ತ, ಧರ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಶತ್ರುಗಳೊಡನೆ ಯುದ್ಧಮಾಡುವಾಗ, ನಿರಂತರವಾದ ಬಾಣಗಳ ಸುರಿಮಳೆಯನ್ನು ಕರೆಯುತ್ತ, ಇದರಿಂದ ಸಂತೋಷಗೊಂಡ ದೇವಾದಿಗಳಿಂದ ಹೊಗಳಲ್ಪಡುತ್ತದೆಯೆಂದು ಇಲ್ಲಿ ರೂಪಕ ಮಾಡಿರುತ್ತಾರೆ—೩.

ನಂದಕವೆಂಬ ಶ್ರೀ ಮಹಾ ವಿಷ್ಣುವಿನ ಕತ್ತಿಯನ್ನು ಪ್ರಾರ್ಥಿಸಿ ಸ್ತುತಿಸುತ್ತಾರೆ—

ಜೀಮೂತಶ್ಯಾಮಭಾಸಾ ಮುಹುರಪಿ ಭಗವದ್ಬಾಹುನಾ
ಮೋಹಯಂತೀ
ಯುದ್ಧೇಷೂದ್ಧೂಯಮಾನಾ ಝಟಿತಿ ತಡಿದಿವಾಲಕ್ಷ್ಯತೇ
ಯಸ್ಯ ಮೂರ್ತಿಃ ।
ಸೋಽಸಿಸ್ತ್ರಾಸಾಕುಲಾಕ್ಷತ್ರಿದಶರಿಪು ವಪುಃ ಶೋಣಿತಾಸ್ವಾದತೃಪ್ತಃ
ನಿತ್ಯಾನಂದಾಯ ಭೂಯಾನ್ಮಧುಮಥನಮನೋನಂದಕೋ
ನಂದಕೋ ನಃ ॥೪॥

ಜೀಮೂತಶ್ಯಾಮ ಭಾಸಾ — ಜಲಭರಿತವಾದ ನೀಲಮೇಘದಂತೆ ಶ್ಯಾಮಲ ವರ್ಣದ; **ಭಗವದ್ಬಾಹುನಾ**—ಶ್ರೀ ಮಹಾ ವಿಷ್ಣುವಿನ ಬಾಹುವಿನಿಂದ; **ಯುದ್ಧೇಷು**—ದೇವ ಶತ್ರುಗಳೊಡನೆ ಮಾಡುವ ಯುದ್ಧಗಳಲ್ಲಿ, **ಮುಹುಃ ಅಪಿ**—ಬಾರಿಬಾರಿಗೂ; **ಉದ್ಧೂಯಮಾನಾ**—ವೇಗದಿಂದ ಚಲಿಸಲ್ಪಟ್ಟದ್ದಾಗಿ; **ಯಸ್ಯ ಮೂರ್ತಿಃ**—ಯಾವ ಖಡ್ಗದ ಸ್ವರೂಪವು; **ಝಟಿತಿ**—ಕೂಡಲೆ; **ಮೋಹಯಂತೀ**—ದೈತ್ಯರಿಗೆ ಮೋಹವನ್ನು ಉಂಟುಮಾಡುತ್ತ; **ತಡಿತ್ ಇವ ಆಲಕ್ಷ್ಯತೇ**—ಮಿಂಚಿನಂತೆ ಹೊಳೆಯುತ್ತದೋ; **ತ್ರಾಸಾಕುಲಕ್ಷತ್ರಿದಶರಿಪುವಪುಃ ಶೋಣಿತಾಸ್ವಾದತೃಪ್ತಃ**—ಪ್ರಾಣ ಭಯದಿಂದ ವ್ಯಾಕುಲಗಳಾಗಿರುವ ದೃಷ್ಟಿಗಳನ್ನುಳ್ಳ ದೈತ್ಯದಾನವರುಗಳೆಂಬ ಶತ್ರುಗಳ ದೇಹದ ರಕ್ತದ ಪಾನದಿಂದ ತೃಪ್ತಿಹೊಂದಿರುವ; **ಮಧುಮಥನಮನೋ ನಂದಕಃ**—ಇಂಥ ಕಾರ್ಯವನ್ನು ಮಾಡಿ ಶ್ರೀ ಮಹಾ ವಿಷ್ಣುವಿನ ಮನಸ್ಸಿಗೆ ಸಂತೋಷಕರವಾಗಿರುವ; **ಸಃ ನಂದಕಃ ಅಸಿಃ**—ಸರ್ವ ಪ್ರಸಿದ್ಧವಾಗಿರುವ ಆ ನಂದಕವೆಂಬ ಖಡ್ಗವು; **ನಃ**—ನಮಗೆ; **ನಿತ್ಯಾನಂದಾಯ ಭೂಯಾತ್**—ನಿತ್ಯನಿರತಿಶಯ ಸುಖರೂಪವಾದ ಮೋಕ್ಷವನ್ನು ಉಂಟುಮಾಡುವಂಥದ್ದು ಆಗಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಮಹಾ ವಿಷ್ಣುವಿನ ಕರಪದ್ಮವನ್ನು ಅಲಂಕರಿಸಿರುವ ಕೌಮೋದಕೀ ಯೆಂಬ ಗದೆಯನ್ನು ಈಗ ಪ್ರಾರ್ಥಿಸುತ್ತಾರೆ—

ಕಮ್ರಾಕಾರಾ ಮುರಾರೇಃ ಕರಕಮಲತಲೇನಾನುರಾಗಾದ್ಗೃಹೀತಾ
ಸಮ್ಯಗ್ವೃತ್ತಾ ಸ್ಥಿತಾಗ್ರೇ ಸಪದಿ ನ ಸಹತೇ ದರ್ಶನಂ ಯಾ ಪರೇಷಾಂ।
ರಾಜಂತೀ ದೈತ್ಯಜೀವಾಸವಮದಮುದಿತಾ ಲೋಹಿತಾಲೇಪ
ನಾರ್ದ್ರಾ, ಕಾಮಂ ದೀಪ್ತಾಂಶು ಕಾಂತಾ ಪ್ರದಿಶತು ದಯಿತೇವಾಸ್ಯ
ಕೌಮೋದಕೀ ನಃ ॥ ॥೫॥

ಅಸ್ಯಮುರಾರೇಃ—ಶ್ರೀ ಮಹಾ ವಿಷ್ಣುವಿನ; **ದಯಿತಾ ಇವ**— ಪ್ರೇಯಸಿಯಾದ ಶ್ರೀ ಮಹಾಲಕ್ಷ್ಮಿಯಂತೆಯೇ ; **ಕಮ್ರಾಕಾರಾ**—ಮನೋಹರವಾಗಿ ಸುಂದರಾಕಾರವಾದ; **ಮುರಾರೇಃ ಕರಕಮಲತಲೇನ ಅನುರಾಗಾತ್ ಗೃಹೀತಾ**—ಶ್ರೀ ವಿಷ್ಣುವಿನ ಕರಕಮಲದಿಂದ ಪ್ರೀತಿಪೂರ್ವಕವಾಗಿ ಗ್ರಹಿಸಲ್ಪಟ್ಟಿರುವ ; **ಸಮ್ಯಗ್ವೃತ್ತಾ**—ಪೂರ್ಣವಾಗಿ ದುಂಡಾಗಿರುವ; **ಅಗ್ರೇ ಸ್ಥಿತಾ**—ಎದುರಿನಲ್ಲಿ ಇರುವ ; **ಪರೇಷಾಂ ದರ್ಶನಂ ಸಪದಿ ಯಾ ನ ಸಹತೇ**—ಶತ್ರುಗಳ ದರ್ಶನವನ್ನೂ ಸಹ ಯಾವುದು ಸಹಿಸುವುದಿಲ್ಲವೋ ; **ದೈತ್ಯಜೀವಾಸವಮದಮುದಿತಾ** — ಧರ್ಮದ್ವೇಷಿಗಳಾದ ದೈತ್ಯರುಗಳ ಜೀವಿತವೆಂಬ ಮದ್ಯದ ಸೇವನೆಯ ಮದದಿಂದ ಸಂತುಷ್ಟವಾದ ; **ಲೋಹಿತಾಲೇಪನಾರ್ದ್ರಾ**—ಆ ದೈತ್ಯರ ರಕ್ತದ ಲೇಪನದಿಂದ ಹಸಿಯದಾಗಿ ; **ರಾಜಂತೀ** — ಹೊಳೆಯುತ್ತಿರುವ ; **ದೀಪ್ತಾಂಶುಕಾಂತಾ** — ಆದ್ದರಿಂದ ಸೂರ್ಯನಂತೆ ಬೆಳಗುತ್ತಿರುವ ; **ಕೌಮೋದಕೀ**—ಕೌಮೋದಕಿಯೆಂದು ಪ್ರಖ್ಯಾತವಾಗಿರುವ ಶ್ರೀ ಮಹಾ ವಿಷ್ಣುವಿನ ಗದೆಯು ; **ನಃ**—ನಮಗೆ ; **ಕಾಮಂಪ್ರದಿಶತು**—ಸಕಲ ಇಹಪರೇಷ್ಟಾರ್ಥಗಳನ್ನೂ ಕರುಣಿಸಲಿ.

ಕೌಮೋದಕೀ ಗದೆಯನ್ನು ಇಲ್ಲಿ ಶ್ರೀ ಮಹಾಲಕ್ಷ್ಮಿಗೆ ಹೋಲಿಸಿದೆ. ಶ್ರೀ ಮಹಾಲಕ್ಷ್ಮಿಯು ಸುಂದರಾಂಗಿಯಾಗಿದ್ದಾಳೆ ; ಶ್ರೀ ವಿಷ್ಣುವಿನಿಂದ ಪ್ರೀತಿ ಪೂರ್ವಕವಾಗಿ ಕರಗ್ರಹಣ ಮಾಡಲ್ಪಟ್ಟಿದ್ದಾಳೆ; **ಸಮ್ಯಗ್ವೃತ್ತಾ**— ವೃತ್ತಿ ಯೆಂದರೆ **ಸನ್ನಡತೆ**—ಸನ್ನಡತೆಯುಳ್ಳವಳಾಗಿದ್ದಾಳೆ ; ಶ್ರೀ ವಿಷ್ಣುವಿನಲ್ಲಿಯೇ ಯಾವಾಗಲೂ ಮನೋದೃಷ್ಟಿಯುಳ್ಳವಳಾಗಿದ್ದು, ಶ್ರೀ ವಿಷ್ಣುವಿನ ಮನಸ್ಸಿನಲ್ಲಿಯೇ ರಾರಾಜಿಸುತ್ತಿದ್ದಾಳೆ; ಪರರ ಎಂದರೆ ಪರಪುರುಷರ ದರ್ಶನವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಹಿಸುವವಳಲ್ಲ ; ಮಹಿಷಾಸುರಮರ್ದಿನಿಯಾಗಿ ದೈತ್ಯರ ನಾಶಕಳಾಗಿ ಮುದಿತಳಾಗಿದ್ದಾಳೆ ; **ಲೋಹಿತಾಲೇಪನಾರ್ದ್ರಾ**—ರಕ್ತ ಚಂದನದ ಆಲೇಪನದಿಂದ ಆರ್ದ್ರಳಾಗಿದ್ದಾಳೆ ; **ದೀಪ್ತಾಂಶುಕಾಂತಾ** — ಹೊಳೆಯುವ ಸೆರಗಿನಿಂದ ಶೋಭಾಯಮಾನಳಾಗಿದ್ದಾಳೆ—೫.

ಶ್ರೀ ವಿಷ್ಣುವಿನ ಆಯುಧಗಳನ್ನು ಸ್ತುತಿಸಿ, ಈಗ ಅವನ ಪರಿವಾರದವರನ್ನು ಹೊಗಳುತ್ತ, ಮೊದಲು ಗರುಡದೇವನನ್ನು ವಂದಿಸುತ್ತಾರೆ—

ಯೋ ವಿಶ್ವಪ್ರಾಣಭೂತಸ್ತನುರಪಿ ಚ ಹರೇ ರ್ಯಾನ ಕೇತು ಸ್ವರೂಪೋ
ಯಂ ಸಂಚಿಂತ್ಯೈವ ಸದ್ಯಃ ಸ್ವಯಮುರಗವಧೂವರ್ಗಗರ್ಭಾಃ ಪತಂತಿ ।
ಚಂಚಚ್ಚಂಡೋರು ತುಂಡ ತ್ರುಟಿತ ಫಣಿವಸಾರಕ್ತ ಪಂಕಾಂಕಿ ತಾಸ್ಯಂ
ವಂದೇ ಛಂದೋಮಯಂ ತಂ ಖಗಪತಿ ಮಮಲ ಸ್ವರ್ಣವರ್ಣಂ ಸುಪರ್ಣಂ ॥ ॥೬॥

ಯಃ – ಯಾವ ಗರುಡನು ; **ವಿಶ್ವಪ್ರಾಣಭೂತಃ** – ಜಗತ್ತಿಗೆ ಪ್ರಾಣಸ್ವರೂಪನಾಗಿರುವನೋ ; **ಚ** – ಮತ್ತು ; **ಹರೇಃ ತನುಃ ಅಪಿ** – ವಿಷ್ಣುವಿಗೆ ದೇಹವೇ ಆಗಿದ್ದಾನೋ ; ಮತ್ತು **ಯಾನಕೇತುಸ್ವರೂಪಃ**—ವಾಹನ ಧ್ವಜರೂಪನೂ ಆಗಿರುವನೋ ; **ಯಂ ಸಂಚಿಂತ್ಯ ಏವ** – ಯಾರನ್ನು ನೆನಸಿಕೊಂಡಮಾತ್ರದಿಂದಲೇ ; **ಉರಗವಧೂವರ್ಗಗರ್ಭಾಃ ಸದ್ಯಃ ಪತಂತಿ**—ನಾಗಕನ್ನಿಕೆಯ ಗರ್ಭಿಣಿಯರಿಗೆ ಕೂಡಲೇ ಗರ್ಭಪಾತವೇ ಆಗುವುದೋ **ಚಂಚಚ್ಚಂಡೋರುತುಂಡ ತ್ರುಟಿತ ಫಣಿವಸಾರಕ್ತಪಂಕಾಂಕಿತಾಸ್ಯ**—ಚಲಿಸುತ್ತ ಭಯಂಕರವಾಗಿರುವ ದೊಡ್ಡಕೊಕ್ಕಿನಿಂದ ಸೀಳಿಹಾಕಲ್ಪಟ್ಟ ಸರ್ಪಗಳ ಕೊಬ್ಬು ರಕ್ತಗಳ ಕೆಸರಿನಿಂದ ಮಲಿನವಾದ ಮುಖವನ್ನುಳ್ಳ ; **ಛಂದೋಮಯಂ** — ವೇದಮಯ ಸ್ವರೂಪನಾದ ; **ಅಮಲಸ್ವರ್ಣವರ್ಣಂ** – ಪುಟಹಾಕಿದ ಚಿನ್ನದ ಕಾಂತಿಯ ; **ಖಗಪತಿಂ** – ಪಕ್ಷಿರಾಜನಾದ ; **ತಂ ಸುಪರ್ಣಂ** — ಪಕ್ಷಿರೂಪದಿಂದಿರುವ ಆ ಗರುಡ ದೇವನನ್ನು ; **ವಂದೇ** – ನಮಸ್ಕರಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಮಹಾವಿಷ್ಣುವಿನ ಪುನರವತಾರರೂಪನಾದ ಆದಿಶೇಷನನ್ನು ಸ್ತುತಿ ಸುತ್ತಾರೆ—

ವಿಷ್ಣೋಃ ವಿಶ್ವೇಶ್ವರಸ್ಯ ಪ್ರವರಶಯನ ಕೃತ್ಸರ್ವಲೋಕೈಕಧರ್ತಾ ಸೋಽನಂತಃ ಸರ್ವಭೂತಃ ಪೃಥುವಿಮಲಯಶಾಃ ಸರ್ವವೇದೈಶ್ಚ ವೇದ್ಯಃ । ಪಾತಾ ವಿಶ್ವಸ್ಯ ಶಶ್ವತ್ಸಕಲಸುರರಿಪುಧ್ವಂಸನಃ ಪಾಪಹಂತಾ ಸರ್ವಜ್ಞಃ ಸರ್ವಸಾಕ್ಷೀ ಸಕಲವಿಷಭಯಾತ್ಪಾತು ಭೋಗೀಶ್ವರೋ ನಃ ॥ ॥೭॥

ವಿಶ್ವೇಶ್ವರಸ್ಯ ವಿಷ್ಣೋಃ – ನಿಖಿಲಜಗದಧಿಪತಿಯಾದ ಶ್ರೀ ಮಹಾ ವಿಷ್ಣುವಿಗೆ; **ಪ್ರವರಶಯನಕೃತ್** – ಅತಿಶ್ರೇಷ್ಟವಾದ ಹಾಸಿಗೆಯಾಗಿರುವ; **ಸರ್ವಲೋಕೈಕಧರ್ತಾ** – ಸಮಸ್ತಲೋಕಗಳನ್ನೂ ಧರಿಸಿರುವ; **ಸರ್ವ ಭೂತಃ**—ಸರ್ವಕ್ಕೂ ಉತ್ಪತ್ತಿಸ್ಥಿತಿಲಯುಗಳಿಗೆ ಕಾರಣನಾಗಿ ಸರ್ವಾತ್ಮಕನಾಗಿ ರುವ; **ಪೃಥುವಿಮಲಯಶಾಃ** – ಆದ್ದರಿಂದಲೇ ಮಿಥ್ಯಾಭೂತವಾಗಿರುವ ದ್ವೈತಪ್ರಪಂಚರಹಿತನಾಗಿ ನಿರ್ವಿಶೇಷಾದ್ವಿತೀಯ ಸಚ್ಚಿದಾನಂದಸ್ವರೂಪನೆಂದು ವಿಶೇಷವಾದ ಕೀರ್ತಿಶಾಲಿಯಾಗಿರುವ; **ಸರ್ವವೇದೈಃ ಚ ವೇದ್ಯಃ** – ಹೀಗೆಂದು ಸರ್ವವೇದಶಾಸ್ತ್ರಗಳಿಂದಲೂ ಪ್ರತಿಪಾದ್ಯನಾಗಿರುವ; **ವಿಶ್ವಸ್ಯಪಾತಾ** ಪಾರಮಾರ್ಥಿಕವಾಗಿ ಇಂಥ ನಿರ್ವಿಶೇಷಾದ್ವೀತಿಯತತ್ತ್ವರೂಪನಾಗಿದ್ದರೂ, ವ್ಯವಹಾರದಶೆಯಲ್ಲಿ ಸರ್ವೇಶ್ವರನೆನಿಸಿ ಜಗದ್ರಕ್ಷಕನಾಗಿರುವ; **ಶಶ್ವತ್ ಸಕಲಸುರರಿಪುಧ್ವಂಸನಃ** – ಧಾರ್ಮಿಕರಾದ ದೇವತೆಗಳಿಗೆ ಶತೃಗಳಾಗಿ ಧರ್ಮ ಕಂಟಕರಾದವರನ್ನು ಯಾವಾಗಲೂ ಸಂಹರಿಸುತ್ತಿರುವ; **ಪಾಪ ಹಂತಾ**—ಶರಣಾಗತರಾಗಿ ಭಜಿಸುವವರ ಪಾಪಗಳನ್ನೆಲ್ಲ ನಾಶಮಾಡುವ; **ಸರ್ವಜ್ಞಃ**—ಎಲ್ಲವನ್ನೂ ತಿಳಿದಿರುವ; **ಸರ್ವಸಾಕ್ಷೀ**—ಆದರೂ ಯಾವು ದರ ಸಂಬಂಧವೂ ವಾಸ್ತವವಾಗಿ ಇಲ್ಲದ್ದರಿಂದ ಎಲ್ಲಕ್ಕೂ ಕೇವಲ ಸಾಕ್ಷಿರೂಪ ನಾಗಿರುವ; **ಅನಂತಃ**—ಅಪರಿಚ್ಛಿನ್ನನಾದ ಪರಮಾತ್ಮರೂಪನೇ ಆಗಿರುವ; **ಸಃ ಭೋಗೀಶ್ವರಃ**—ಆ ಆದಿಶೇಷನೆಂಬ ಸರ್ಪರಾಜನು; **ನಃ**—ನಮ್ಮನ್ನು; **ಸಕಲವಿಷಭಯಾತ್ ಪಾತು**—ಸಂಸಾರವೆಂಬ ಮಹಾ ವಿಷದ ಭಯದಿಂದ ಕಾಪಾಡಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಮಹಾವಿಷ್ಣುವೇ ಆದಿಶೇಷನ ರೂಪದಿಂದ ಹದಿನಾಲ್ಕು ಲೋಕಗಳನ್ನೂ ಧರಿಸಿಕೊಂಡು; ತನಗೆ ತಾನೇ ಹಾಸಿಗೆಯಾಗಿ ವಿಲಾಸದಿಂದ ಇದ್ದಾನೆ. ಆದ್ದರಿಂದ ಇಲ್ಲಿ ಆದಿಶೇಷನನ್ನು ಪೂರ್ಣವಾಗಿ ಪರಮೇಶ್ವರನ ಮಹಿಮೆಯಿಂದಲೇ ಸ್ತುತಿಸಿದ್ದಾರೆ; ಇಲ್ಲಿ ಹೇಳಿರುವ ವಿಶೇಷಣಗಳು ಪರಮೇಶ್ವರನಿಗೇ ಅನ್ವಯಿಸುವಂಥವಾಗಿವೆ—೭.

ಶ್ರೀ ಮಹಾ ವಿಷ್ಣುವಿನ ಪತ್ನಿಯಾದ ಶ್ರೀ ಲಕ್ಷ್ಮೀದೇವಿಯನ್ನು ಮುಂದಿನ ಎರಡು ಪದ್ಯಗಳಿಂದ ನಮಸ್ಕರಿಸುತ್ತಾರೆ—

ವಾಗ್ಭೂ ಗೌರ್ಯಾದಿಭೇದೈರ್ವಿದುರಿಹ ಮುನಯೋ ಯಾಂ
ಯದೀಯೈಶ್ಚ ಪುಂಸಾಂ
ಕಾರುಣ್ಯಾದ್ರೈಃ ಕಟಾಕ್ಷೈಃ ಸಕೃದಪಿ ಪತಿತೈಃ ಸಂಪದಃ ಸ್ಯುಃ
ಸಮಗ್ರಾಃ ।
ಕುಂದೇಂದು ಸ್ವಚ್ಛಮಂದಸ್ಮಿತಮಧುರಮುಖಾಂಭೋರುಹಾಂ
ಸುಂದರಾಂಗೀಂ ।
ವಂದೇ ವಂದ್ಯಾಮಶೇಷೈರಪಿ ಮುರಭಿದುರೋಮಂದಿರಾ—
ಮಿಂದಿರಾಂ ತಾಂ ॥ ॥ ೮ ॥

ಮುನಯಃ—ತತ್ತ್ವ ಮನನ ಶೀಲರಾದ ಮುನಿಗಳು; **ಯಾಂ**—ಯಾರನ್ನು; **ಇಹ**—ವ್ಯವಹಾರಾವಸ್ಥೆಯಲ್ಲಿ; **ವಾಗ್ಭೂಗೌರ್ಯಾದಿ ಭೇದೈಃ ವಿದುಃ**—ವಾಣಿ, ಭೂಮಿ, ಗೌರಿ—ಮುಂತಾದ ಭೇದಗಳಿಂದ ಇರುವವಳನ್ನಾಗಿ ತಿಳಿದಿರುವರೋ; **ಯದೀಯೈಃ**—ಯಾರ; **ಕಾರುಣ್ಯಾದ್ರೈಃ ಕಟಾಕ್ಷೈಃ ಸಕೃತ್ ಪತಿತೈಃ ಅಪಿ**—ಒಂದು ಸಲ ಬೀಳುವ ದಯಾಮಯವಾದ ದೃಷ್ಟಿಯಿಂದ ಮಾತ್ರವೇ ಆದರೂ; **ಪುಂಸಾಂ**—ಮನುಷ್ಯಮಾತ್ರರಿಗೂ; **ಸಂಪದಃ ಸಮಗ್ರಾಃ ಸ್ಯುಃ**—ಸಕಲ ಸಂಪತ್ತುಗಳೂ ಪೂರ್ಣವಾಗಿ ಸಿದ್ಧಿಸುತ್ತವೋ; **ಕುಂದೇಂದು ಸ್ವಚ್ಛ ಮಂದಸ್ಮಿತ ಮಧುರ ಮುಖಾಂಭೋರುಹಾಂ**—ಮಲ್ಲಿಗೆ, ಚಂದ್ರ—ಇವರಂತೆ ಅತ್ಯಂತ ಸ್ವಚ್ಛವಾದ ಮುಗುಳು ನಗೆಯಿಂದ ಮನೋಹರವಾದ ಮುಖ ಕಮಲವನ್ನುಳ್ಳ; **ಸುಂದರಾಂಗೀಂ**—ಇವರಂತೆ ಅತಿಮನೋಹರವಾಗಿ ಸುಂದರ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳಾದ ಎಲ್ಲ ಅವಯವಗಳಿಂದಲೂ ಶೋಭಿಸುತ್ತಿರುವ; ಅಶೇಷೈಃ ಅಪಿ ವಂದ್ಯಾಂ—ಸರ್ವರಿಂದಲೂ ನಮಸ್ಕರಿಸಲ್ಪಡುವವಳಾದ; ಮುರಭಿದುರೋ ಮಂದಿರಾಂ—ಶ್ರೀ ಮಹಾ ವಿಷ್ಣುವಿನ ವಕ್ಷಸ್ಥಳದಲ್ಲಿ ವಾಸಿಸುತ್ತಿರುವ; ತಾಂ ಇಂದಿರಾಂ ವಂದೇ--ಆ ಲಕ್ಷ್ಮೀದೇವಿಯನ್ನು ನಮಸ್ಕರಿಸುತ್ತೇನೆ. --೮.

ವ್ಯಾವಹಾರಿಕವಾದ ಲೌಕಿಕ ರೂಪದಿಂದ ವರ್ಣಿಸಿ, ಈಗ ವಾಸ್ತವ ರೂಪದಿಂದ ಶ್ರೀ ಲಕ್ಷ್ಮೀದೇವಿಯನ್ನು ಸ್ತುತಿಸುತ್ತಾರೆ--

ಯಾ ಸೂತೇ ಸತ್ವಜಾಲಂ ಸಕಲಮಪಿ ಸದಾ ಸನ್ನಿಧಾನೇನ ಪುಂಸಃ
ಧತ್ತೇ ಯಾ ಸತ್ವಯೋಗಾಚ್ಚರಮ ಚರಮಿದಂ ಭೂತಯೇ ಭೂತಜಾತಂ।
ಧಾತ್ರೀಂ ಸ್ಥಾತ್ರೀಂ ಸವಿತ್ರೀಂ ಪ್ರಕೃತಿಮವಿಕೃತಿಂ ವಿಶ್ವಶಕ್ತಿಂ ವಿಧಾತ್ರೀಂ,
ವಿಷ್ಣೋರ್ವಿಶ್ವಾತ್ಮನಸ್ತಾಂ ವಿಪುಲ ಗುಣಮಯೀಂ ಪ್ರಾಣನಾಥಾಂ ಪ್ರಣೌಮಿ॥ ॥೯॥

ಸತ್ವ, ರಜಸ್ಸು, ತಪಸ್ಸು--ಎಂಬ ಅಪರಿಚ್ಛಿನ್ನಗಳಾದ ಈ ಮೂರು ಗುಣಗಳ ಸಮವಾದ ಪರಿಪೂರ್ಣ ರೂಪವು ಮಾಯಾ ಪ್ರಕೃತಿಯೆನಿಸುವುದು. ಪರಮೇಶ್ವರನಿಗೆ ಉಪಾಧಿಯಾಗಿ, ಅಧೀನವಾಗಿ, ಶಕ್ತಿಯೆನಿಸಿರುವ ಈ ಮಾಯಾ ಪ್ರಕೃತಿಯೇ ಸಮಸ್ತ ದ್ವೈತ ಪ್ರಪಂಚಕ್ಕೂ ಉಪಾದಾನ ಕಾರಣ ವಾಗಿದೆಯೆಂದು 'ಮಾಯಾಂ ತು ಪ್ರಕೃತಿಂ ವಿದ್ಯಾತ್' ಎಂಬ ಶ್ರುತಿಯು ಬೋಧಿಸುತ್ತದೆ. ಜಡವಾದ ಈ ಮಾಯಾ ಶಕ್ತಿಯ ಕಲ್ಪನೆಗೆ ಅಧಿಷ್ಠಾನ ವಾಗಿರುವ ಪರಮಾತ್ಮನಿಂದಲೇ ಪ್ರೇರಿತವಾಗಿ ಈ ಪ್ರಕೃತಿಯು ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾಗಿರುತ್ತದೆ. ಇಂಥ ಮಾಯಾ ಶಕ್ತಿಗೆ ಅಧಿಷ್ಠಾನವಾಗಿರುವ ಕಾರಣದಿಂದಲೇ, ನಿರ್ವಿಶೇಷನಾದ ಪರಮಾತ್ಮನು ಜಗತ್ಕಾರಣನೆಂದು ಹೇಳಲ್ಪಡುತ್ತಾನೆಯೇ ಹೊರತು, ವಸ್ತುತಃ ಅಸಂಗನೂ ನಿರ್ವಿಕಾರನೂ ಆಗಿರುವ ಅವನು ಕಾರಣನಾಗುವುದಿಲ್ಲ. ಮಾಯೋಪಾಧಿಕ ನಾದ ಪರಮಾತ್ಮನೇ ಪರಮೇಶ್ವರನೆನಿಸುವನು. ಈ ಪರಮೇಶ್ವರನು ಮಾಯೆಯ ಗುಣಗಳ ಮೂಲಕ ಬ್ರಹ್ಮ ವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿ ಗಳಾಗಿ, ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕ್ರಮವಾಗಿ ಕಾರಣರಾಗಿರುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾರ್ಯದ ಸೃಷ್ಟಿ, ಸ್ಥಿತಿ ಮತ್ತು ಲಯ—ಈ ಮೂರಕ್ಕೂ ಕಾರಣವಾಗಿರುವುದು ಯಾವುದೋ, ಅದನ್ನು ಆ ಕಾರ್ಯದ ಉಪಾದಾನ ಕಾರಣವೆಂದು ಹೇಳುವರು. ಘಟವು ಮಣ್ಣಿನಿಂದ ಹುಟ್ಟಿ, ಮಣ್ಣಿನಲ್ಲಿಯೇ ಇದ್ದು, ಕಡೆಯಲ್ಲಿ ನಾಶವಾದಾಗ ಮಣ್ಣೆ ಆಗುವುದರಿಂದ, ಮಣ್ಣು ಘಟಕ್ಕೆ ಉಪಾದಾನ ಕಾರಣವಾಗಿದೆ. ಇದರಂತೆ ಆಭರಣಕ್ಕೆ ಚಿನ್ನ, ಮರದ ಕಾರ್ಯಗಳಿಗೆ ಮರ—ಈ ರೀತಿಯಲ್ಲಿ ಆಯಾ ಕಾರ್ಯಗಳಿಗೆ ಬೇರೆ ಬೇರೆ ಉಪಾದಾನ ಕಾರಣಗಳಿರುತ್ತವೆ. 'ಯತೋ ವಾ ಇಮಾನಿ ಭೂತಾನಿ ಜಾಯಂತೇ, ಯೇನ ಜಾತಾನಿ ಜೀವಂತಿ, ಯತ್ಪ್ರಯಂತ್ಯಭಿ ಸಂವಿಶಂತಿ "ತದ್ಬ್ರಹ್ಮ"—ಎಂದು, ಸಮಸ್ತ ಜಗತ್ತೂ ಬ್ರಹ್ಮದಿಂದಲೇ ಹುಟ್ಟಿ ಅದರಿಂದಲೇ ಜೀವಿಸಿದ್ದು, ಅದರಲ್ಲಿಯೇ ಲಯಹೊಂದುತ್ತದೆಂದು ಶ್ರುತಿಯು ತಿಳಿಸುವುದರಿಂದ, ಜಗತ್ತಿಗೆಲ್ಲ ಬ್ರಹ್ಮವು ಉಪಾದಾನ ಕಾರಣವೆಂದು ಸ್ಪಷ್ಟವಾಗುವುದು. ಆದರೆ, ಮಣ್ಣು, ಮರ, ಮುಂತಾದವುಗಳಂತೆ ಬ್ರಹ್ಮವು ವಿಕಾರಹೊಂದುವುದಿಲ್ಲ. ಮತ್ತೇನೆಂದರೆ, ಹಗ್ಗವು ವಿಕಾರ ಹೊಂದದೆ, ತನ್ನ ರೂಪದಲ್ಲಿಯೇ ಇದ್ದು ಹಗ್ಗದ ಹಾವೆಂಬ ಕಾರ್ಯವನ್ನು ಉಂಟುಮಾಡುತ್ತದೆ; ಇದರಂತೆ, ಬ್ರಹ್ಮವು ನಿರ್ವಿಕಾರವಾಗಿಯೇ ಇದ್ದು ಜಗತ್ತನ್ನು ಉಂಟು ಮಾಡುತ್ತದೆ. ಇಂಥದ್ದನ್ನು ವಿವರ್ತ ಕಾರಣವೆನ್ನುತ್ತಾರೆ. ಹೀಗೆ ಬ್ರಹ್ಮವು ಜಗತ್ತಿಗೆಲ್ಲ ವಿವರ್ತೋಪಾದಾನ ಕಾರಣವಾಗಿದೆ.

ಮತ್ತು ರಜ್ಜುವು ಸ್ವತಃ ಹಗ್ಗದ ಹಾವಿಗೆ ಕಾರಣವಾಗುವುದಿಲ್ಲ. ಹಗ್ಗದಲ್ಲಿರುವ ಮಾಯಾ ಶಕ್ತಿಯ ಮೂಲಕವೇ ಆ ಹಗ್ಗದ ಹಾವಿಗೆ ಕಾರಣವಾಗುತ್ತದೆ. ಹೀಗೆಯೇ ಬ್ರಹ್ಮವು ಮಾಯಾ ಪ್ರಕೃತಿ ರೂಪವಾದ ಶಕ್ತಿಯಿಂದಲೇ ಜಗತ್ತಿಗೆ ವಿವರ್ತೋಪಾದಾನ ಕಾರಣವಾಗಿರುವುದು. ಹಗಲಿರುಳುಗಳಂತೆ ನಿರಂತರವೂ ನಡೆದುಬರುತ್ತಿರುವ ಜಗತ್ತಿನ ಈ ಸೃಷ್ಟಿಸ್ಥಿತಿಲಯಗಳಿಗೆ ಹೀಗೆ ಕಾರಣವಾಗಿರುವ ಈ ಮಾಯಾ ಪ್ರಕೃತಿಯೂ ಅನಾದ್ಯನಂತವಾಗಿ ಸ್ಥಿರವೂ ದೃಢವೂ ಆಗಿರುತ್ತದೆ. ಲೌಕಿಕಗಳಾದ ಆಯಾ ಕಾರ್ಯವಸ್ತುಗಳಲ್ಲಿ ಈ ಮಾಯಾ ಶಕ್ತಿಯೂ ಬೇರೆ ಬೇರೆಯಾಗಿದ್ದು ಕಾರ್ಯ ಕಾರಿಯಾಗಿರುತ್ತದೆ. ಬ್ರಹ್ಮ ವಿಷ್ಣು ಮಹೇಶ್ವರರ ಈ ಶಕ್ತಿಗಳು ವಾಣೀ ಲಕ್ಷ್ಮೀ ಗೌರೀ—ಎಂದು ಹೇಳಲ್ಪಡುತ್ತವೆ. ಈ ಅಭಿಪ್ರಾಯವನ್ನು ಇಲ್ಲಿ ವಿವರಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪುಂಸಃ ಸನ್ನಿದಾನೇನ--ನಿರ್ವಿಕಾರನಾದ ಪರಮಾತ್ಮನ ಸಾನ್ನಿಧ್ಯ ಮಾತ್ರದಿಂದಲೇ, **ಸಕಲಂ ಸತ್ವಜಾಲಂ**--ಸಮಸ್ತ ಚೇತನಾಚೇತನ ವಸ್ತು ಸಮೂಹವನ್ನೂ, **ಯಾ ಸೂತೇ**—ಯಾವ ಮಾಯಾ ಪ್ರಕೃತಿಯು ಸೃಜಿಸುತ್ತದೆಯೋ; **ಚರಂ ಅಚರಂ ಇದಂ ಭೂತಜಾತಂ**--ಚರಾಚರ ರೂಪವಾಗಿರುವ ಈ ವಸ್ತು ಸಮೂಹವನ್ನು; **ಭೂತಯೇ**--ಲೋಕದ ಏಳಿಗೆಗಾಗಿ; **ಸತ್ವಯೋಗಾತ್**--ತನ್ನ ಸಾಮರ್ಥ್ಯದಿಂದ; **ಯಾ ಧತ್ತೇ**--ಯಾವುದು ಧರಿಸಿಕೊಂಡಿರುವುದೋ; **ಧಾತ್ರೀಂ**--ಹೀಗೆ ಸಕಲಕ್ಕೂ ಧಾರಕವೂ; **ಸ್ಥಾತ್ರೀಂ**--ಸ್ಥಿರವಾಗಿರುವುದೂ; **ಸವಿತ್ರೀಂ** -- ಸೃಷ್ಟಿಸುವರಿಥವೂ; **ಅವಿಕೃತಾ ಪ್ರಕೃತಿಂ**--ನಶ್ವರವಾಗದ ಪ್ರಕೃತಿ ಸ್ವರೂಪವಾಗಿರುವ; **ವಿಶ್ವ ಶಕ್ತಿಂ**--ಜಗತ್ತಿನ ಶಕ್ತಿರೂಪವಾಗಿರುವ; **ವಿಧಾತ್ರೀಂ**--ವಿಚಿತ್ರವಾದ ಕಾರ್ಯವನ್ನು ಮಾಡುವ; **ವಿಶ್ವಾತ್ಮನಃ**--ಜಗದುಪಾದಾನ ಕಾರಣನಾಗಿ ಜಗದ್ರೂಪನಾಗಿರುವ; **ವಿಪುಲಗುಣಮಯೀಂ**--ಅಪಾರವೂ, ವಿಶಾಲವೂ ಆಗಿರುವ ಸತ್ವಾದಿ ಗುಣಗಳ ಸ್ವರೂಪಳಾದ; **ವಿಷ್ಣೋಃ ಪ್ರಾಣನಾಥಾಂ**—ಶ್ರೀ ಮಹಾ ವಿಷ್ಣುವಿನ ಪ್ರಿಯ ಪತ್ನಿಯಾಗಿರುವ ಶ್ರೀ ಮಹಾಲಕ್ಷ್ಮಿಯನ್ನು; **ಪ್ರಣೌಮಿ**—ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ.

ಮಾಯಾ ಪ್ರಕೃತಿಯಿಂದ ಹುಟ್ಟಿರುವ ಈ ನಾನಾ ವಿಧ ಶರೀರಗಳಲ್ಲಿ ಮನುಷ್ಯ ಶರೀರವೇ ಶ್ರೇಯಃಸಿಗೆ ಪರಮ ಸಾಧನವಾಗಿರುತ್ತದೆ. ' ತಾಭ್ಯೋ ಗಾವಮಾನಯತ್, ತಾಭ್ಯೋ ಅಶ್ವಮಾನಯತ್, ತಾಭ್ಯಃ ಪುರುಷಮಾನಯತ್ '—ಎಂದು ಐತರೇಯೋಪನಿಷತ್ತಿನಲ್ಲಿ ಇದು ಸ್ಪಷ್ಟವಾಗಿ ಪ್ರತಿಪಾದಿತವಾಗಿದೆ. ಕರಚರಣಾದಿ ಅವಯವಗಳಲ್ಲಿ ವೈಲಕ್ಷಣ್ಯವಿದ್ದರೂ, ದೇವಾದಿಗಳ ರೂಪವೂ ಮನುಷ್ಯಾಕಾರವೇ ಆಗಿರುತ್ತದೆ. ಇದರಂತೆ, ಸತ್ವಗುಣ ಮೂರ್ತಿಯಾದ ಶ್ರೀ ಮಹಾ ವಿಷ್ಣುವಿನ ರೂಪವೂ ಮನುಷ್ಯ ಶರೀರದ ರೂಪವೇ ಆಗಿದೆ.—೯.

ಇದುವರೆವಿಗೆ ಶ್ರೀ ಮಹಾ ವಿಷ್ಣುವಿನ ಆಯುಧಗಳನ್ನೂ ಪರಿವಾರದವರನ್ನೂ ಸ್ತುತಿಸಿ, ಈಗ ಶ್ರೀ ವಿಷ್ಣುವಿನ ರೂಪವನ್ನು ವರ್ಣಿಸುತ್ತ, ಪಾದ

Sri Vidyabharathi Book Centre, Sringeri

CC-O. In Public Domain. Digitized by eGangotri
ದಿಂದ ಶಿರಸ್ಸಿನ ಪೂರ್ತವಾಗಿ ಕ್ರಮವಾಗಿ ಸ್ತುತಿಸುತ್ತಾರೆ. ಮೊದಲು ಪಾದ ಧೂಳಿನ ಮಹತ್ವವನ್ನು ಹೇಳುತ್ತಾರೆ:—

ಯೇಭ್ಯೋऽಸೂಯದ್ಭಿರುಚ್ಚೈಃ ಸಪದಿ ಪದಮುರು ತ್ಯಜ್ಯತೇ
 ದೈತ್ಯವರ್ಗೈಃ
ಯೇಭ್ಯೋ ಧರ್ತುಂ ಚ ಮೂರ್ಧ್ನಿ ಸ್ಪೃಹಯತಿ ಸತತಂ
 ಸರ್ವಗೀರ್ವಾಣ ವರ್ಗಃ ।
ನಿತ್ಯಂ ನಿರ್ಮೂಲಯೇಯುರ್ನಿಚಿತತರಮಮೀ ಭಕ್ತಿನಿಘ್ನಾತ್ಮನಾಂ
 ನಃ
ಪದ್ಮಾಕ್ಷಸ್ಯಾಂಘ್ರಿ ಪದ್ಮದ್ವಯ ತಲ ನಿಲಯಾಃ ಪಾಂಸವಃ
 ಪಾಪಪಂಕಂ ॥ ॥೧೦॥

ಯೇಭ್ಯಃ—ಶ್ರೀ ಮಹಾ ವಿಷ್ಣುವಿನ ಪಾದತಲದಲ್ಲಿರುವ ಧೂಳುಗಳಿಗೆ; ಅಸೂಯದ್ಭಿಃ ದೈತ್ಯವರ್ಗೈಃ — ಅಸೂಯೆ ಪಡುವ ದೈತ್ಯ ಸಮೂಹಗಳಿಂದ, **ಉಚ್ಚೈಃ ಪದಂ**–ತಮ್ಮ ಅತಿಶಯ ಮಹತ್ತಾದ ಸ್ಥಾನವೂ ಸಹ; ಸಪದಿ—ಕೂಡಲೆ; **ಉರು ತ್ಯಜ್ಯತೇ**—ಪೂರ್ಣವಾಗಿ ತ್ಯಕ್ತವಾಗುತ್ತದೆ; ಸರ್ವ ಗೀರ್ವಾಣ ವರ್ಗಃ–ದೇವತಾ ಸಮೂಹವೆಲ್ಲವೂ ; **ಮೂರ್ಧ್ನಿ ಧರ್ತುಂ**—ತಲೆಯಲ್ಲಿ ಧರಿಸಲು ; **ಯೇಭ್ಯಃ ಸತತಂ ಸ್ಪೃಹಯತಿ**—ಆ ಧೂಳುಗಳಿಗಾಗಿ ಯಾವಾಗಲೂ ಇಚ್ಛಿಸುತ್ತದೆ; ಅಥ–**ಪದ್ಮಾಕ್ಷಸ್ಯ ಅಂಘ್ರಿ** ಪದ್ಮದ್ವಯತಲ ನಿಲಯಾಃ ಅಮೀ **ಪಾಂಸವಃ**—ಪುಂಡರೀಕಾಕ್ಷನಾದ ಶ್ರೀ ಮಹಾ ವಿಷ್ಣುವಿನ ಪಾದಕಮಲಗಳೆರಡರಲ್ಲಿ ಅಂಟಿಕೊಂಡಿರುವ ಈ ಪಾದ ಧೂಳಿಗಳು; **ಭಕ್ತಿನಿಘ್ನಾತ್ಮನಾಂ**—ಶ್ರೀ ವಿಷ್ಣುವಿನಲ್ಲಿ ಅಪಾರ ಭಕ್ತಿಗೆ ಅಧೀನನಾಗಿರುವ; **ನಃ**–ನಮ್ಮ; **ನಿಚಿತತರಂ ನಿತ್ಯಂ ಪಾಪ ಪಂಕಂ**—ದೃಢವಾಗಿ ಸಂಚಿತವಾಗಿರುವ ಪಾಪದ ಕೆಸರನ್ನು; **ನಿರ್ಮೂಲಯೇಯುಃ**—ಮೂಲಸಹಿತವಾಗಿ ನಾಶ ಮಾಡಲಿ—೧೦.

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾದ ತಳದಲ್ಲಿರುವ ಮಂಗಳಕರಗಳಾದ ರೇಖೆಗಳನ್ನು ವರ್ಣಿಸು ತ್ತಾರೆ:—

ರೇಖಾ ಲೇಖಾಭಿವಂದ್ಯಾಶ್ಚರಣತಲಗತಾಶ್ಚಕ್ರಮತ್ಸ್ಯಾದಿ ರೂಪಾಃ
ಸ್ನಿಗ್ಧಾಃ ಸೂಕ್ಷ್ಮಾಃ ಸುಜಾತಾ ಮೃದುಲಲಿತತರ ಕ್ಷಾಮ
ಸೂತ್ರಾಯಮಾಣಾಃ ।
ದದ್ಯುರ್ನೋ ಮಂಗಳಾನಿ ಭ್ರಮರಭರಜುಷಾ ಕೋಮಲೇನಾಬ್ಧಿ
ಜಾಯಾಃ
ಕಮ್ರೇಣಾಮ್ರೇಡ್ಯಮಾನಾಃ ಕಿಸಲಯಮೃದುನಾ ಪಾಣಿನಾ
ಚಕ್ರಪಾಣೇಃ ॥ ॥೧೧॥

ಚಕ್ರಪಾಣೇಃ—ಶ್ರೀ ಮಹಾವಿಷ್ಣುವಿನ; **ಚರಣತಲಗತಾಃ**—ಪಾದದ ಕೆಳಭಾಗದಲ್ಲಿರುವ; **ಸ್ನಿಗ್ಧಾಃ**—ಮೃದುವಾಗಿಯೂ; **ಸೂಕ್ಷ್ಮಾಃ**-ಸೂಕ್ಷ್ಮವಾಗಿಯೂ; **ಸುಜಾತಾಃ**—ಸ್ಪಷ್ಟವಾಗಿಯೂ: ಆದ್ದರಿಂದ **ಮೃದುಲಲಿತತರಕ್ಷಾಮಸೂತ್ರಾಯಮಾಣಾಃ** — ಮೃದುವಾಗಿ ಮನೋಹರವಾಗಿ ಚಿತ್ರತರವಾಗಿರುವ ರೇಷ್ಮೆಯ ದಾರಗಳಿಂದ ಹಾಕಿರುವ ಕಸೂತಿಯಂತೆ ಶೋಭಾಯಮಾನವಾಗಿರುವ; **ಚಕ್ರಮತ್ಸ್ಯಾದಿರೂಪಾಃ** -- ಚಕ್ರ, ಮೀನು, ಶಂಖ, ಪದ್ಮ, ಮುಂತಾದ ಆಕಾರಗಳುಳ್ಳ; **ಲೇಖಾಭಿವಂದ್ಯಾಃ**-ದೇವಾದಿಗಳಿಂದ ನಮಸ್ಕರಿಸಲ್ಪಡುವ; **ಅಬ್ಧಿಜಾಯಾಃ**--ಸಮುದ್ರ ತನಯೆಯಾದ ಶ್ರೀ ಲಕ್ಷ್ಮೀದೇವಿಯ; **ಕಮ್ರೇಣ**--ಮನೋಹರವಾದ; **ಭ್ರಮರಭರಜುಷಾ**—ಕಂಕಣಾದಿಗಳಿಂದ ಮಂಜುಳ ಶಬ್ದವನ್ನು ಮಾಡುವ; **ಕೋಮಲೇನ**—ಅತ್ಯಂತ ಮೃದುವಾದ; **ಪಾಣಿನಾ ಆಮ್ರೇಡ್ಯಮಾನಾಃ**—ಕರಕಮಲದಿಂದ ಮೃದುವಾಗಿ ಮತ್ತೆ ಮತ್ತೆ ಲಾಲಿಸಲ್ಪಡುತ್ತಿರುವ; **ರೇಖಾಃ**—ದಿವ್ಯ ಲಕ್ಷಣದ ರೇಖೆಗಳು; **ನಃ ಮಂಗಳಾನಿ ದದ್ಯುಃ**—ನಮಗೆ ಮಂಗಳಕರಗಳಾದ ಇಷ್ಟಾರ್ಥಗಳನ್ನು ಕೊಡಲಿ—೧೧.

Sri Vidyabharathi Book Centre, Sringeri

CC-O. In Public Domain. Digitized by eGangotri

ಈಗ ಸಾಕ್ಷಾತ್ತಾಗಿ ಶ್ರೀ ವಿಷ್ಣು ಪಾದಗಳನ್ನು ಪ್ರಾರ್ಥಿಸುತ್ತಾರೆ—

ಯಸ್ಮಾದಾಕ್ರಾಮತೋ ದ್ಯಾಂ ಗರುಡ ಮಣಿಶಿಲಾಕೇತು ದಂಡಾಯಮಾನಾತ್ ಆಶ್ಚ್ಯೋತಂತೀ ಬಭಾಸೇ ಸುರಸರಿದಮಲಾವೈಜಯಂತೀವ ಕಾಂತಾ ।
ಭೂಮಿಷ್ಠೋ ಯಸ್ತಥಾನ್ಯೋ ಭುವನ ಗೃಹಬೃಹತ್ಸ್ತಂಭಶೋಭಾಂ ದಧಾನಃ ಪಾತಾಮೇತೌ ಪಯೋಜೋದರ ಲಲಿತತಲೌ ಪಂಕಜಾಕ್ಷಸ್ಯ ಪಾದೌ ॥೧೨॥

ದ್ಯಾಂ ಆಕ್ರಾಮತಃ—ಸ್ವರ್ಗವನ್ನು ಆಕ್ರಮಿಸುತ್ತಿದ್ದ ; **ಗರುಡಮಣಿಶಿಲಾಕೇತು ದಂಡಾಯಮಾನಾತ್**—ಇಂದ್ರ ನೀಲ ಮಣಿಯ ಕಲ್ಲಿನ ಕಂಬದಂತೆ ಎತ್ತರವಾಗಿಯೂ ದೃಢವಾಗಿಯೂ ಇದ್ದ ; **ಯಸ್ಮಾತ್**—ಯಾವ ಶ್ರೀ ವಿಷ್ಣುವಿನ ಒಂದು ಪಾದದಿಂದ ; **ಆಶ್ಚ್ಯೋತಂತೀ**—ಸುರಿದು ಬರುತ್ತಿದ್ದ ; **ಅಮಲಾ ಸುರಸರಿತ್**—ಶುಭ್ರ ವರ್ಣದ ದೇವಗಂಗೆಯು ; **ಕಾಂತಾ ವೈಜಯಂತೀ ಇವ ಬಭಾಸೇ**—ರಮ್ಯವಾದ ಬಾವುಟದಂತೆ ಶೋಭಿಸಿತೋ ; **ತಥಾ**—ಹಾಗೆಯೇ ; **ಭೂಮಿಷ್ಠಃ**—ನೆಲದ ಮೇಲಿದ್ದ ; **ಅನ್ಯಃ**—ಮತ್ತೊಂದು ಪಾದವು ; **ಭುವನ ಗೃಹಬೃಹತ್ಸ್ತಂಭ ಶೋಭಾಂ ದಧಾನಃ ಬಭಾಸೇ**—ಬ್ರಹ್ಮಾಂಡವೆಂಬ ಮನೆಗೆ ಆಧಾರಭೂತವಾಗಿರುವ ದೃಢವಾದ ದೊಡ್ಡ ಕಂಬದ ಶೋಭೆಯನ್ನು ಧರಿಸಿ ಪ್ರಕಾಶಿಸಿತೋ ; ಅಂಥ **ಪಯೋಜೋದರ ಲಲಿತತಲೌ**— ಕಮಲದ ಮಧ್ಯಭಾಗದಂತೆ ಅತ್ಯಂತ ಕೋಮಲಗಳಾದ ತಲಭಾಗಗಳನ್ನುಳ್ಳ ; **ಪಂಕಜಾಕ್ಷಸ್ಯ ಏತೌ ಪಾದೌ**—ಕಮಲ ನೇತ್ರನಾದ ಶ್ರೀಮಹಾವಿಷ್ಣುವಿನ ಈ ಎರಡು ಪಾದಗಳು ; **ಪಾತಾಂ**—ನಮ್ಮನ್ನು ಕಾಪಾಡಲಿ.—೧೨.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ವಿಷ್ಣುವಿನ ಪಾದಗಳ ಮಹಿಮಾತಿಶಯವನ್ನು ಮತ್ತೆ ವರ್ಣಿಸುತ್ತಾರೆ.—

ಆಕ್ರಾಮದ್ಭ್ಯಾಂ ತ್ರಿಲೋಕೀಮಸುರಸುರಪತೀ ತತ್ಕ್ಷಣಾದೇವ ನೀತೌ ಯಾಭ್ಯಾಂ ವೈರೋಚನೀಂದ್ರೌ ಯುಗಪದಪಿ ವಿಪತ್ಸಂಪದೋರೇಕಧಾಮ । ತಾಭ್ಯಾಂ ತಾಮ್ರೋದರಾಭ್ಯಾಂ ಮುಹುರಹಮಜಿತಸ್ಯಾಂಚಿತಾಭ್ಯಾಮುಭಾಭ್ಯಾಂ ಪ್ರಾಜ್ಯೈಶ್ವರ್ಯಪ್ರದಾಭ್ಯಾಂ ಪ್ರಣತಿಮುಪಗತಃ ಪಾದಪಂಕೇರುಹಾಭ್ಯಾಂ ॥೧೩॥

ತ್ರಿಲೋಕೀಂ ಆಕ್ರಾಮದ್ಭಿಃ ಯಾಭ್ಯಾಂ—ಮೂರು ಲೋಕಗಳನ್ನೂ ಆಕ್ರಮಿಸಿಕೊಳ್ಳುತ್ತಿದ್ದ ಯಾವ ಪಾದಗಳಿಂದ; **ಅಸುರಸುರಪತೀ ವೈರೋಚನೀಂದ್ರೌ**—ಅಸುರರ ಮತ್ತು ಸುರರ ರಾಜಗುರುಗಳಾದ ವಿರೋಚನಸುತನಾದ ಬಲಿ ಮತ್ತು ದೇವೇಂದ್ರ-ಇವರೀರ್ವರೂ ; **ಯುಗಪತ್**—ಒಟ್ಟಿಗೆ ಒಂದೇಕಾಲದಲ್ಲಿ; **ತತ್ಕ್ಷಣಾತ್ ಏವ**—ಆ ಕೂಡಲೇ; **ವಿಪತ್ಸಂಪದೋಃ ಏಕಧಾಮ ನೀತೌ**—ವಿಪತ್ತಿನ ಮತ್ತು ಸಂಪತ್ತಿನ ಪರಮೌನ್ನತ್ಯಸ್ಥಿತಿಯನ್ನು ಹೊಂದಿಸಲ್ಪಟ್ಟರೋ ; **ತಾಭ್ಯಾಂ**—ಅಂಥ ; **ತಾಮ್ರೋದರಾಭ್ಯಾಂ**—ರಕ್ತವರ್ಣದ ಒಳಭಾಗವನ್ನುಳ್ಳ ; **ಅಂಚಿತಾಭ್ಯಾಂ**—ಪೂಜ್ಯಗಳಾದ ; **ಪ್ರಾಜ್ಯೈಶ್ವರ್ಯಪ್ರದಾಭ್ಯಾಂ**—ಪರಮೋತ್ಕೃಷ್ಟವಾದ ಸಂಪತ್ತನ್ನು ಕರುಣಿಸುವಂಥ; **ಅಜಿತಸ್ಯ ಉಭಾಭ್ಯಾಂ ಪಾದಪಂಕೋರುಹಾಭ್ಯಾಂ**—ಶ್ರೀ ಮಹಾವಿಷ್ಣುವಿನ ಆ ಎರಡು ಪಾದಕಮಲಗಳಿಗೂ ; **ಪ್ರಣತಿಂ ಉಪಗತಃ**—ನಮಸ್ಕಾರವನ್ನು ಅರ್ಪಿಸುತ್ತೇನೆ.

ವಿರೋಚನಾಸುರನ ಮಗನಾದ ಬಲಿಯು ದೈತ್ಯಸೈನ್ಯದೊಡನೆ ಸ್ವರ್ಗವನ್ನು ಮುತ್ತಿಗೆಹಾಕಿ ದೇವತೆಗಳನ್ನು ಓಡಿಸಿ ಮೂರುಲೋಕಗಳಿಗೂ ಚಕ್ರವರ್ತಿಯಾದನು. ಶುಕ್ರಾಚಾರ್ಯರ ಉಪದೇಶವನ್ನು ಅನುಸರಿಸಿ ಧರ್ಮದಿಂದ ರಾಜ್ಯಭಾರವಮಾಡುತ್ತಿದ್ದ ಬಲಿಚಕ್ರವರ್ತಿಯನ್ನು ನಿರಾಕರಿಸುವುದು ಯಾರಿಗೂ ಸಾಧ್ಯವಾಗಲಿಲ್ಲ. ಶ್ರೀಮಹಾವಿಷ್ಣುವು ವಾಮನಾವತಾರವಮಾಡಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಹ್ಮಚಾರಿಯ ವೇಷದಿಂದ ಬಲಿಯು ನಡೆಸುತ್ತಿದ್ದ ಯಜ್ಞಶಾಲೆಗೆ ಬಂದು ಭಿಕ್ಷೆಬೇಡಿದನು. ಲೋಕೋತ್ತರ ತೇಜಸ್ಸಿನಿಂದ ಬೆಳಗುತ್ತಿದ್ದ ವಟುವನ್ನು ಕಂಡು ಕಡು ಸಂತಸಗೊಂಡ ಬಲಿಯು ಬೇಕಾದುದನ್ನು ಬೇಡು-ಎಂದು ಹೇಳಿದನು. ಆಗ ಆ ವಟು ವೇಷದ ವಿಷ್ಣುವು ತನ್ನ ಹೆಜ್ಜೆಯಲ್ಲಿ ಮೂರು ಹೆಜ್ಜೆಯಷ್ಟು ಮಾತ್ರ ಸ್ಥಳವನ್ನು ಕೊಡು-ಎಂದು ಕೇಳಿದನು. ಇದನ್ನು ಕೇಳಿ ಆಶ್ಚರ್ಯ ಪಡುತ್ತಿದ್ದ ಬಲಿಯನ್ನು ಕುರಿತು ಶುಕ್ರಾಚಾರ್ಯರು—ಇದು ವಿಷ್ಣುವಿನ ವಂಚನೆ ಎಂದು ಹೇಳಿದರೂ ಕೇಳದೆ ಬಲಿಯು ವಟುವಿನ ಇಷ್ಟದಂತೆ ಅವನ ಮೂರು ಹೆಜ್ಜೆಗಳಷ್ಟು ಸ್ಥಳವನ್ನು ಕೊಟ್ಟೆನೆಂದು ಧಾರೆಯೆರೆದನು. ಆ ಕ್ಷಣವೇ ವಾಮನನು ದೊಡ್ಡದಾಗಿ ಬೆಳೆಯುತ್ತ, ಒಂದು ಹೆಜ್ಜೆಯಿಂದ ಮೇಲಿನ ಲೋಕಗಳನ್ನೂ, ಇನ್ನೊಂದರಿಂದ ಕೆಳಗಿನ ಲೋಕಗಳನ್ನೂ ಹೀಗೆ ಹದಿನಾಲ್ಕು ಲೋಕಗಳ ಬ್ರಹ್ಮಾಂಡವನ್ನೆಲ್ಲ ಆಕ್ರಮಿಸಿದನು. ಮೂರನೆಯ ಹೆಜ್ಜೆಗೆ ಸ್ಥಳವೆಲ್ಲಿ? ಎಂದು ಕೇಳಲಾಗಿ, ಉಪಾಯಾಂತರವನ್ನು ಕಾಣದೆ ಬಲಿಚಕ್ರವರ್ತಿಯು ತನ್ನ ತಲೆಯನ್ನು ಒಡ್ಡಿದನು. ಆಗ ಆ ವಿಷ್ಣುವು ಬಲಿಯ ತಲೆಯ ಮೇಲೆ ಕಾಲನ್ನು ಇಟ್ಟು ಅವನನ್ನು ಪಾತಾಳಕ್ಕೆ ತಳ್ಳಿದನು. ಅನಂತರ ದಾನವರೆಲ್ಲ ಪಾತಾಳವನ್ನು ಸೇರಲು, ಇಂದ್ರನು ದೇವತೆಗಳೊಡನೆ ಮತ್ತೆ ಸ್ವರ್ಗವನ್ನು ಹೊಂದಿ ತ್ರಿಲೋಕಾಧಿಪತಿಯಾದನು. ಹೀಗೆ, ಶ್ರೀ ವಿಷ್ಣುವು ಮೂರು ಲೋಕಗಳನ್ನು ಆಕ್ರಮಿಸಿದ ಒಂದೇ ಕ್ಷಣದಲ್ಲಿ ಬಲಿಯು ಮಹಾ ವಿಪತ್ತನ್ನು ಇಂದ್ರನು ಮಹಾಸಂಪತ್ತನ್ನು ಪಡೆದನು ; ಇದನ್ನು ಮಾಡಿದ ಮಹಿಮೆಯು ಶ್ರೀ ವಿಷ್ಣುವಿನ ಪಾದಕಮಲಗಳದ್ದೇ ಆಗಿದೆ—೧೩.

ಭಕ್ತ್ಯತಿಶಯದಿಂದ ಶ್ರೀ ವಿಷ್ಣುವಿನ ಪಾದಕಮಲಗಳ ಮಹಿಮೆಯನ್ನು ವರ್ಣಿಸುತ್ತ ನಮಸ್ಕರಿಸುತ್ತಾರೆ—

ಯೇಭ್ಯೋ ವರ್ಣಶ್ಚತುರ್ಥಶ್ಚರಮುತ ಉದಭೂದಾದಿಸರ್ಗೇ
ಪ್ರಜಾನಾಂ ಸಾಹಸ್ರೀ ಚಾಪಿ ಸಂಖ್ಯಾ ಪ್ರಕಟಮಭಿಹಿತಾ
ಸರ್ವವೇದೇಷು ಯೇಷಾಂ ।

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯಾಪ್ತಾ ವಿಶ್ವಂಭರಾ ಯೈರತಿವಿತತತನೋರ್ವಿಶ್ವಮೂರ್ತೇ
ರ್ವಿರಾಜೋ ವಿಷ್ಣೋಸ್ತೇಭ್ಯೋಮಹದ್ಭ್ಯಃ ಸತತಮಪಿ ನಮೋ
ಽಸ್ತ್ವಂಘ್ರಿಪಂಕೇರುಹೇಭ್ಯಃ || ||೧೪||

ಪ್ರಜಾನಾಂ ಆದಿಸರ್ಗೇ—ಸೃಷ್ಟಿಯ ಆದಿಯಲ್ಲಿ ಪ್ರಜೆಗಳ ಸೃಷ್ಟಿಯಾಗುವಾಗ; **ಚರಮತಃ**—ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಎಂಬ ಮೂರು ವರ್ಣಗಳ ಸೃಷ್ಟಿಯ ಅನಂತರ ನಾಲ್ಕನೆಯದಾಗಿ; **ಚತುರ್ಥಃ ವರ್ಣಃ**—ನಾಲ್ಕನೆಯ ಶೂದ್ರವರ್ಣವು; **ಯೇಭ್ಯಃ ಉದಭೂತ್**—ಯಾವ ವಿಷ್ಣುವಿನ ಪಾದಗಳಿಂದ ಉಂಟಾಯಿತೋ; **ಸರ್ವವೇದೇಷು**—ವೇದಗಳಲ್ಲೆಲ್ಲ; **ಯೇಷಾಂ**—ಯಾವ ಪಾದಗಳಿಗೆ; **ಸಾಹಸ್ರೀ ಸಂಖ್ಯಾ ಪ್ರಕಟಂ ಅಭಿಹಿತಾ**—ಸಹಸ್ರ ಸಂಖ್ಯಾಕಗಳೆಂದು ಸ್ಪಷ್ಟವಾಗಿ ಹೇಳಿರುವುದೋ; **ಅತಿವಿತತತನೋಃ**— ಅತ್ಯಂತವಾಗಿ ವ್ಯಾಪಕವಾಗಿರುವ ಶರೀರವನ್ನುಳ್ಳ; **ವಿಶ್ವಮೂರ್ತೇಃ**—ಜಗದಾಕಾರನಾದ; **ವಿರಾಜಃ**—ವಿರಾಟ್ಪುರುಷನ; **ಯೈಃ**—ಯಾವ ಪಾದಗಳಿಂದ; **ವಿಶ್ವಂಭರಾ ವ್ಯಾಪ್ತಾ**—ಜಗತ್ತೇ ವ್ಯಾಪ್ತವಾಗಿದೆಯೋ; **ವಿಷ್ಣೋಃ**—ಆ ಶ್ರೀ ಮಹಾವಿಷ್ಣುವಿನ; **ಮಹದ್ಭ್ಯಃ**—ಮಹಿಮಶಾಲಿಗಳಾದ; **ಪಾದಪಂಕೇರುಹೇಭ್ಯಃ**—ಪಾದಕಮಲಗಳಿಗೆ; **ಸತತಂ ಅಪಿ**—ಯಾವಾಗಲೂ; **ನಮಃ ಅಸ್ತು**—ನಮಸ್ಕಾರವು ಅರ್ಪಿತವಾಗಲಿ. —೧೪

ಕಾಲಿನ ಬೆರಳುಗಳನ್ನು ಸ್ತುತಿಸುತ್ತಾರೆ.—

ವಿಷ್ಣೋಃಪಾದದ್ವಯಾಗ್ರೇವಿಮಲನಖಮಣಿಭ್ರಾಜಿತಾ ರಾಜತೇಯಾ
ರಾಜೀವಸ್ಯೇವ ರಮ್ಯಾ ಹಿಮಜಲಕಣಿಕಾಲಂಕೃತಾಗ್ರಾ ದಲಾಲೀ ।
ಅಸ್ಮಾಕಂ ವಿಸ್ಮಯಾರ್ಹಾಣ್ಯಖಿಲಮುನಿಜನಪ್ರಾರ್ಥನೀಯಾನಿ ಸೇಯಂ
ದದ್ಯಾದಾದ್ಯಾನವದ್ಯಾ ತತಿರತಿರುಚಿರಾ ಮಂಗಲಾನ್ಯಂಗುಲೀನಾಂ ||೧೫||

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷ್ಣೋಃ ಪಾದದ್ವಯಾಗ್ರೇ — ಶ್ರೀ ವಿಷ್ಣುವಿನ ಎರಡು ಹೆಜ್ಜೆಗಳ ತುದಿಯ ಭಾಗಗಳಲ್ಲಿ; **ವಿಮಲನಖಮಣಿಭ್ರಾಜಿತಾಃ** — ಶುಭ್ರಗಳಾದ ಉಗುರುಗಳೆಂಬ ರತ್ನಗಳಿಂದ ಪ್ರಕಾಶಮಾನವಾಗಿ; **ಹಿಮ ಜಲಕಣಿಕಾಲಂ ಕೃತಾಗ್ರಾ ರಾಜೀವಸ್ಯ ದಲಾಲೀ ಇವ ರಮ್ಯಾ ಯಾ ರಾಜತೇ** — ಹಿಮ ಜಲದ ತುಂತುರು ಹನಿಗಳಿಂದ ಅಲಂಕೃತಗಳಾಗಿರುವ ಕಮಲ ಪುಷ್ಪದ ದಳ ಗಳಂತೆ ರಮ್ಯವಾಗಿ ಯಾವುದು ಶೋಭಿಸುತ್ತಿದೆಯೋ ಸಾ ಇಯಂ — ಆ ಈ; **ಅತಿರುಚಿರಾ ಆದ್ಯಾ ಅನವದ್ಯಾ ಅಂಗುಲೀನಾಂ ತತಿಃ** — ಅತ್ಯಂತ ಸುಂದರಗಳಾಗಿರುವ, ಮೂಲಕಾರಣವಾಗಿ ಸಮಸ್ತದೋಷ ರಹಿತಗಳಾಗಿರುವ, ಕಾಲು ಬೆರಳುಗಳಸಮೂಹವು; **ಅಸ್ಮಾಕಂ** — ನಮಗೆ; **ಅಖಿಲ ಮುನಿಜನ ಪ್ರಾರ್ಥನೀಯಾನಿ** — ಮುನಿಜನರೆಲ್ಲರಿಂದಲೂ ಬಯಸಲ್ಪಡುವಂಥ ಅತ್ಯು ತ್ತಮಗಳಾದ; ಆದ್ದರಿಂದಲೇ, **ವಿಸ್ಮಯಾರ್ಹಾಣಿ** — ಎಲ್ಲರಿಗೂ ಪರಮಾ ಶ್ಚರ್ಯಕರಗಳಾದ; **ಮಂಗಳಾನಿ ದದ್ಯಾಃ** — ಮಂಗಳಕರಗಳಾದ ಸೌಭಾಗ್ಯ ಗಳನ್ನು ಅನುಗ್ರಹಿಸಲಿ. — ೧೫

ಕಾಲುಬೆರಳುಗಳನ್ನು ಹೀಗೆ ವರ್ಣಿಸಿ, ಈಗ ಈ ಬೆರಳುಗಳ ಉಗುರು ಗಳನ್ನು ಸ್ತುತಿಸುತ್ತಾರೆ. —

ಯಸ್ಯಾಂ ದೃಷ್ಟ್ವಾಮಲಾಯಾಂ ಪ್ರತಿಕೃತಿಮಮರಾಃ ಸ್ವಾಂ ಭವಂ
ತ್ಯಾನಮಂತಃ
ಸೇಂದ್ರಾಃ ಸಾಂದ್ರೀಕೃತೇರ್ಷ್ಯಾಃ ಸ್ವಪರಸುರಕುಲಾಶಂಕಯಾತಂಕ
ವಂತಃ ।
ಸಾ ಸದ್ಯಃ ಸಾತಿರೇಕಾಂ ಸಕಲಸುಖಕರೀಂ ಸಂಪದಂ ಸಾಧಯೇನ್ನಃ
ಚಂಚಚ್ಚಾರ್ವಂಶುಚಕ್ರಾ ಚರಣನಳಿನಯೋಶ್ಚಕ್ರಪಾಣೇರ್ನಖಾಲೀ
॥೧೬॥

ಅಮರಃ ಸೇಂದ್ರಾಃ — ಇಂದ್ರನೇ ಮೊದಲಾದ ದೇವತೆಗಳು; ಆನಮಂತಃ — ಶ್ರೀ ವಿಷ್ಣುವಿನ ಪಾದಕಮಲಗಳಿಗೆ ಶಿರಸಾ ನಮಸ್ಕರಿಸುವ

Sri Vidyabharathi Book Centre, Sringeri

CC-O. In Public Domain. Digitized by eGangotri

ವರಾಗಿ; **ಅಮಲಾಯಾಂ ಯಸ್ಯಾಂ** — ಅತ್ಯಂತ ನಿರ್ಮಲವಾಗಿರುವ ಯಾವ ಉಗುರುಗಳಲ್ಲಿ; **ಸ್ವಾಂ ಪ್ರತಿಕೃತಿಂ**—ತಮ್ಮ ಪ್ರತಿಬಿಂಬಗಳನ್ನು; **ದೃಷ್ಟ್ವಾ**—ಕಂಡು; **ಸ್ವಪರ ಸುರಕುಲಾಶಂಕಯಾ ಆತಂಕವಂತಃ**—ಅಲ್ಲಿ ಕಾಣುವವರು ತನಗೆ ಬೇರೆಯಾದ ದೇವತೆಗಳೋ ಎಂಬ ಸಂದೇಹದಿಂದ ದುಃಖವುಳ್ಳವರಾಗಿ; **ಸಾಂದ್ರೀಕೃತೇರ್ಷ್ಯಾಃ ಭವಂತಿ**—ಆ ದೇವತೆಗಳಲ್ಲಿ ದೃಢವಾದ ಅಸೂಯೆಯುಳ್ಳವರಾಗುತ್ತಾರೋ; **ಚಕ್ರಪಾಣೇಃ**—ಶ್ರೀ ವಿಷ್ಣುವಿನ; **ಚಂಚಚ್ಛಾವರ್ಣಂಶುಚಕ್ರಾ**—ಹರಡುತ್ತಿರುವ ದಿವ್ಯ ಕಾಂತಿಗಳ ಗುಂಪನ್ನುಳ್ಳ; **ಚರಣನಳಿನಯೋಃ ಸಾ ನಖಾಲೀ**—ಚರಣ ಕಮಲಗಳ ಉಗುರುಗಳ ಆ ಸಮೂಹವು; **ನಃ**—ನಮಗೆ; **ಸಾತಿರೇಕಾಂ** ಅತಿಶಯವಾದ; **ಸಕಲಸುಖಕರೀಂ**—ಎಲ್ಲರಿಗೂ ಎಲ್ಲ ವಿಧದಿಂದಲೂ ಸುಖವನ್ನುಂಟುಮಾಡುವಂಥ; **ಸಂಪದಂ**—ಸೌಭಾಗ್ಯ ಸಂಪತ್ತನ್ನು; **ಸದ್ಯಃ ಸಾಧಯೇತ್**—ಈ ಕೂಡಲೆ ಸಾಧಿಸಿ ಕೊಡಲಿ—೧೬.

ಪಾದ ಯುಗ್ಮದ ಸ್ತುತಿ—

ಪಾದಾಂಭೋಜನ್ಮಸೇವಾಸಮವನತಸುರವ್ರಾತ ಭಾಸ್ವತ್ಕಿರೀಟ—
ಪ್ರತ್ಯುಪ್ತೋಚ್ಚಾವಚಾಶ್ಮಪ್ರವರಕರಗಣೈಶ್ಚಿತ್ರಿತಂ ಯದ್ವಿಭಾತಿ ।
ನಮ್ರಾಂಗಾಣಾಂ ಹರೇರ್ನೋ ಹರಿದುಪಲಮಹಾಕೂರ್ಮಸೌಂದ
ರ್ಯಹಾರಿಚ್ಛಾಯಂ ಶ್ರೇಯಃ ಪ್ರದಾಯಿ ಪ್ರಪದಯುಗಮಿದಂ
ದಾಪಯೇತ್ತಾಪಮಂತಂ॥೧೭॥

ಪಾದಾಂಭೋಜನ್ಮಸೇವಾಸಮವನತಸುರವ್ರಾತ ಭಾಸ್ವತ್ಕಿರೀಟಪ್ರತ್ಯುಪ್ತೋಚ್ಚಾವಚಾಶ್ಮಪ್ರವರಕರಗಣೈಃ—ಶ್ರೀ ವಿಷ್ಣುವಿನ ಪಾದ ಕಮಲಗಳ ಸೇವೆಗಾಗಿ ಬಂದು ಸಾಷ್ಟಾಂಗಪ್ರಣಾಮಮಾಡಿದ ದೇವತಾಸಮೂಹಗಳ ಪ್ರಕಾಶಮಾನವಾಗಿರುವ ಕಿರೀಟಗಳಲ್ಲಿ ಕೆತ್ತಿರುವ ನಾನಾ ಪ್ರಕಾರಗಳಾದ ಉತ್ತಮೋತ್ತಮ ರತ್ನಗಳ ಕಿರಣಗಳ ಸಮೂಹಗಳಿಂದ; **ಯತ್ ಚಿತ್ರಿತಂ ವಿಭಾತಿ**—ಅತ್ಯಂತ ವಿಚಿತ್ರವಾಗಿ ಯಾವ ಪಾದಾಗ್ರಗಳು ಮೆರೆಯುತ್ತಿವೆಯೋ;

Sri Vidyabharathi Book Centre, Sringeri

CC-O. In Public Domain. Digitized by eGangotri

ಇದಂ—ಇಂಥ; **ಹರೇಃ**—ಶ್ರೀ ವಿಷ್ಣುವಿನ; **ಹರಿದುಪಲ-ಮಹಾಕೂರ್ಮ ಸೌಂದರ್ಯಹಾರಿಚ್ಛಾಯಂ** — ಇಂದ್ರನೀಲಮಣಿಯಿಂದ ಮಾಡಿದ ದೊಡ್ಡ ಆಮೆಯ ಸೌಂದರ್ಯವನ್ನೂ ಮೀರಿರುವ ಕಾಂತಿಯುಳ್ಳ; **ಪ್ರಪದಯುಗಂ**—ಪಾದಾಗ್ರಗಳ ಜತೆಯು; **ನಮ್ರಾಂಗಾಣಾಂ ನಃ**—ಭಕ್ತಿಯಿಂದ ನಮಸ್ಕರಿಸಿ ಶರಣಾಗತರಾಗಿರುವ ನಮಗೆ; **ಶ್ರೇಯಃ ಪ್ರದಾಯಿ**—ಶ್ರೇಯಸ್ಸನ್ನು ಕೊಡುವಂಥದ್ದಾಗಿ; **ಪಾಪಂ ಅಂತಂ ಪ್ರಾಪಯೇತ್**—ಅದಕ್ಕೆ ಅಡ್ಡಿಯಾಗಿರುವ ಎಲ್ಲ ಪಾಪದೋಷಗಳನ್ನೂ ನಾಶಹೊಂದಿಸಲಿ—೧೭.

ಮೊಣಕಾಲುಗಳ ಸ್ತುತಿ—

ಶ್ರೀಮತ್ಯಾ ಚಾರುವೃತ್ತೇ ಕರಪರಿಮಲನಾನಂದಹೃಷ್ಟೇರಮಾಯಾಃ
ಸೌಂದರ್ಯಾಢ್ಯೇಂದ್ರ ನೀಲೋಪಲರಚಿತಮಹಾ ದಂಡಯೋಃ
ಕಾಂತಿಚೋರೇ ।
ಸೂರೀಂದ್ರೈಃ ಸ್ತೂಯಮಾನೇ ಸುರಕುಲ ಸುಖದೇ ಸೂದಿತಾರಾತಿ
ಸಂಘೇ ಜಂಘೇ ನಾರಾಯಣೀಯೇ ಮುಹುರಪಿ ಜಯತಾಮ
ಸ್ಮದಂಹೋ ಹರಂತ್ಯೌ ॥೧೮॥

ಶ್ರೀಮತ್ಯಾ—ಶೋಭಿಸುತ್ತಿರುವ; **ಚಾರುವೃತ್ತೇ**—ಮನೋಹರವಾಗಿ ದುಂಡಾಗಿರುವ; **ರಮಾಯಾಃ ಕರಪರಿಮಲನಾನಂದಹೃಷ್ಟೇ**—ಶ್ರೀಲಕ್ಷ್ಮೀದೇವಿಯ ಕರಕಮಲಗಳ ಲಾಲನೆಯಿಂದ ಹರ್ಷವನ್ನು ಹೊಂದಿರುವ; **ಸೌಂದರ್ಯಾಢ್ಯೇಂದ್ರನೀಲೋಪಲ ರಚಿತಮಹಾ ದಂಡಯೋಃ ಕಾಂತಿಚೋರೇ**—ಅತಿಶಯ ಸೌಂದರ್ಯದಿಂದ ತುಂಬಿದ ಇಂದ್ರನೀಲಮಣಿಯಿಂದ ರಚಿತವಾದ ಮಹಾದಂಡಗಳ ಕಾಂತಿಯನ್ನು ಅಪಹರಿಸಿರುವ; **ಸೂರೀಂದ್ರೈಃ ಸ್ತೂಯಮಾನೇ**—ಕವಿ ಶ್ರೇಷ್ಠರಿಂದ ಹೊಗಳಲ್ಪಡುವ; **ಸುರಕುಲಸುಖದೇ**—ದೇವತಾ ಸಮೂಹಕ್ಕೆಲ್ಲ ಸುಖವನ್ನು ಉಂಟುಮಾಡುವ; **ಸೂದಿತಾರಾತಿ ಸಂಘೇ**—ಧರ್ಮಶತ್ರುಗಳನ್ನೆಲ್ಲ ನಾಶಮಾಡುವ; **ನಾರಾಯಣೀಯೇ ಜಂಘೇ**—ಶ್ರೀಮನ್ನಾರಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಯುಗಳ ಎರಡು ಮೊಣಕಾಲುಗಳೂ; **ಅಸ್ಮದಂಹಃ ಹರಂತ್ಯೌ**—ನಮ್ಮ ಪಾಪಗಳನ್ನು ಪರಿಹರಿಸುತ್ತ; **ಜಯತಾಂ**—ಸರ್ವೋತ್ಕೃಷ್ಟಗಳಾಗಲಿ.—೧೮

ಮುಂಡಿಗಳ ಸ್ತುತಿ—

ಸಮ್ಯಕ್ಸಾಹ್ಯಂ ವಿಧಾತುಂ ಸಮಮಪಿ ಸತತಂ ಜಂಘಯೋಃ
ಖಿನ್ನಯೋರ್ಯೇ ಭಾರೀಭೂತೋರುದಂಡದ್ವಯ ಭರಣಕೃತೋ-
ಸ್ತಂಭಭಾವಂ ಭಜೇತೇ ।
ಚಿತ್ತಾದರ್ಶಂ ನಿಧಾತುಂ ಮಹಿತಮಿವ ಸತಾಂ ತೇ ಸಮುದ್ಗಾಯ-
ಮಾನೋ ವೃತ್ತಾಕಾರೇ ವಿಧತ್ತಾಂ ಹೃದಿಮುದಮಜಿತಸ್ಯಾನಿಶಂ
ಜಾನುನೀ ನಃ ॥೧೯॥

ಸಮಂ—ಒಟ್ಟಿಗೆ; **ಸತತಂ ಅಪಿ**—ಯಾವಾಗಲೂ ; **ಖಿನ್ನಯೋಃ**—ಆಯಾಸಗೊಂಡ ; **ಜಂಘಯೋಃ**—ಮೊಣಕಾಲುಗಳಿಗೆ ; **ಸಮಂ ಸತತಂ ಅಪಿ**—ಒಟ್ಟಿಗೆ ಮತ್ತು ಯಾವಾಗಲೂ ; **ಸಮ್ಯಕ್ ಸಾಹ್ಯಂ ವಿಧಾತುಂ**—ಚೆನ್ನಾಗಿಯೂ ಪೂರ್ಣವಾಗಿಯೂ ಸಹಾಯವನ್ನು ಮಾಡುವ ಉದ್ದೇಶದಿಂದ ; **ಭಾರೀ ಭೂತೋರು ದಂಡದ್ವಯ ಭರಣ ಕೃತೋ ಸ್ತಂಭಭಾವಂ**—ತೂಕವಾಗಿರುವ ದೊಡ್ಡ ಎರಡು ಕಂಬಗಳನ್ನು ಹೊರುವುದಕ್ಕೆ ಆಧಾರವಾಗಿರುವಿಕೆಯನ್ನು ; **ಯೇ**—ಯಾವ ಎರಡು ಮುಂಡಿಗಳು ; **ಭಜೇತೇ**—ವಹಿಸಿರುವುವೋ ; **ಸತಾಂ**—ಸದ್ಭಕ್ತರ ; **ಮಹಿತಂ ಚಿತ್ತಾದರ್ಶಂ ನಿಧಾತುಂ**—ಭಕ್ತಿಭಾವಭರಿತವಾಗಿ ಮಹತ್ತಾಗಿರುವ ಚಿತ್ತವೆಂಬ ಕನ್ನಡಿಯನ್ನು ಇಡುವುದಕ್ಕಾಗಿರುವ ; **ಸಮುದ್ಗಾಯಮಾನೋ**—ಚೌಕಟ್ಟಾಗಿರುವ ; **ವೃತ್ತಾಕಾರೇ**—ಸಮವಾಗಿ ದುಂಡಾಗಿರುವ ; **ಅಜಿತಸ್ಯ**—ಶ್ರೀವಿಷ್ಣುವಿನ ; **ತೇ ಜಾನುನೀ**—ಆ ಎರಡು ಮುಂಡಿಗಳು ; **ಹೃದಿ**—ನಮ್ಮ ಮನಸ್ಸಿನಲ್ಲಿ ; **ಮುದಂ**—ಸಂತೋಷವನ್ನು ; **ಅನಿಶಂ**—ಯಾವಾಗಲೂ ; **ವಿಧತ್ತಾಂ**—ಉಂಟುಮಾಡಲಿ.

ಧರ್ಮ ವಿರೋಧಿಗಳನ್ನು ನಿಗ್ರಹಿಸಿ ಲೋಕದ ನೆಮ್ಮದಿಯನ್ನು ರಕ್ಷಿಸುವ ಮಹತ್ತರವಾದ ಕಾರ್ಯದಲ್ಲಿ ಶ್ರೀ ಮಹಾವಿಷ್ಣುವಿನ ಎರಡು ತೊಡೆಗಳೂ

Sri Vidyabharathi Book Centre, Sringeri

CC-O. In Public Domain. Digitized by eGangotri

ತುಂಬ ಆಯಾಸಗೊಳ್ಳುತ್ತವೆ. ಈ ತೊಡೆಗಳಿಗೆ ಆಶ್ರಯ ಕೊಟ್ಟು ಸಹಾಯ ಮಾಡುವಲ್ಲಿ ಮೊಣಕಾಲುಗಳು ವಿಶೇಷವಾಗಿ ಶ್ರಮ ಹೊಂದುತ್ತವೆ. ಇಂಥ ಮೊಣಕಾಲುಗಳಿಗೆ ಒತ್ತಾಸೆಕೊಡುತ್ತ ಮಂಡಿಗಳು ಪೂರ್ಣವಾಗಿ ಉಪಕಾರಕಗಳಾಗಿವೆ. ಮತ್ತು ಈ ಮಂಡಿಗಳು ಭಕ್ತಜನರ ಚಿತ್ತವೆಂಬ ಕನ್ನಡಿಯನ್ನು ಇಡುವುದಕ್ಕೆ ತಕ್ಕ ಚೌಕಟ್ಟುಗಳಾಗಿವೆ--ಎಂದರೆ, ಭಕ್ತರ ಚಿತ್ತಗಳು ಈ ಮಂಡಿಗಳ ಚೌಕಟ್ಟನೊಳಗೇ ಸೇರಿಕೊಂಡು ನೆಮ್ಮದಿಯಿಂದ ಇರುತ್ತವೆಂದು ಭಾವವು. ಭಕ್ತರು ಈ ಮಂಡಿಗಳನ್ನೇ ಧ್ಯಾನಿಸುತ್ತ ಆನಂದದಿಂದ ಇರುವರೆಂದೂ ಈ ಮಂಡಿಗಳು ಅಷ್ಟೊಂದು ರಮ್ಯವಾಗಿವೆಯೆಂದೂ ಅಭಿಪ್ರಾಯವು--೧೯.

ಶ್ರೀ ವಿಷ್ಣುವಿನ ತೊಡೆಗಳನ್ನು ಸ್ತುತಿಸುತ್ತಾರೆ--

ದೇವೋ ಭೀತಿಂ ವಿಧಾತುಃ ಸಪದಿ ವಿದಧತೌ ಕೈಟಭಾಖ್ಯಂ ಮಧುಂ ಯೌ ಆರೋಪ್ಯಾರೂಢಗರ್ವೌ ಅಧಿಜಲಧಿ ಯಯೋರೇವ ದೈತ್ಯೌ ಜಘಾನ ।
ವೃತ್ತಾವನ್ಯೋನ್ಯತುಲ್ಯೌ ಚತುರಮುಪಚಯಂಬಿಭ್ರತಾವಭ್ರನೀಲೌ ಊರೂ ಚಾರೂ ಹರೇಸ್ತೌ ಮುದಮತಿಶಯಿನೀಂ ಮಾನಸೇ ನೋ ವಿಧತ್ತಾಂ ॥ ॥೨೦॥

ವಿಧಾತುಃ—ಬ್ರಹ್ಮದೇವನಿಗೆ; **ಸಪದಿ ಭೀತಿಂ ವಿದಧತೌ**—ಕೂಡಲೇ ಮರಣ ಭಯವನ್ನು ಉಂಟುಮಾಡಿದ; **ಕೈಟಭಾಖ್ಯಂ ಮಧುಂ**—ಕೈಟಭ ಮತ್ತು ಮಧು—ಎಂಬ ಹೆಸರಿನ; **ಆರೂಢಗರ್ವೌ**—ತಮನ್ನು ಎದುರಿಸಬಲ್ಲ ತಮಗೆ ಸಮರಾದ ಪರಾಕ್ರಮಿಗಳು ಯಾರೂ ಇಲ್ಲವೆಂಬ ಅಹಂಕಾರದಿಂದ ಕೊಬ್ಬಿದ; **ಯೌ ದೈತ್ಯೌ**—ಯಾವ ಇಬ್ಬರು ದೈತ್ಯರನ್ನು; **ಅಧಿ ಜಲಧಿ**—ಸಮುದ್ರದಲ್ಲಿ; **ಯಯೋಃ ಏವ ಆರೋಪ್ಯ**—ಯಾವ ಎರಡು ತೊಡೆಗಳಲ್ಲಿಯೇ ಇಟ್ಟುಕೊಂಡು; **ದೇವಃ**--ಶ್ರೀ ವಿಷ್ಣುವು; **ಜಘಾನ**--ಕೊಂದನೋ; **ತೌ**--ಅಂಥ; **ವೃತ್ತೌ**--ದುಂಡಾದ; **ಅನ್ಯೋನ್ಯತುಲ್ಯೌ**—ಒಂದಕ್ಕೊಂದು ಸಮಾನವಾಗಿರುವ; **ಚತುರಂ ಉಪ**

Sri Vidyabharathi Book Centre, Sringeri

CC-O. In Public Domain. Digitized by eGangotri

ಚಯಂ ಬಿಭ್ರತೌ—ಆಶ್ಚರ್ಯಕರವಾಗಿ ಸಮವಾಗಿ ಪುಷ್ಟವಾಗಿರುವ; **ಚಾರೂ**--ಮನೋಹರಗಳಾಗಿರುವ; **ಹರೇಃ ಊರೂ**—ಶ್ರೀ ವಿಷ್ಣುವಿನ ಎರಡು ತೊಡೆಗಳು; **ನಃ ಮಾನಸೇ**—ನಮ್ಮ ಮನಸ್ಸಿನಲ್ಲಿ; **ಅತಿಶಯಿನೀಂ ಮುದಂ ವಿಧತ್ತಾಂ**—ಅತ್ಯಂತ ಹೆಚ್ಚಿನ ಸಂತೋಷವನ್ನು ಉಂಟುಮಾಡಲಿ.

ಅವಾಂತರ ಪ್ರಳಯದ ಕಾಲದಲ್ಲಿ ಜಗತ್ತೆಲ್ಲಾ ಕೇವಲ ಜಲಮಯವಾಗಿರುತ್ತದೆ. ಆಗ ಶ್ರೀ ವಿಷ್ಣುವು ಆ ಸಮುದ್ರದಲ್ಲಿ ಒಬ್ಬನೇ ಆದಿಶೇಷನ ಶಯನದಲ್ಲಿ ನಿದ್ರಿಸಿರುತ್ತಾನೆ. ಇಂಥ ಒಂದು ಸಂದರ್ಭದಲ್ಲಿ, ಪ್ರಳಯ ಕಾಲವು ಕೊನೆಗೊಂಡು, ಸೃಷ್ಟಿಯು ಆಗಬೇಕಾಗಿ ಬಂದಾಗ, ಶ್ರೀ ಮಹಾವಿಷ್ಣುವಿನ ನಾಭಿ ಕಮಲದಲ್ಲಿ ಬ್ರಹ್ಮನು ಹುಟ್ಟಿದನು. ಆಗ ಶ್ರೀ ವಿಷ್ಣುವಿನ ಕರ್ಣಗಳಲ್ಲಿನ ಮಲದಿಂದ ಮಧು ಮತ್ತು ಕೈಟಭ ಎಂಬ ಇಬ್ಬರು ದೈತ್ಯರು ಜನಿಸಿದರು. ಅಲ್ಲಿ ಬ್ರಹ್ಮನನ್ನು ಕಂಡು ಅವನನ್ನು ಸಂಹರಿಸಿ ನುಂಗಲು ಉದ್ಯುಕ್ತರಾದರು. ಆಗ ಭಯಪಟ್ಟ ಬ್ರಹ್ಮನು, ವಿಷ್ಣುವು ನಿದ್ರಾಪರವಶನಾಗಿದ್ದುದನ್ನು ಕಂಡು, ಅವನ ನಿದ್ರೆಗೆ ಕಾರಣಳಾಗಿರುವ ಮಹಾಕಾಳೀ ಸ್ವರೂಪಳಾದ ತಮೋಗುಣ ಪ್ರಧಾನಳಾದ ಮಾಯಾ ಪ್ರಕೃತಿಯನ್ನು ಸ್ತುತಿಸಿದನು. ಈ ಸ್ತುತಿಗೆ ಮೆಚ್ಚಿದ ದೇವಿಯು ವಿಷ್ಣುವಿನಿಂದ ಹಿಂದಕ್ಕೆ ಸರಿದಳು. ಆಗ ವಿಷ್ಣುವು ಎಚ್ಚೆತ್ತು, ಬ್ರಹ್ಮನನ್ನು ತಿನ್ನಲು ಹವಣಿಸುತ್ತಿದ್ದ ಆ ದೈತ್ಯರೊಡನೆ ಬಹುಕಾಲ ಬಾಹು ಯುದ್ಧವನ್ನು ಮಾಡಿದನು. ಸಮಬಲರಾದ ಅವರಲ್ಲಿ ಯಾರೂ ಜಯಪರಾಜಯಗಳನ್ನು ಹೊಂದಲಿಲ್ಲ. ಆಗ, ಗರ್ವಿತರಾದ ಆ ದೈತ್ಯರು ವಿಷ್ಣುವನ್ನು ಕುರಿತು—'ಭಲೇ, ನಿನ್ನ ಸಾಹಸಕ್ಕೆ ಮೆಚ್ಚಿದ್ದೇವೆ. ನಿನಗೆ ಬೇಕಾದ ವರವನ್ನು ಕೇಳಿಕೋ, ಕೊಡುತ್ತೇವೆ'—ಎಂದು ಮಾಯಾಮೋಹಿತರಾಗಿ ಹೇಳಿದರು ಆಗ ವಿಷ್ಣುವು—'ಸಂತೋಷ; ಹಾಗೆಯೇ ಆಗಲಿ. ನೀವಿಬ್ಬರೂ ನನ್ನಿಂದ ಕೊಲ್ಲಲ್ಪಡತಕ್ಕವರು ಆಗಿ, ಇದೇ ನನಗೆ ಬೇಕಾದ ವರ'—ಎಂದು ಹೇಳಿದನು. ಹೀಗೆ ಮೋಸಹೋದ ಆ ದೈತ್ಯರು ಸ್ವಲ್ಪ ಯೋಚಿಸಿ—'ಆಗಬಹುದು, ಆದರೆ, ನೀರಿನಿಂದ ಆವರಿಸಲ್ಪಡದಿರುವ ಭೂಮಿಯಲ್ಲಿ ನಮ್ಮನ್ನು ನೀನು ಕೊಲ್ಲಬಹುದು'—ಎಂದು ಹೇಳಿದರು. ಭೂಮಿಯೆಲ್ಲವೂ ನೀರಿನಿಂದ ಆಗ ಮುಳುಗಿದ್ದುದರಿಂದ, ಶ್ರೀ ವಿಷ್ಣುವು ಅವರೀರ್ವರ ತಲೆಗಳನ್ನು ತನ್ನ ತೊಡೆಗಳ ಮೇಲೆ ಇಟ್ಟುಕೊಂಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಚಕ್ರದಿಂದ ಕತ್ತರಿಸಿ ಸಂಹರಿಸಿದನು. ಇದರಿಂದ ಶ್ರೀ ವಿಷ್ಣುವಿಗೆ—ಕೈಟಭಾರಿ, ಮಧುಸೂದನ—ಎಂಬ ಪ್ರಸಿದ್ಧಿಯು ಉಂಟಾಯಿತು.

ಆಡಿದ ಮಾತನ್ನು ನಡೆಯಿಸುವುದು ಮನುಷ್ಯನ ಮರ್ಯಾದೆ. ದೈತ್ಯರೇ ಆದರೂ, ತಮಗೆ ಹಾನಿಕರವೇ ಆಗಿದ್ದರೂ, ತಾವು ಕೊಟ್ಟ ವರದಂತೆ ವಿಷ್ಣುವಿನಿಂದ ಕೊಲ್ಲಲ್ಪಡಲು ಸಿದ್ಧರಾದರು.

ನೀರಿನಿಂದ ಆವರಿಸಲ್ಪಡದಿರುವ ಭೂಮಿಯ ಮೇಲೆ ತಮ್ಮನ್ನು ಸಂಹರಿಸಬಹುದೆಂದು ಹೇಳಿದ ಆ ದಾನವರನ್ನು ವಿಷ್ಣುವು ತನ್ನ ತೊಡೆಗಳ ಮೇಲೆ ಆರೋಪಿಸಿಕೊಂಡು ಕೊಂದನು. ವಿಷ್ಣುವಿನ ದೇಹವೂ ಇತರರೆಲ್ಲರ ದೇಹದಂತೆಯೇ ಪಾರ್ಥಿವ ಶರೀರವೆಂದು ಇದರಿಂದ ಸ್ಪಷ್ಟವಾಗುತ್ತದೆ. ವಿಷ್ಣುವಿನ ಶರೀರವನ್ನು ಅಪ್ರಾಕೃತ ಶರೀರವೆಂದು ಕೆಲವರು ಹೇಳುವುದು ಕೇವಲ ಅವರ ಕಲ್ಪನೆ ಮಾತ್ರವೇ ಹೊರತು ಪ್ರಾಮಾಣಿಕವಲ್ಲವೆಂದು ನಿಶ್ಚಿತವಾಗುವುದು.

"ಹೀಗಾದರೆ—'ನ ಹ ವೈ ಸಶರೀರಸ್ಯ ಸತಃ ಪ್ರಿಯಾಪ್ರಿಯಯೋರಪಹಸ್ತಿರಸ್ತಿ'—'ಶರೀರವುಳ್ಳವನಿಗೆ ಸುಖದುಃಖಾನುಭವರೂಪವಾದ ಸಂಸಾರವು ಎಂದೂ ತಪ್ಪುವುದಿಲ್ಲ' ಎಂಬ ಶ್ರುತಿಯಂತೆ, ವಿಷ್ಣುವು ಸಂಸಾರಿಯೆಂದಾಗುವುದಿಲ್ಲವೆ!" ಎಂದರೆ ಹಾಗಲ್ಲ. 'ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ। ಹತ್ವಾಪಿ ಸ ಇಮಾನ್ ಲೋಕಾನ್ ನ ಹಂತಿ ನ ನಿಬಧ್ಯತೇ ॥'—'ಕರ್ತೃತ್ವ ಭಾವನೆಯೂ ಫಲಾಸಕ್ತಿಯೂ ಇಲ್ಲದವನು ಏನನ್ನು ಮಾಡಿದರೂ ಅದರ ಬಂಧವು ಅವನಿಗಿರುವುದಿಲ್ಲ' ಎಂಬ ಶ್ರೀ ಭಗವದ್ವಚನದಂತೆ, ಅಂಥ ಮಹಾವಿಷ್ಣುವಿಗೆ ಸಂಸಾರದ ಸಂಬಂಧವು ಸಂಭವಿಸುವುದಿಲ್ಲ.

ಇದಲ್ಲದೆ—'ಒಳ್ಳೆಯ ಕಾರ್ಯಕ್ಕಾಗಿ ಏನನ್ನಾದರೂ ತಪ್ಪನ್ನು ಮಾಡಬೇಕಾಗಿ ಬಂದರೆ, ಅದು ತಪ್ಪಾಗುವುದಿಲ್ಲ; ಅಕಾರ್ಯಕ್ಕಾಗಿ ಮಾಡಿದ ಸತ್ಕಾರ್ಯವೂ ದೋಷವಾಗುವುದು' ಎಂಬುದು ಶಾಸ್ತ್ರಸಿದ್ಧವಾದ ನ್ಯಾಯವು. ವೈದಿಕ ವರ್ಣಾಶ್ರಮ ಧರ್ಮವು ಸರ್ವಲೋಕ ಸಂರಕ್ಷಣೆಕ್ಕೆ ಮುಖ್ಯವಾದುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದರ ರಕ್ಷಣೆಗೆ ಸಮವಾದ ಕರ್ತವ್ಯವು ಮತ್ತೊಂದಿರುವುದಿಲ್ಲ. ಇದನ್ನು ಸಾಧಿಸುವುದಕ್ಕಾಗಿ ಅಕಾರ್ಯವನ್ನು ಮಾಡಿದರೂ ಅದು ದೋಷವಾಗುವುದಿಲ್ಲ.

ವಸ್ತುತಃ ವಿಚಾರಮಾಡಿದರೆ--' ಸಂಭವಾಮ್ಯಾತ್ಮಮಾಯಯಾ ' ಎಂಬ ಶ್ರೀ ಭಗವದ್ವಚನದಂತೆ ಭಗವಂತನ ವ್ಯವಹಾರವೆಲ್ಲವೂ ಕೇವಲ ಮಾಯಿಕವು. ಆದ್ದರಿಂದ ಇದರಲ್ಲಿ ಗುಣದೋಷಗಳ ಚಿಂತೆಗೇ ಅವಕಾಶವಿರುವುದಿಲ್ಲ.

ಮತ್ತು ಮಾಯಾಮೋಹಿತರಾಗಿ ದೇಹೇಂದ್ರಿಯಾದಿಗಳಲ್ಲಿ ನಾನು-ನನ್ನದು ಎಂಬ ಅಭಿಮಾನವನ್ನು ಹೊಂದಿರುವವರಿಗೆ ಕರ್ತೃತ್ವ-ಭೋಕ್ತೃತ್ವ-ರೂಪವಾದ ಸಂಸಾರಬಂಧುವು ಆಗುತ್ತದೆ. 'ಪ್ರಕೃತಿಂ ಸ್ವಾಮವಷ್ಟಭ್ಯ'-ಎಂಬಂತೆ ಮಾಯಾಪ್ರಕೃತಿಯನ್ನು ವಶಪಡಿಸಿಕೊಂಡಿರುವ ಪರಮಾತ್ಮನಿಗೆ ಸಂಸಾರಗಂಧ ಲೇಶವನ್ನು ಶಂಕಿಸಲಾಗುವುದಿಲ್ಲ. ಶ್ರೀ ಭಗವತ್ಪಾದರು ಗೀತಾಭಾಷ್ಯದ ಆರಂಭದಲ್ಲಿಯೇ ' ಸ್ವಾಂಮಾಯಾಂ ಮೂಲಪ್ರಕೃತಿಂ ವಶೀಕೃತ್ಯ....ಸ್ವಮಾಯಯಾ ದೇಹವಾನಿವ,ಜಾತ ಇವ, ಲೋಕಾನುಗ್ರಹಂ ಕುರ್ವನ್ ಲಕ್ಷ್ಯತೇ '-ಎಂದು ಈ ಅರ್ಥವನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಗೀತೆಯಲ್ಲೆಲ್ಲ ಈ ಅಭಿಪ್ರಾಯವು ಎದ್ದು ಕಾಣುತ್ತಿದೆ. ಆದುದರಿಂದ ಮಾಯಿಕಶರೀರವಿದ್ದರೂ ಶ್ರೀ ವಿಷ್ಣುವಿಗೆ ಸಂಸಾರ ಸಂಬಂಧವಿರುವುದಿಲ್ಲ. ವಿಷ್ಣುವಿಗೆ ಅಪ್ರಾಕೃತ ಎಂದರೆ ಪಾರ್ಥಿವವಲ್ಲದ ಶರೀರವು ಇದೆಯೆಂಬಲ್ಲಿ ಪ್ರಮಾಣವೇನೂ ಇರುವುದಿಲ್ಲ. ಈ ಮಾಯಿಕಶರೀರವನ್ನೇ ಅಪ್ರಾಕೃತಶರೀರವೆಂದು ಕರೆಯುವುದಾದರೆ ಆಗ ಈ ವಿಷಯದಲ್ಲಿ ವಿವಾದವೇ ಇಲ್ಲವೆಂದು ತಿಳಿಯತಕ್ಕದ್ದು—೨೦.

ಜಘನ ವರ್ಣನೆ—

ಪೀತೇನ ದ್ಯೋತತೇ ಯಚ್ಚತುರಪರಿಹಿತೇನಾಂಬರೇಣಾತ್ಯುದಾರಂ
ಜಾತಾಲಂಕಾರಯೋಗಂ ಜಲಮಿವ ಜಲಧೇರ್ಬಾಡವಾಗ್ನಿ
ಪ್ರಭಾಭಿಃ ।
ಏತತ್ಪಾತಿತ್ಯದಾನ್ನೋ ಜಘನಮತಿಘನಾದೇನಸೋ ಮಾನನೀ-
ಯಂ ಸಾತತ್ಯೇನೈವ ಚೇತೋ ವಿಷಯಮವತರತ್ಪಾತು
ಪೀತಾಂಬರಸ್ಯ ॥ ॥೨೧॥

Sri Vidyabharathi Book Centre, Sringeri

CC-O. In Public Domain. Digitized by eGangotri

ಚತುರಪರಿಹಿತೇನ--ಅಲಂಕಾರವಾಗಿ ಧರಿಸಲ್ಪಟ್ಟ; ಪೀತೇನ ಅಂಬರೇಣ—ಹಳದಿವರ್ಣದ ವಸ್ತ್ರದಿಂದ; ಯತ್—ಯಾವ ಜಘನವು; ಅತ್ಯುದಾರಂ--ಅತಿಶಯವಾಗಿ; ಜಾತಾಲಂಕಾರಯೋಗಂ—ಉಂಟಾದ ಅಲಂಕಾರವುಳ್ಳದ್ದಾಗಿ; ಬಾಡವಾಗ್ನಿಪ್ರಭಾಭಿಃ ಜಲಧೇಃ ಜಲಂ ಇವ—ಬಡಬಾಗ್ನಿಯ ಪ್ರಭೆಗಳಿಂದ ಸಮುದ್ರದ ಜಲವು ಹೇಗೋ ಹಾಗೆ; ದ್ಯೋತತೇ—ಪ್ರಕಾಶಿಸುತ್ತಿದೆಯೋ; ಮಾನನೀಯಂ—ಗೌರವಾರ್ಹವಾದ ಏತತ್—ಈ; ಪೀತಾಂಬರಸ್ಯ ಜಘನಂ—ವಿಷ್ಣುವಿನ ಮಧ್ಯ ದೇಹ ಭಾಗವು; ಸಾತಿತ್ಯೇನ ಏವಚೇತೋ ವಿಷಯಮವತರತ್—ನಮ್ಮ ಮನೋಮಾರ್ಗಕ್ಕೆ ನಿತ್ಯವೂ ವಿಷಯವಾಗಿ ಬಂದು; ಅತಿಘನಾತ್ ಪಾತಿತ್ಯಾತ್ ಏನಸಃ—ಅಸಂಖ್ಯಾತ ಜನ್ಮಗಳಿಂದ ಅಭ್ಯಸ್ತವಾಗಿ ದೃಢತರವಾಗಿದ್ದು ಪತಿತರನ್ನಾಗಿಸುವಂಥ ಪಾಪದಿಂದ; ನಃ--ನಮ್ಮನ್ನು; ಪಾತು—ರಕ್ಷಿಸಲಿ —೨೧.

ನಡುವಿನ ಆಭರಣವಾದ ಒಡ್ಯಾಣದ ಸ್ತುತಿ—

ಯಸ್ಯಾ ದಾಮ್ನಾ ತ್ರಿಧಾಮ್ನೋ ಜಘನಕಲಿತಯಾ ಭ್ರಾಜತೇಽಂಗಂ
ಯಥಾಬ್ಧೇಃ ಮಧ್ಯಸ್ಥೋ ಮಂದರಾದ್ರಿರ್ಭುಜಗಪತಿ ಮಹಾ
ಭೋಗ ಸನ್ನದ್ಧ ಮಧ್ಯಃ ।
ಕಾಂಚೀ ಸಾ ಕಾಂಚನಾಭಾ ಮಣಿವರಕಿರಣೈರುಲ್ಲಸದ್ಭಿಃ ಪ್ರದೀಪ್ತಾ
ಕಲ್ಯಾಂ ಕಲ್ಯಾಣದಾತ್ರೀಂ ಮಮ ಮತಿಮನಿಶಂ ಕಮ್ರರೂಪಾ
ಕರೋತು ॥
॥೨೨॥

ತ್ರಿಧಾಮ್ನಃ—ಲೋಕತ್ರಯಕ್ಕೂ ಆಶ್ರಯನಾಗಿರುವ ವಿಷ್ಣುವಿನ; ಜಘನ ಕಲಿತಯಾ—ನಡುವಿನಲ್ಲಿ ಧರಿಸಿರುವ; ಯಸ್ಯಾ ದಾಮ್ನಾ—ಯಾವ ಒಡ್ಯಾಣದ ಎಳೆಗಳಿಂದ; ಅಂಗಂ—ವಿಷ್ಣುವಿನ ಶರೀರವು; ಭುಜಗಪತಿ ಮಹಾಭೋಗಸನ್ನದ್ಧ ಮಧ್ಯಃ—ವಾಸುಕಿಯ ದೃಢವೂ ನೀಳವೂ ಆದ ದೇಹದಿಂದ ಸುತ್ತಲ್ಪಟ್ಟ ಮಧ್ಯಭಾಗವನ್ನುಳ್ಳ; ಅಬ್ಧೇಃ ಮಧ್ಯಸ್ಥಃ—ಸಮುದ್ರದ ಮಧ್ಯದಲ್ಲಿದ್ದ; ಮಂದರಾದ್ರಿಃ ಯಥಾ—ಮಂದರ ಪರ್ವತವು ಹೇಗೋ ಹಾಗೆ [illegible] ಸುತ್ತಿರುವುದೋ; ಕಾಂಚನಾಭಾ—

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿನ್ನದಿಂದ ಹೊಳೆಯುತ್ತ ; **ಮಣಿವರಕಿರಣೈಃ ಉಲ್ಲಸದ್ಭಿಃ ಪ್ರದೀಪ್ತಾ**— ಕ್ಷಣಕ್ಷಣಕ್ಕೂ ವಿಚಿತ್ರತರವಾಗಿ ನಕ್ಷತ್ರಮಂಡಲದಂತೆ ಚಕಚಕಿಸುತ್ತಿರುವ ಉತ್ತಮೋತ್ತಮ ರತ್ನಗಳ ಕಾಂತಿಗಳಿಂದ; **ಪ್ರದೀಪ್ತಾ**—ಉಜ್ವಲವಾಗಿರುವ; **ಸಾ ಕಮ್ರರೂಪಾ ಕಾಂಚೀ**—ಆ ದಿವ್ಯ ಮಂಗಳಕರವಾದ ಒಡ್ಯಾಣವು; **ಮಮ ಮತಿಂ**—ನನ್ನ ಬುದ್ಧಿಯನ್ನು ; **ಕಲ್ಯಾಂ**—ಪ್ರಶಸ್ತವಾದ; **ಕಲ್ಯಾಣ ದಾತ್ರಿಂ** — ಮಂಗಳವನ್ನು ಉಂಟುಮಾಡುವುದನ್ನಾಗಿ; **ಕರೋತು**—ಮಾಡಲಿ.

ಸಮುದ್ರದ ತೆರೆಗಳಂತೆ ವಿಷ್ಣುವು ಧರಿಸಿರುವ ಪೀತಾಂಬರವು ನೆರಿಗೆ ನೆರಿಗೆಗಳಿಂದ ಮಾಡಿದೆ; ಅವನ ದೇಹವು ಸಮುದ್ರದಲ್ಲಿರುವ ಮಂದರಗಿರಿಯಂತಿದೆ, ಮಧ್ಯದಲ್ಲಿರುವ ಒಡ್ಯಾಣವು ಆ ಗಿರಿಯನ್ನು ಸುತ್ತಿರುವ ವಾಸುಕಿಯಂತಿದೆ ಎಂದು ಭಾವವು.

ನಾಭಿಯ ವರ್ಣನೆ—

ಉನ್ನಮ್ರಂ ಕಮ್ರಮುಚ್ಚೈರುಪಚಿತಮುದಭೂದ್ಯಚ್ಚ ಪತ್ರೈ ರ್ವಿಚಿತ್ರೈಃ ।
ಪೂರ್ವಂ ಗೀರ್ವಾಣಪೂಜ್ಯಂ ಕಮಲಜಮಧುಪಸ್ಯಾಸ್ಪದಂ ತತ್ಪಯೋಜಂ ।
ತಸ್ಮಿನ್ನೀಲಾಶ್ಮನೀಲೈಸ್ತರಲರುಚಿಜಲೈಃ ಪೂರಿತೋ ಕೇಲಿಬುಧ್ಯಾ
ನಾಲೀಕಾಕ್ಷಸ್ಯ ನಾಭೀಸರಸಿ ವಸತು ನಶ್ಚಿತ್ತಹಂಸಶ್ಚಿರಾಯ ॥
॥೨೩॥

ಪೂರ್ವಂ—ಜಗತ್ಸೃಷ್ಟಿಯ ಆದಿಯಲ್ಲಿ; **ಉನ್ನಮ್ರಂ**—ಎತ್ತರವಾಗಿರುವ; **ಕಮ್ರಂ** — ಮನೋಹರವಾಗಿರುವ; **ವಿಚಿತ್ರೈಃ ಪತ್ರೈಃ ಉಚ್ಚೈಃ ಉಪಚಿತಂ** — ನಾನಾ ಚಿತ್ರವಿಚಿತ್ರಗಳಾದ ದಳಗಳಿಂದ ತುಂಬಿರುವ; **ಗೀರ್ವಾಣ ಪೂಜ್ಯಂ**— ದೇವತೆಗಳಿಗೂ ಪೂಜಾರ್ಹವಾಗಿರುವ; **ಕಮಲಜಮಧುಪಸ್ಯ ಆಸ್ಪದಂ**—ಹಿರಣ್ಯಗರ್ಭ ಬ್ರಹ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ನೆಂಬ ದುಂಬಿಗೆ ಉತ್ಪತ್ತಿ ಮತ್ತು ವಾಸಸ್ಥಾನವಾಗಿರುವ; **ತತ್ ಪಯೋಜಂ**—ಆ ಕಮಲವು; **ಯಾತ್ ಉದಭೂತ್**—ಎಲ್ಲಿ ಹುಟ್ಟಿತೋ; **ನೀಲಾಶ್ಮನೀಲೈಃ ತರಲರುಚಿ ಜಲೈಃ ಪೂರಿತೋ**—ಇಂದ್ರ ನೀಲಮಣಿಗಳ ನೀಲವರ್ಣದ ಚಕಚಕಿಸುವ ಕಾಂತಿಗಳೆಂಬ ನೀರಿನಿಂದ ತುಂಬಿ ತುಳುಕುತ್ತಿರುವ; **ತಸ್ಮಿನ್**—ಆ; **ನಾಲೀಕಾಕ್ಷಸ್ಯ ನಾಭೀ ಸರಸಿ**--ಕಮಲನಯನನಾದ ವಿಷ್ಣುವಿನ ನಾಭಿಯೆಂಬ ದಿವ್ಯ ಸರೋವರದಲ್ಲಿ; **ನಃ**--ನಮ್ಮ; **ಚಿತ್ತ ಹಂಸಃ**--ಚಿತ್ತವೆಂಬ ಹಂಸವು; **ಚಿರಾಯ ಕೇಲಿಬುದ್ಧ್ಯಾ ವಸತು**--ಚಿರಕಾಲವೂ ಆಟವಾಡುವ ಆಸೆಯಿಂದ ವಾಸವಾಗಿರಲಿ.

ಇಂದ್ರನೀಲಮಣಿಯಂತೆ ನೀಲವರ್ಣದ ವಿಷ್ಣುವಿನ ನಾಭಿಯ ಸಮೀಪದ ದೇಹಭಾಗವು, ನಾಭಿಯೆಂಬ ಸರೋವರಕ್ಕೆ ಕಟ್ಟಿದ ಇಂದ್ರನೀಲಮಣಿಯ ಕಟ್ಟೆಯಂತಿದೆ; ಇದರ ಕಾಂತಿಯು ಸುತ್ತಲೂ, ವಿಶಾಲವೂ, ಆಳವೂ ಆಗಿ ಸರೋವರದಂತಿರುವ ನಾಭಿರಂಧ್ರದಲ್ಲಿ ತುಂಬಿಕೊಂಡು, ಆ ಸರೋವರವು ನೀಲ ನಿರ್ಮಲ ಜಲದಿಂದ ತುಂಬಿರುವಂತಿದೆ; ನಿಷ್ಕಾಮಸ್ವವರ್ಣಾಶ್ರಮ ಧರ್ಮಾನುಷ್ಠಾನದಿಂದ ಅತ್ಯಂತ ನಿರ್ಮಲವಾಗಿರುವ ಭಕ್ತರ ಚಿತ್ತವು, ನಿರ್ಮಲವಾಗಿ ಶುಭ್ರವಾಗಿರುವ ಹಂಸದಂತಿದೆ; ಶ್ರೀವಿಷ್ಣುವಿನ ಇಂಥ ನಾಭೀಸರೋವರವು ಇಂಥ ಚಿತ್ತ ಹಂಸದ ವಿಹಾರಕ್ಕೆ ತಕ್ಕ ಸ್ಥಾನವಾಗಿದೆ — ಎಂದು ಈ ರೂಪಕದ ವಿಶೇಷಾಭಿಪ್ರಾಯವಾಗಿದೆ — ೨೩.

ನಾಭಿಪದ್ಮದ ಪ್ರಾರ್ಥನೆ—

ಪಾತಾಲಂ ಯಸ್ಯ ನಾಲಂ ವಲಯಮಪಿ ದಿಶಾಂ ಪತ್ರಪಂಕ್ತಿಂ
ನಗೇಂದ್ರಾನ್ ವಿದ್ವಾಂಸಃ ಕೇಸರಾಲೀರ್ವಿದುರಿಹ ವಿಪುಲಾಂ
ಕರ್ಣಿಕಾಂ ಸ್ವರ್ಣಶೈಲಂ ।
ಭೂಯಾದ್ಭೂಯಸ್ಸ್ವಯಂಭೂಮಧುಕರಭವನಂ ಭೂಮಯಂ
ಕಾಮದಂ ನೋ ನಾಲೀಕಂ ನಾಭಿಪದ್ಮಾಕರಮುರು ತನ್ನಾಗಶ--
ಯ್ಯಸ್ಯ ಶೌರೇಃ ॥ ॥೨೪॥

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ವಾಂಸಃ — ವೇದಶಾಸ್ತ್ರಗಳ ತತ್ತ್ವವನ್ನು ಬಲ್ಲ ಜ್ಞಾನಿಗಳು; **ಯಸ್ಯ**—ಯಾವ ವಿಷ್ಣುವಿನ ನಾಭಿಯೆಂಬ ಪದ್ಮಕ್ಕೆ; **ಪಾತಾಲಂ ನಾಲಂ**—ಪಾತಾಳಲೋಕವನ್ನು ನಾಳವೆಂದೂ; **ದಿಶಾಂ ವಲಯಂ ಪತ್ರಪಂಕ್ತಿಂ**—ಹತ್ತು ದಿಕ್ಕುಗಳ ಸಮೂಹವನ್ನು ಎಲೆಗಳ ಸಾಲೆಂದೂ; **ನಗೇಂದ್ರಾನ್ ಕೇಸರಾಳಿಲೀಃ** — ಪರ್ವತಗಳನ್ನು ದಳಗಳೆಂದೂ; **ಕರ್ಣಿಕಾಂ ಸ್ವರ್ಣಶೈಲಂ**-ಚಿನ್ನದ ಮೇರು ಗಿರಿಯನ್ನು ಕರ್ಣಿಕೆ (ಹೂವಿನ ಮಧ್ಯಭಾಗ) ಯೆಂದೂ; **ವಿದುಃ**—ತಿಳಿಯುತ್ತಾರೋ; **ಗಾಯತ್ಸ್ವಯಂಭೂಮಧುಕರಭವನಂ**-ನಾಲ್ಕು ವೇದಗಳಿಂದಲೂ ಯಾವಾಗಲೂ ಸ್ತುತಿಸುತ್ತ ಮನೋಹರವಾಗಿ ಶಬ್ದ ಮಾಡುವ ಬ್ರಹ್ಮನೆಂಬ ದುಂಬಿಯ ಮನೆಯಾಗಿರುವ; **ಭೂಮಯಂ** — ಪೃಥ್ವೀತತ್ತ್ವರೂಪವಾದ; **ನಾಗಶಯ್ಯಸ್ಯ ಶೌರೇಃ**—ಆದಿ ಶೇಷನನ್ನು ಶಯನವನ್ನಾಗಿ ಉಳ್ಳ ಆ ಮಹಾವಿಷ್ಣುವಿನ; **ಉರು**—ವಿಶಾಲವೂ ಗಂಭೀರವೂ ಮಹತ್ವದ್ದೂ ಆಗಿರುವ; **ತತ್ ನಾಲೀಕಂ** — ಆ ಕಮಲವು; **ನಃ** - **ಕಾಮದಂ ಭೂಯಾತ್** — ನಮ್ಮ ಸಕಲೇಷ್ಟಾರ್ಥಗಳನ್ನು ಕೊಡುವಂಥದ್ದು ಆಗಲಿ - ೨೪.

ಉದರಸ್ತುತಿ—

ಕಾಂತ್ಯಂಭಃ ಪೂರಪೂರ್ಣೇ ಲಸದಸಿತವಲೀ ಭಂಗಭಾಸ್ವತ್ತರಂಗೇ
ಗಂಭೀರಾಕಾರನಾಭೀಚತುರತರಮಹಾವರ್ತಶೋಭಿನ್ಯುದಾರೇ ।
ಕ್ರೀಡತ್ವಾನದ್ಧಹೇಮೋದರನವಿನಮಹಾಬಾಡವಾಗ್ನಿ ಪ್ರಭಾಢ್ಯೇ
ಕಾಮಂ ದಾಮೋದರೀಯೋದರಸಲಿಲನಿಧೌ ಚಿತ್ತಮತ್ಸ್ಯಶ್ಚಿರಂ
ನಃ ॥೨೫॥

ಕಾಂತ್ಯಂಭಃ ಪೂರಪೂರ್ಣೇ—ದಿವ್ಯಕಾಂತಿಯ ಜಲದಪ್ರವಾಹದಿಂದ ತುಂಬಿರುವ; **ಲಸದಸಿತವಲೀ ಭಂಗಭಾಸ್ವತ್ತರಂಗೇ** — ಶೋಭಿಸುವ ನೀಲವರ್ಣದ ರೇಖೆಗಳ ಸಾಲುಗಳ ಅಲೆಗಳನ್ನುಳ್ಳ; **ಗಂಭೀರಾಕಾರನಾಭೀ ಚತುರತರ ಮಹಾವರ್ತಶೋಭಿನಿ** — ಆಳವಾದ ಆಕಾರದ ನಾಭಿಯ ಚಮತ್ಕಾರವಾದ ದೊಡ್ಡ ಸುಳಿಯಿಂದ ಶೋಭಿಸುವ; **ಉದಾರೇ** — ವಿಶಾಲ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗಿರುವ ; ಅನದ್ಧ ಹೇಮೋದರನವಿನಮಹಾಬಾಡವಾಗ್ನಿ ಪ್ರಭಾಢ್ಯೇ- ಕಟ್ಟಿದ ಚಿನ್ನದ ಆಭರಣಗಳ ಮಹಾಬಡಬಾಗ್ನಿಯ ಪ್ರಭೆಯಿಂದ ತುಂಬಿರುವ ; ದಾಮೋದರೀಯೋದರಸಲಿಲನಿಧೌ — ಶ್ರೀ ಮಹಾವಿಷ್ಣುವಿನ ಉದರ ಸಮುದ್ರದಲ್ಲಿ ; ನಃ — ನಮ್ಮ ; ಚಿತ್ತಮತ್ಸ್ಯಃ — ಮನೋಮೀನು; ಚಿರಂ — ಯಾವಾಗಲೂ ; ಕಾಮಂ — ಯಥೇಚ್ಛವಾಗಿ, ಕ್ರೀಡತ್ — ಆನಂದದಿಂದ ವಿಹರಿಸುತ್ತಿರಲಿ. — ೨೫.

ರೋಮಗಳ (ಗುಂಪು) ರಾಶಿ--

ನಾಭೀನಾಲೀಕಮೂಲಾದಧಿಕ ಪರಿಮಲೋನ್ಮೋಹಿತಾನಾಮಲೀ-
ನಾಂ ಮಾಲಾ ನೀಲೇವ ಯಾಂತೀ ಸ್ಫುರತಿ ರುಚಿಮತೀ ವಕ್ತ್ರ
ಪದ್ಮೋನ್ಮುಖೀ ಯಾ ।
ರಮ್ಯಾ ಸಾ ರೋಮರಾಜಿರ್ಮಹಿತರುಚಿಮತೀ ಮಧ್ಯಭಾಗಸ್ಯ ವಿಷ್ಣೋಃ
ಚಿತ್ತಸ್ಥಾ ಮಾವಿರಂಸೀಚ್ಚಿರತರಮುಚಿತಾಂ ಸಾಧಯಂತೀ
ಶ್ರಿಯಂ ನಃ ॥೨೬॥

ಅಧಿಕಪರಿಮಲೋನ್ಮೋಹಿತಾನಾಂ — ಅತಿಶಯಸುಗಂಧದಿಂದ ಮೋಹ ಹೊಂದಿದ ; ಅಲೀನಾಂ—ದುಂಬಿಗಳ ; ವಕ್ತ್ರಪದ್ಮೋನ್ಮುಖೀ ಮುಖಪದ್ಮವನ್ನು ಕುರಿತು ; ನಾಭೀನಾಲೀಕಮೂಲಾತ್ ಯಾಂತೀ — ನಾಭಿಪದ್ಮದ ಮೂಲದಿಂದ ಹೋಗುತ್ತಿರುವ ; ರುಚಿಮತಿ — ಕಾಂತಿಯುಕ್ತವಾದ ; ನೀಲಾ ಮಾಲಾ ಇವ ಯಾ ಸ್ಫುರತಿ — ನೀಲವರ್ಣದ ಸಾಲೋ ಎಂಬಂತೆ ಯಾವುದು ರಾರಾಜಿಸುತ್ತಿದೆಯೋ ; ಮಹಿತರುಚಿಮತೀ — ಅತ್ಯಂತ ವಿಶೇಷವಾಗಿ ಬೆಳಗುತ್ತಿರುವ; ರಮ್ಯಾ—ಆನಂದಕರವಾದ; ವಿಷ್ಣೋಃ ಮಧ್ಯಭಾಗಸ್ಯ—ವಿಷ್ಣುವಿನ ಉದರಪ್ರದೇಶದಲ್ಲಿರುವ; ಸಾ ರೋಮರಾಜಿಃ —ಆ ರೋಮಗಳ ಪುಂಜವು ; ಚಿತ್ತಸ್ಥಾ—ನಮ್ಮ ಮನಸ್ಸಿನಲ್ಲಿ ಸ್ಥಿರವಾಗಿ ನೆಲಸಿದ್ದು ; ಚಿರತರಂ — ಯಾವಾಗಲೂ ; ಉಚಿತಾಂ ಶ್ರಿಯಂ — ಯೋಗ್ಯವಾದ ಸೌಭಾಗ್ಯವನ್ನು ಉಂಟುಮಾಡುವಂಥದ್ದಾಗಿ ; ಮಾ- ವಿರಂಸೀತ್—ಹೀಗೆ ಮಾಡದಿರದೇ ಇರಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ದೇಹಮಧ್ಯಭಾಗದ ವರ್ಣನೆ—

ಆದೌ ಕಲ್ಪಸ್ಯ ಯಸ್ಮಾತ್ಪ್ರಭವತಿ ವಿತತಂ ವಿಶ್ವಮೇತದ್ವಿಕಲ್ಪೈಃ
ಕಲ್ಪಾಂತೇಯಸ್ಯ ಚಾಂತಃ ಪ್ರವಿಶತಿ ಸಕಲಂ ಸ್ಥಾವರಂ ಜಂಗಮಂಚ।
ಅತ್ಯಂತಾಚಿಂತ್ಯಮೂರ್ತೇಶ್ಚಿರತರಮಜಿತಸ್ಯಾಂತರಿಕ್ಷಸ್ವರೂಪೇ
ತಸ್ಮಿನ್ನಸ್ಮಾಕಮಂತಃಕರಣಮತಿಮುದಾ ಕ್ರೀಡತಾತ್ಕ್ರೋಡಭಾಗೇ
॥೨೭॥

ಕಲ್ಪಸ್ಯ ಆದೌ—ಒಂದು ಪ್ರಳಯವು ಕೊನೆಗೊಂಡು, ಮತ್ತೊಂದು ಕಲ್ಪವು ಹುಟ್ಟುವ ಮೊದಲು ; **ವಿತತಂ ವಿತತ್ ವಿಶ್ವಂ** — ವಿಸ್ತಾರವಾಗಿರುವ ಈ ಜಗತ್ತು ; **ಯಸ್ಮಾತ್** — ಯಾವ ದೇಹಭಾಗದಿಂದಲೇ ; **ವಿಕಲ್ಪೈಃ ಪ್ರಭವತಿ**--ನಾನಾ ಪ್ರಕಾರಗಳಿಂದ ಉದ್ಭವಿಸುವುದೋ ; **ಚ**--ಮತ್ತು ಹಾಗೆಯೇ ; **ಕಲ್ಪಾಂತೇ**--ಪ್ರಳಯ ಕಾಲದಲ್ಲಿ ; **ಸ್ಥಾವರಂ ಜಂಗಮಂಚ ಸಕಲಂ**--ಚರಾಚರಾತ್ಮಕವಾದ ನಿಖಿಲ ಪ್ರಪಂಚವೂ ; **ಯಸ್ಯ ಅಂತಃ ಪ್ರವಿಶತಿ** — ಯಾವ ದೇಹದ ಒಳಗೇ ಪ್ರವೇಶಿಸುತ್ತದೋ ; **ಅತ್ಯಂತಾಚಿಂತ್ಯಮೂರ್ತೇಃ** – ಅತಿಕುಶಲಮತಿಗಳಿಗೂ ಚಿಂತಿಸುವುದಕ್ಕೂ ಗೋಚರವಾಗದ ಸ್ವರೂಪನಾದ ; **ಅಜಿತಸ್ಯ**--ಪರಮೇಶ್ವರನ ವರದಿಂದ ಸರ್ವತೋಜಯಶಾಲಿಯಾಗಿರುವ ಶ್ರೀ ಮಹಾವಿಷ್ಣುವಿನ ; **ಅಂತರಿಕ್ಷಸ್ವರೂಪೇ** – ಆಕಾಶದಂತೆ ನಿರ್ವಿಶೇಷ ಸ್ವರೂಪವಾದ ; **ತಸ್ಮಿನ್ ಕ್ರೋಡಭಾಗೇ**—ಆ ದೇಹಮಧ್ಯ ಭಾಗದಲ್ಲಿ ; **ಅಸ್ಮಾಕಂ ಅಂತಃಕರಣಂ**--ನಮ್ಮ ಮನಸ್ಸು ; **ಅತಿಮುದಾ**--ಅತ್ಯಾನಂದದಿಂದ ; **ಚಿರತರಂ**—ಯಾವಾಗಲೂ ; **ಕ್ರೀಡತಾತ್** ವಿಹರಿಸುತ್ತಿರಲಿ.--೨೭.

ವಕ್ಷಃಸ್ಥಳ (ಎದೆ) ವರ್ಣನೆ —

ಸಂಸ್ತೀರ್ಣಂಕೌಸ್ತುಭಾಂಶು ಪ್ರಸರಕಿಸಲಯೈರ್ಮುಗ್ಧಮುಕ್ತಾ
ಫಲಾಢ್ಯಂ ಶ್ರೀವತ್ಸೋಲ್ಲಾಸಿ ಫುಲ್ಲಪ್ರತಿನವವನಮಾಲಾಂಶು
ರಾಜದ್ಭುಜಾಂತಂ ।
ವಕ್ಷಃ ಶ್ರೀವೃಕ್ಷಕಾಂತಂ ಮಧುಕರನಿಕರಶ್ಯಾಮಲಂ ಶಾರ್ಙ್ಗಪಾಣೇಃ
ಸಂಸಾರಾಧ್ವಶ್ರಮಾರ್ತೈರುಪವನಮಿವ ಯತ್ಸೇವಿತಂ ತತ್ಪ್ರಪದ್ಯೇ
॥೨೮॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಸಾರಾಧ್ವಶ್ರಮಾರ್ತೈಃ—ಇಹಪರಲೋಕಗಳಲ್ಲಿ ಜನ್ಮಮರಣ ಜರಾರೋಗ ಸುಖದುಃಖಾನುಭವರೂಪವಾದ ಸಂಸಾರಮಾರ್ಗದಲ್ಲಿ ಆಯಾಸ ಗೊಂಡವರಿಂದ ; **ಸೇವಿತಂ ಉಪವನಂ ಇವ ಯತ್**—ಸೇವಿಸಿ ಆಶ್ರಯಿ ಸಲ್ಪಡುವ ಉಪವನವೋ ಎಂಬಂತೆ ಇರುವ ; **ಶಾರ್ಙ್ಗಪಾಣೇಃ** — ಶ್ರೀ ವಿಷ್ಣುವಿನ ; **ತತ್ ವಕ್ಷಃ** — ಆವಕ್ಷಸ್ಥಳವನ್ನು ; **ಪ್ರಪದ್ಯೇ** — ಶರಣು ಹೊಂದುತ್ತೇನೆ. ಮಾರ್ಗಾಯಾಸದಿಂದ ಬಳಲಿದವರಿಗೆ ಆಶ್ರಯವನ್ನು ಕೊಡುವ ಫಲಪುಷ್ಪಛಾಯಾದಿಗಳಿಂದ ರಮ್ಯವಾಗಿರುವ ಉಪವನದಂತೆ, ಸಂಸಾರಭ್ರ ಮಣದಿಂದ ಆಯಾಸಗೊಂಡು, ಇದರಿಂದ ಮೋಕ್ಷವನ್ನು ಬಯಸುವವರಿಗೆ, ಶ್ರೀ ವಿಷ್ಣುವಿನ ವಕ್ಷಸ್ಥಳವು ಉಪವನದಂತೆ ಆಶ್ರಯಿಸಲು ತಕ್ಕದ್ದಾಗಿದೆಯೆಂದು ತಾತ್ಪರ್ಯವು.

ಶ್ರೀ ವಿಷ್ಣುವಿನ ವಕ್ಷಸ್ಥಳವು ಉಪವನದಂತೆ ಇರುವುದೆಂಬುದನ್ನು ತೋರಿ ಸುತ್ತಾರೆ —

ಶ್ರೀ ವೃಕ್ಷಕಾಂತಂ — ಉಪವನವು ಚಿಗುರು, ಹೂ, ಹಣ್ಣುಗಳ ಸಂಪತ್ತಿನಿಂದ ಕೂಡಿದ ಮರಗಳಿಂದ ರಮ್ಯವಾಗಿರುತ್ತದೆ; ಹಾಗೆಯೇ ಶ್ರೀ ವೃಕ್ಷ ಎಂದರೆ ಬಿಲ್ವವೃಕ್ಷ; ಈಶ್ವರಾರಾಧನೆಗೆ ಯೋಗ್ಯವಾದ ಬಿಲ್ವ ಪತ್ರಗಳನ್ನುಳ್ಳ ಬಿಲ್ವವೃಕ್ಷಗಳಿಂದ ಶ್ರೇಷ್ಠವಾಗಿರುತ್ತದೆ. ವಿಷ್ಣುವಿನ ವಕ್ಷಸ್ಥಳವು ಶ್ರೀ ವೃಕ್ಷವೆಂಬ ಮಂಗಳಕರವಾದ ರೋಮಗಳ ಸುಳಿಯಿಂದ ರಮ್ಯವಾಗಿರುತ್ತದೆ ; ಮತ್ತು ಶ್ರೀ ಲಕ್ಷ್ಮೀ ರೂಪವಾದ ವೃಕ್ಷ - (ಮರ) - ದಿಂದ ಶೋಭಾಯಮಾನವಾಗಿದೆ. ಭೂಮಿಯಲ್ಲಿ ಹುಟ್ಟಿದ ಮರವು ಅಲ್ಲಿಂದ ಚಲಿಸದೆ ಅಲ್ಲಿಯೇ ಸ್ಥಿರವಾಗಿರುವಂತೆ, ಶ್ರೀ ಲಕ್ಷ್ಮೀದೇವಿಯು ವಿಷ್ಣು ವಕ್ಷಸ್ಥಳದಲ್ಲಿಯೇ ಶಾಶ್ವತವಾಗಿರುತ್ತಾ, ಅಲ್ಲಿರುವ ವೃಕ್ಷದಂತೆ ಶೋಭಿಸುವಳೆಂದು ಭಾವವು.

ಮಧುಕರನಿಕರಶ್ಯಾಮಲಂ — ಉಪವನವು ದುಂಬಿಗಳ ಗುಂಪುಗಳಿಂದ ನೀಲವಾಗಿರುತ್ತದೆ. ವಿಷ್ಣುವಕ್ಷಸ್ಥಳವೂ ದುಂಬಿಗಳ ಗುಂಪುಗಳಂತೆ ನೀಲವರ್ಣ ವಾಗಿರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀವತ್ಸೋಲ್ಲಾಸಿ — ಉಪವನವು ರಮ್ಯಗಳಾಗಿರುವ ದನಕರುಗಳ ಉಲ್ಲಾಸ — ಮೆರೆಯುವಿಕೆಯಿಂದ ರಮ್ಯವಾಗಿರುತ್ತದೆ ; ವಿಷ್ಣುವಕ್ಷಸ್ಥಳವು ಶ್ರೀವತ್ಸವೆಂಬ ಪ್ರದಕ್ಷಿಣಾಕಾರವಾಗಿರುವ ರೋಮರಾಜಿಯಿಂದ ಉಲ್ಲಸಿತವಾಗಿದೆ. ರಮ್ಯವಾಗಿ ಕಂಡು ಬರುತ್ತಿದೆ.

ಫುಲ್ಲಪ್ರತಿವನವನಮಾಲಾಂಶುರಾಜದ್ಭುಜಾಂತಂ — ಉಪವನವು ಅರಳಿರುವ ಸುತ್ತಮುತ್ತಲಿನ ವನಗಳ, ಸೇವಿಸಲು ಯೋಗ್ಯಗಳಾದ ಸಾಲುಗಳಲ್ಲಿ ಪ್ರಸರಿಸಿ ಬೆಳಗುತ್ತಿರುವ ರೆಂಬೆಗಳೆಂಬ ಭುಜಗಳ ಕೊನೆಗಳುಳ್ಳದ್ದಾಗಿರುತ್ತದೆ. ವಿಷ್ಣುವಿನ ವಕ್ಷಸ್ಥಳವು ಅರಳಿರುವ ಎಲ್ಲ ವನಗಳ ಪತ್ರಪುಷ್ಪಗಳಿಂದ ರಚಿತವಾಗಿರುವ ವನಮಾಲೆಯೆಂಬ, ಕಂಠದಿಂದ ಪಾದದವರೆಗೂ ಅಲಂಕಾರವಾಗಿರುವ, ಹಾರದ ಕಿರಣಗಳಿಂದ ಶೋಭಿಸುವ, ಭುಜಗಳ ಮಧ್ಯ ಪ್ರದೇಶವುಳ್ಳದ್ದಾಗಿರುತ್ತದೆ.

ಮುಗ್ಧಮುಕ್ತಾಫಲಾಢ್ಯಂ — ಉಪವನವು ಮೋಹಕಗಳಾದ ಮುತ್ತಿನಂಥ ಫಲಗಳಿಂದ ತುಂಬಿರುತ್ತದೆ. ವಿಷ್ಣುವಕ್ಷಸ್ಥಳವೂ, ಶ್ರೀ ಭಗವತ್ಸ್ವರೂಪದಲ್ಲಿ ಅತ್ಯಾಸಕ್ತರಾಗಿರುವ ಭಕ್ತರಿಗೆ ಮುಕ್ತಿಯೆಂಬ ಫಲವನ್ನು ಪೂರ್ಣವಾಗಿ ಕೊಡುವಂಥದ್ದಾಗಿದೆ.

ಕೌಸ್ತುಭಾಂಶು ಪ್ರಸರಕಿಸಲಯೈಃ ಸಂಸ್ತೀರ್ಣಂ — ಉಪವನವು ಕೌಸ್ತುಭಮಣಿಯಂತೆ ಪ್ರಕಾಶಿಸುವ ಪುಷ್ಪಗಳಿಂದ ಹರಡುತ್ತಿರುವ ಕಿರಣಗಳಂತಿರುವ ಚಿಗುರುಗಳಿಂದ ವ್ಯಾಪ್ತವಾಗಿರುತ್ತದೆ. ವಿಷ್ಣುವಿನ ವಕ್ಷಸ್ಥಳವು ಕೌಸ್ತುಭವೆಂಬ ರತ್ನದಿಂದ ಹರಡುವ ಚಿಗುರುಗಳಂತಿರುವ ಕಿರಣಗಳಿಂದ ವ್ಯಾಪ್ತವಾಗಿರುತ್ತದೆ. —೨೮.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀವತ್ಸದ ವರ್ಣನೆ—

ಕಾಂತಂ ವಕ್ಷೋ ನಿತಾಂತಂ ವಿದಧದಿವ ಗಲಂ ಕಾಲಿಮಾ ಕಾಲಶತ್ರೋಃ
ಇಂದೋರ್ಬಿಂಬಂ ಯಥಾಂಕೋ ಮಧುಪ ಇವ ತರೋರ್ಮಂಜ.
ರೀಂ ರಾಜತೇ ಯಃ ।
ಶ್ರೀಮಾನ್ನಿತ್ಯಂ ವಿಧೇಯಾದವಿರಲಮಿಲಿತಃ ಕೌಸ್ತುಭಶ್ರೀಪ್ರತಾನೈಃ
ಶ್ರೀವತ್ಸಃ ಶ್ರೀಪತೇಃ ಸಶ್ರಿಯ ಇವ ದಯಿತೋ ವತ್ಸ ಉಚ್ಚೈಃ
ಶ್ರಿಯಂ ನಃ ॥೨೯॥

ಕಾಲಶತ್ರೋಃ--ಮೃತ್ಯುಂಜಯನಾದ ಶ್ರೀ ಪರಮೇಶ್ವರನ; **ಗಲಂ**--ಕಂಠವನ್ನು ; **ಕಾಲಿಮಾ ಇವ** — ಜಗದ್ರಕ್ಷಣೆಗಾಗಿ ಪಾನಮಾಡಿದ ಕಾಲಕೂಟ ಮಹಾವಿಷದಿಂದ ಉಂಟಾದ ಕಪ್ಪು ಚಿಹ್ನೆಯು ಹೇಗೋ ಹಾಗೂ ; **ಇಂದೋಃ ಬಿಂಬಂ ಅಂಕಃ ಯಥಾ** — ನಿರ್ಮಲವಾದ ಚಂದ್ರಮಂಡಲವನ್ನು ಕಳಂಕವು ಹೇಗೋ ಹಾಗೂ ; **ತರೋಃ ಮಂಜರೀಂ ಮಧುಪಃ ಇವ** — ಮರದ ಹೂಗೊಂಚಲನ್ನು ದುಂಬಿಗಳು ಹೇಗೋ ಹಾಗೂ ; **ಶ್ರೀಪತೇಃ**--ಶ್ರೀ ಮಹಾವಿಷ್ಣುವಿನ; **ವಕ್ಷಃ**—ವಕ್ಷಸ್ಥಳವನ್ನು ; **ನಿತಾಂತಂ ಕಾಂತಂ ವಿದಧತ್**—ಅತಿಶಯವಾಗಿ ಶೋಭಾಯಮಾನವಾಗಿ ಮಾಡುತ್ತ ; **ಯಃ ರಾಜತೇ** — ಯಾವುದು ವಿರಾಜಿಸುತ್ತಿದೆಯೋ ; **ಕೌಸ್ತುಭಶ್ರೀಪ್ರತಾನೈಃ**—ಕೌಸ್ತುಭಮಣಿಯ ಅತಿಶಯವಾದ ಕಾಂತಿಯ ಪ್ರಸಾರಗಳಿಂದ ; **ಅವಿರಲಮಿಲಿತಃ** — ದಟ್ಟವಾಗಿ ಮಿಶ್ರವಾಗಿರುವ; **ಶ್ರೀಮಾನ್** - ಪ್ರಕಾಶಮಾನವಾಗಿರುವ ; **ಶ್ರಿಯಃ ದಯಿತಃ ವತ್ಸಃ ಇವ**--ಲಕ್ಷ್ಮೀದೇವಿಯ ಪ್ರೀತಿಪಾತ್ರವಾದ ಮಗುವಿನಂತಿರುವ ; **ಶ್ರೀವತ್ಸಃ ಸಃ** — ಶ್ರೀವತ್ಸವೆಂಬ ಆ ಚಿಹ್ನೆಯು ; **ನಃ**—ನಮಗೆ ; **ಶ್ರಿಯಂ ಉಚ್ಚೈಃ ವಿಧೇಯಾತ್**—ಅತ್ಯಧಿಕವಾಗಿ ಸಕಲ ಸೌಭಾಗ್ಯ ಸಂಪತ್ತನ್ನು ಉಂಟುಮಾಡಲಿ—೨೯.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೌಸ್ತುಭಸ್ತುತಿ--

ಸಂಭೂಯಾಂಭೋಧಿಮಧ್ಯಾತ್ಸಪದಿ ಸಹಜಯಾ ಯಃ ಶ್ರಿಯಾ
ಸನ್ನಿಧತ್ತೇ ನೀಲೇ ನಾರಾಯಣೋರಸ್ಥಳಗಗನತಲೇ ಹಾರತಾ
ರೋಪಸೇವ್ಯೇ ।
ಆಶಾಃ ಸರ್ವಾಃ ಪ್ರಕಾಶಾ ವಿದಧದವಿದಧಚ್ಚಾತ್ಮಭಾಸಾನ್ಯತೇಜಾಂ
ಸ್ಯಾಶ್ಚರ್ಯಸ್ಯಾಕರೋ ನೋ ದ್ಯುಮಣಿರಿವ ಮಣಿಃ ಕೌಸ್ತುಭಃ
ಸೋಽಸ್ತು ಭೂತ್ಯೈ ॥೩೦॥

ದ್ಯುಮಣಿಃ ಇವ ಕೌಸ್ತುಭಃ ಮಣಿಃ — ಸೂರ್ಯನಂತೆ ಇರುವ ಕೌಸ್ತುಭವೆಂಬ ರತ್ನವು ; **ನಃ**--ನಮ್ಮ ; **ಭೂತ್ಯೈ**--ಸೌಭಾಗ್ಯಕ್ಕೆ ; **ಅಸ್ತು**--ಆಗಲಿ.

ಕೌಸ್ತುಭಮಣಿಯು ಸೂರ್ಯನಂತೆ ಇದೆ--

ಅಂಭೋಧಿಮಧ್ಯಾತ್ ಸಂಭೂಯ ಸಹಜಯಾ ಶ್ರಿಯಾ ಯಃ ಸನ್ನಿಧತ್ತೇ—ಸಮುದ್ರಮಧ್ಯದಿಂದ ಹುಟ್ಟಿ ಬಂದು, ತನಗೆ ಸಹಜವೇ ಆಗಿರುವ ತೇಜಸ್ಸಿನಿಂದ ಪ್ರತ್ಯಕ್ಷವಾಗುತ್ತದೆ. ಸೂರ್ಯನು ಸಮುದ್ರಮಧ್ಯದಿಂದ ಹುಟ್ಟಿ ಬಂದು, ತನ್ನದೇ ಆದ ನಿರತಿಶಯಪ್ರಕಾಶದಿಂದ ಎಲ್ಲರಿಗೂ ಪ್ರತ್ಯಕ್ಷವಾಗುತ್ತಾನೆ. ಕೌಸ್ತುಭಮಣಿಯೂ ಸಮುದ್ರಮಥನಕಾಲದಲ್ಲಿ ಸಮುದ್ರದಿಂದ ಹುಟ್ಟಿ ಬಂದು, ತನ್ನ ದಿವ್ಯಪ್ರಕಾಶದಿಂದ ಪ್ರಕಟವಾಯಿತು.

ಹಾರತಾರೋಪಸೇವ್ಯೇ ನೀಲೇ ನಾರಾಯಣೋರಸ್ಥಳಗಗನತಲೇ —ಹಾರದಂತೆ ಸಾಲುಸಾಲಾಗಿರುವ ನಕ್ಷತ್ರಗಳಿಂದ ಅಲಂಕೃತವಾಗಿರುವ, ಶ್ರೀಮನ್ನಾರಾಯಣನ ವಕ್ಷಸ್ಥಳದಂತೆ ನೀಲವರ್ಣವಾದ ಆಕಾಶದಲ್ಲಿ ಸೂರ್ಯನು ಬೆಳಗುತ್ತಾನೆ. ಕೌಸ್ತುಭಮಣಿಯೂ ನಕ್ಷತ್ರಗಳಂತೆ ಪ್ರಕಾಶಿಸುತ್ತಿರುವ ರತ್ನಹಾರಗಳಿಂದ ಅಲಂಕೃತವಾಗಿ, ನೀಲವರ್ಣವಾಗಿದ್ದ ಶ್ರೀಮನ್ನಾರಾಯಣನ ವಕ್ಷಸ್ಥಳವೆಂಬ ವಿಶಾಲ[illegible]ದಲ್ಲಿ ಬೆಳಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸರ್ವಾಃ ಆಶಾಃ ಪ್ರಕಾಶಾಃ ವಿದಧತ್ –ಸೂರ್ಯನೂ ಕೌಸ್ತು ಭವೂ ತನ್ನ ತೇಜಸ್ಸಿನಿಂದ ದಿಕ್ಕುಗಳನ್ನೆಲ್ಲ ಬೆಳಗಿಸುತ್ತವೆ.

ಆತ್ಮಭಾಸಾ ಅನ್ಯತೇಜಾಂಸಿ ಅವಿದಧತ್––ಇವೆರಡೂ ಸಹ ತನ್ನ ದಿವ್ಯಪ್ರಕಾಶದಿಂದ ಚಂದ್ರ ನಕ್ಷತ್ರ ಅಗ್ನಿ ಮಿಂಚು ಮುಂತಾದ ಇತರ ಎಲ್ಲ ತೇಜಸ್ಸುಗಳನ್ನೂ ಅಡಗಿಸಿ ಅಪ್ರಕಾಶಗಳನ್ನಾಗಿ ಮಾಡುತ್ತವೆ.

ಈ ರೀತಿಯಾಗಿ ಇವೆರಡೂ, **ಆಶ್ಚರ್ಯಸ್ಯ ಆಕರಃ**––ಅತ್ಯಂತ ಅದ್ಭುತವಾಗಿ ಆಶ್ಚರ್ಯಕ್ಕೆ ಗಣಿಯಾಗಿವೆ.––೩೦.

ವೈಜಯಂತೀ ಮಾಲೆಯ ವರ್ಣನೆ—

ಯಾ ವಾಯಾವಾನುಕೂಲ್ಯಾತ್ಸರತಿ ಮಣಿರುಚಾ ಭಾಸಮಾನಾ ಽಸಮಾನಾ ಸಾಕಂಸಾ ಕಂಪಮಂಸೇ ವಸತಿ ವಿದಧತೀ ವಾಸುಭದ್ರಂ ಸುಭದ್ರಂ ।
ಸಾರಂ ಸಾರಂಗಸಂಘೈರ್ಮುಖರಿತಕುಸುಮಾ ಮೇಚಕಾಂತಾ ಚ ಕಾಂತಾ ಮಾಲಾ ಮಾಲಾಲಿ ತಾಸ್ಮಾನ್ನ ವಿರಮತು ಸುಖೈರ್ಯೋಜಯಂತೀ ಜಯಂತೀ ॥೩೧॥

ವಾಯೌ—ಮಂದಮಾರುತವು; **ಆನುಕೂಲ್ಯಾತ್ ಸರತಿ (ಸತಿ)** ಹಿತಕರವಾಗಿ ಚಲಿಸುತ್ತಿರಲು; **ಅಂಸೇ** — ವಿಷ್ಣುವಿನ ಭುಜದಲ್ಲಿ; **ಮಣಿರುಚಾ ಸಾಕಂ** — ಕೌಸ್ತುಭಮಣಿಯ ವಿಚಿತ್ರವರ್ಣಗಳಿಂದ ಕೂಡಿ; **ಅಸಮಾನಾ ಭಾಸಮಾನಾ** —ಅಸದೃಶವಾಗಿ ಪ್ರಕಾಶಿಸುತ್ತ; **ಸಾಕಂಪಂಯಾ ವಸತಿ** — ಮೆಲ್ಲ ಮೆಲ್ಲನೆ ಹರಿದಾಡುತ್ತ ಯಾವ ಮಾಲೆಯು ವಾಸವಾಗಿರುವುದೋ; **ಜಯಂತೀ** — ವಿಷ್ಣುವಿಗೆ ಸರ್ವತೋ ಜಯ ಸೂಚಕವಾಗಿರುವ ವೈಜಯಂತೀ ಎಂದು ಪ್ರಸಿದ್ಧವಾಗಿರುವ; **ಮೇಚಕಾಂತಾ** — ನೀಲವಾದ ಅಂಚನ್ನುಳ್ಳ; **ಸಾರಂಗಸಂಘೈಃ ಮುಖರಿತಕುಸುಮಾ** — ದುಂಬಿಗಳ ಗುಂಪುಗಳಿಂದ ಶಬ್ದ ಮಾಡುತ್ತಿರುವ ಹೂಗಳನ್ನುಳ್ಳ ಆದ್ದರಿಂದಲೆ; **ಕಾಂತಾ** — ಅತ್ಯಂತ ಮನೋಹರವಾಗಿದ್ದು; **ವಾಸುಭದ್ರಂ** — (ರಾಮಭದ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬಂತೆ) ಶ್ರೀ ವಾಸುದೇವನನ್ನು; **ಆರಂ ಸುಭದ್ರಂ ವಿದಧತೀ**--ವಿಶೇಷವಾಗಿ ಶೋಭಾಯಮಾನನನ್ನಾಗಿ ಮಾಡುವ; **ಮಾಲಾಲಿತಾ**--ಶ್ರೀ ಲಕ್ಷ್ಮೀದೇವಿಯಿಂದ ಅಭಿನಂದಿತವಾಗಿರುವ; **ಸಾ ಮಾಲಾ**--ಆ ಹಾರವು; **ನಃ**—ನಮ್ಮನ್ನು; **ಸುಖೈಃ ಯೋಜಯಂತೀ** -ಇಹಪರಗಳ ಮತ್ತು ಮೋಕ್ಷಸುಖಗಳಿಂದ ಹೊಂದಿಸುತ್ತ; **ಮಾ ವಿರಮತು**—ವಿರಮಿಸದೆ ಇರಲಿ—ನಿತ್ಯವೂ ಸುಖಗಳನ್ನು ಹೊಂದಿಸುತ್ತಲೇ ಇರಲಿ.

ಈ ಸ್ತೋತ್ರದ ಪದ್ಯಗಳು ಮೊದಲಿಂದ ಕಡೆಯವರೆಗೂ, ಪ್ರೌಢವಾದ ಶೈಲಿಯಲ್ಲಿದ್ದು ಅನೇಕ ವಿಧ ಶಬ್ದಾಲಂಕಾರ--ಅರ್ಥಾಲಂಕಾರಗಳಿಂದ ಶೋಭಿಸುತ್ತಿರುವುದು ಸ್ಪಷ್ಟವೇ ಇದೆ; ಈ ಪದ್ಯದ ಪ್ರತಿಯೊಂದು ಪಾದವೂ ಆದ್ಯಂತಗಳಲ್ಲಿ ಯಮಕ ಪ್ರಾಸಬದ್ಧವಾಗಿರುವುದು ವಿಶೇಷವು.—೩೧.

ಶ್ರೀ ವಿಷ್ಣುವಿನ ಹೆಗಲುಗಳ ಪ್ರಾರ್ಥನೆ—

ಹಾರಸ್ಯೋರು ಪ್ರಭಾಭಿಃ ಪ್ರತಿವನವನಮಾಲಾಂಶುಭಿಃ ಪ್ರಾಂಶುಭಿರ್ಯತ್ ಶ್ರೀಭಿಶ್ಚಾಪ್ಯಂಗದಾನಾಂ ಶಬಲಿತರುಚಿಭಿರ್ನಿಷ್ಕಭಾಭಿಶ್ಚ ಭಾತಿ ।
ಬಾಹುಲ್ಯೇನೈವ ಬದ್ಧಾಂಜಲಿಪುಟಮಜಿಸ್ಯಾಭಿಯಾಚಾಮಹೇ ತತ್ ಬಂಧಾರ್ತಿಂ ಬಾಧತಾಂ ನೋ ಬಹುವಿಹತಿಕರೀಂ ಬಂಧುರಂ ಬಾಹುಮೂಲಂ ॥ ॥೩೨॥

ಪ್ರಾಂಶುಭಿಃ—ನೀಳವಾಗಿ ಹರಡುತ್ತಿರುವ: **ಪ್ರತಿವನವನಮಾಲಾಂಶುಭಿಃ**—ಎಲ್ಲ ಪುಷ್ಪವನಗಳ ಹೂಗಳಿಂದ ರಚಿಸಿದ ವನಮಾಲೆಯೆಂಬ ಮಾಲೆಯ ಕಿರಣಗಳನ್ನುಳ್ಳ: **ಹಾರಸ್ಯ ಉರುಪ್ರಭಾಭಿಃ**—ಪುಷ್ಪಹಾರದ ಅತ್ಯಧಿಕವಾದ ಕಾಂತಿಗಳಿಂದಲೂ; **ಅಂಗದಾನಾಂ ಶ್ರೀಭಿಃ ಚ**—ಭುಜಗಳನ್ನು ಅಲಂಕರಿಸಿರುವ ಭುಜಕೀರ್ತಿಗಳೆಂಬ ಆಭರಣಗಳ ಕಾಂತಿಗಳಿಂದಲೂ; **ನಿಷ್ಕಭಾಭಿಃ ಚ**—ಹಾಗೆಯೇ ಇತರ ವಿವಿಧ ರತ್ನಖಚಿತ ಸುವರ್ಣಾಲಂಕಾರಗಳ ಕಾಂತಿಗಳಿಂದಲೂ; **ಶಬಲಿತರುಚಿಭಿಃ**—ಮಿಶ್ರವಾದ ಶೋಭೆಯಿಂದ; **ಯತ್ ಭಾತಿ**—ಯಾವ ಹೆಗಲು ಪ್ರದೇಶವು ಬೆಳಗುತ್ತಿದೆಯೋ; **ಅಜಿತಸ್ಯ ತತ್ ಬಾಹುಮೂಲಂ ಏವ**—ಶ್ರೀ ವಿಷ್ಣುವಿನ ಅಂಥ ಅಂಸದೇಶವನ್ನೇ; **ಬದ್ಧಾಂಜಲಿಪುಟಂ**—ಅಂಜಲಿಬದ್ಧವಾಗಿ; **ಬಾಹುಲ್ಯೇನ ಅಭಿಯಾಚಾ**

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹೇ—ಅತಿಶಯವಾಗಿ ಪ್ರಾರ್ಥಿಸುತ್ತೇವೆ ; ತತ್—ಅದು ; ನಃ—ನಮ್ಮ; ಬಹುವಿಹತಿಕರೀಂ—ಬಹುವಾಗಿ ಅನರ್ಥವನ್ನು ಉಂಟುಮಾಡುತ್ತಿರುವ ; ಬಂಧಾರ್ತಿಂ—ಸಂಸಾರ ಬಾಧೆದಿಂದಾಗಿರುವ ಪೀಡೆಯನ್ನು ; ಬಾಧತಾಂ—ಪರಿಹರಿಸಲಿ—೩೨.

ಶ್ರೀ ವಿಷ್ಣುವಿನ ಬಾಹುಗಳ ಪ್ರಶಂಸೆ—

ವಿಶ್ವತ್ರಾಣೈಕದೀಕ್ಷಾಸ್ತದನುಗುಣ ಗಣ ಕ್ಷತ್ರ ನಿರ್ಮಾಣ ದಕ್ಷಾಃ
ಕರ್ತಾರೋ ದುರ್ನಿರೂಪಾಃ ಸ್ಫುಟಗುರುಯಶಸಾಂ ಕರ್ಮಣಾ ಮದ್ಭುತಾನಾಂ ।
ಶಾರ್ಙ್ಗಂ ಬಾಣಂ ಕೃಪಾಣಂ ಫಲಕಮರಿಗದೇ ಪದ್ಮಶಂಖೌ ಸಹಸ್ರಂ
ಬಿಭ್ರಾಣಾಃ ಶಸ್ತ್ರಜಾಲಂ ಮಮ ದದತು ಹರೇರ್ಬಾಹವೋ ಮೋಹ ಹಾನಿಂ ॥ ॥೩೩॥

ವಿಶ್ವತ್ರಾಣೈಕದೀಕ್ಷಾಃ—ಜಗದ್ರಕ್ಷಣೆಯಲ್ಲಿಯೇ ಮುಖ್ಯವಾಗಿ ದೀಕ್ಷೆ ಹೊಂದಿರುವ ; ತದನು ಗುಣ ಗಣ ಕ್ಷತ್ರ ನಿರ್ಮಾಣ ದಕ್ಷಾಃ—ಅದಕ್ಕೆ ತಕ್ಕ ವೀರ್ಯ ಶೌರ್ಯಾದಿ ಗುಣ ಗಣಗಳನ್ನುಳ್ಳ ಕ್ಷತ್ರಿಯ ವಂಶವನ್ನು ರಚಿಸುವುದರಲ್ಲಿ ಸಮರ್ಥಗಳಾದ ; ಸ್ಫುಟಗುರು ಯಶಸಾಂ—ಸ್ಪಷ್ಟವಾಗಿ ಅತಿಶಯವಾದ ಕೀರ್ತಿಯನ್ನು ಗಳಿಸಿರುವ ; ಅದ್ಭುತಾನಾಂ ಕರ್ಮಣಾಂ ಕರ್ತಾರಃ—ಅಸಿತರ ಸಾಧಾರಣಗಳಾದ ಅಂಥ ಕಾರ್ಯಗಳನ್ನು ಮಾಡುವ ; ದುರ್ನಿರೂಪಾಃ—'ಇಷ್ಟೇ ಸಾಮರ್ಥ್ಯ'—ಎಂದು ನಿರೂಪಿಸಲು ಅಶಕ್ಯಗಳಾದ ; ಶಾರ್ಙ್ಗಂ, ಬಾಣಂ, ಕೃಪಾಣಂ, ಫಲಕಂ, ಅರಿಗದೇ, ಪದ್ಮಶಂಖೌ—ಬಿಲ್ಲು, ಬಾಣ, ಕತ್ತಿ, ಗುರಾಣಿ, ಚಕ್ರ, ಗದೆ, ಪದ್ಮ ಶಂಖ—ಇವೇ ಮೊದಲಾದ ; ಸಹಸ್ರಂ ಶಸ್ತ್ರಜಾಲಂ—ಸಾವಿರಾರು ಶಸ್ತ್ರಾಸ್ತ್ರಗಳನ್ನು ಈ ಕಾರ್ಯಕ್ಕಾಗಿಯೇ ; ಬಿಭ್ರಾಣಾಃ—ಧರಿಸಿರುವ ; ಹರೇಃ—ಶ್ರೀ ಮಹಾ ವಿಷ್ಣುವಿನ ; ಸಾಹಸ್ರಂ ಬಾಹವಃ—ಸಹಸ್ರಾರು—ಎಂದರೆ, ಅಸಂಖ್ಯಾತಗಳಾದ ಬಾಹುಗಳು ; ಮಮ—ನನಗೆ ; ಮೋಹ ಹಾನಿಂ—ಸಂಸಾರ ಕಾರಣವಾದ ಮೋಹದ ನಾಶವನ್ನು ; ದದತು—ಉಂಟುಮಾಡಿ ಕೊಡಲಿ—೩೩.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ವಿಷ್ಣುವಿನ ಕಂಠದ ವರ್ಣನೆ--

ಕಂಠಾಕಲ್ಪೋದ್ಗತೈರ್ಯಃ ಕನಕಮಯಲಸತ್ಕುಂಡಲೋಸ್ರೈರು.
ದಾರೈಃ, ಉದ್ಯೋತೈಃ ಕೌಸ್ತುಭಸ್ಯಾಪ್ಯುರುಭಿರುಪಚಿತಶ್ಚಿತ್ರ
ವರ್ಣೋ ವಿಭಾತಿ ।
ಕಂಠಾಶ್ಲೇಷೇ ರಮಾಯಾಃ ಕರವಲಯಪದೈರ್ಮುದ್ರಿತೇ ಭದ್ರ
ರೂಪೇ ವೈಕುಂಠೀಯೇऽತ್ರ ಕಂಠೇ ವಸತು ಮಮ ಮತಿಃ ಕುಂಠ
ಭಾವಂ ವಿಹಾಯ ॥ ॥೩೪॥

'ಕಂಠಾಕಲ್ಪೋದ್ಗತೈಃ--ಕತ್ತಿನಲ್ಲಿರುವ ಆಭರಣಗಳಿಂದ ಹರಡು ತ್ತಿರುವ; **ಕನಕಮಯಲಸತ್ಕುಂಡಲೋಸ್ರೈಃ**--ಸುವರ್ಣದ ರತ್ನ ಖಚಿತವಾದ ಕುಂಡಲಗಳ ಕಾಂತಿಗಳಿಂದ; **ಕೌಸ್ತುಭಸ್ಯ ಅಪಿ ಉರುಭಿಃ ಉದ್ಯೋತೈಃ**--ಅತಿಶಯವಾಗಿರುವ ಕೌಸ್ತುಭ ಮಣಿಯ ಪ್ರಕಾಶಗಳಿಂದ; ಇಂಥ **ಉದಾರೈಃ**—ಅಧಿಕಾಧಿಕಗಳಾಗಿರುವ ನಾನಾ ವರ್ಣಗಳಿಂದ; **ಉಪ ಚಿತಃ**—ಹೆಚ್ಚು ಮಾಡಲ್ಪಟ್ಟದ್ದಾಗಿ; **ಯಃ ಚಿತ್ರ ವರ್ಣಃ ವಿಭಾತಿ**— ವಿಚಿತ್ರ ವರ್ಣದ್ದಾಗಿ ಬೆಳಗುತ್ತಿರುವ; ಮತ್ತು **ರಮಾಯಾಃ ಕಂಠಾಶ್ಲೇಷೇ** —ಶ್ರೀ ಲಕ್ಷ್ಮೀದೇವಿಯ ದೃಢತರವಾದ ಆಲಿಂಗನದ ನಿಮಿತ್ತವಾಗಿ; **ಕರವಲಯ ಪದೈಃ ಮುದ್ರಿತೇ**—ಆಕೆಯ ಕರಕಮಲಗಳಲ್ಲಿರುವ ಕಂಕಣಗಳ ಗುರುತುಗಳಿಂದ, ಚಿಹ್ನೆಯನ್ನು ಹೊಂದಿರುವ; ಇಂಥ **ಭದ್ರರೂಪೇ**—ಮಂಗಳ ಸ್ವರೂಪವಾದ; **ವೈಕುಂಠೀಯೇ ಅತ್ರ ಕಂಠೇ**—ಶ್ರೀ ವಿಷ್ಣುವಿನ ಈ ಕಂಠದಲ್ಲಿ; **ಕುಂಠಭಾವಂ ವಿಹಾಯ**—ಆಲಸ್ಯವನ್ನು ತೊರೆದು; **ಮಮ ಮತಿಃ ವಸತು**—ನನ್ನ ಮನಸ್ಸು ಯಾವಾಗಲೂ ವಾಸಿಸುವುದಾಗಲಿ.

ಕಂಠದಲ್ಲಿ ತ್ರಿವಳಿ (ಮೂರು ಗೆರೆಗಳು) ಯಿರುವುದು ಲಕ್ಷಣವು; ಶ್ರೀ ವಿಷ್ಣುವಿನ ಕಂಠವೂ ಈ ತ್ರಿವಳಿಯಿಂದ ಶೋಭಿಸುತ್ತಿರುವುದು. ಶ್ರೀ ಲಕ್ಷ್ಮೀ ದೇವಿಯು ಬಿಗಿಯಾಗಿ ಕಂಠದಲ್ಲಿ ಆಲಿಂಗಿಸಿದ್ದರಿಂದ, ಆಕೆಯ ಕರಕಮಲ ಗಳಲ್ಲಿದ್ದ ಕಂಕಣ (ಬಳೆ) ಗಳು ಶ್ರೀ ವಿಷ್ಣುವಿನ ಕಂಠದಲ್ಲಿ ಒತ್ತಿ ಆಗಿರುವ ಗುರುತುಗಳಾಗಿವೆಯೆಂದು ಇವುಗಳನ್ನು ಉತ್ಪ್ರೇಕ್ಷಿಸಿ ವರ್ಣಿಸಿದೆ.—೩೪.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ವಿಷ್ಣುವಿನ ತುಟಿಗಳ ವರ್ಣನೆ.—

ಪದ್ಮಾನಂದಪ್ರದಾತಾ ಪರಿಲಸದರುಣ ಶ್ರೀ ಪರೀತಾಗ್ರಭಾಗಃ
ಕಾಲೇ ಕಾಲೇ ಚ ಕಂಬುಪ್ರವರಶಶಧರಾ ಪೂರಣೇ ಯಃ ಪ್ರವೀಣಃ ।
ವಕ್ತ್ರಾಕಾಶಾಂತರಸ್ಥಸ್ತಿರಯತಿ ನಿತರಾಂ ದಂತತಾರೌಘಶೋಭಾಂ ।
ಶ್ರೀ ಭರ್ತುರ್ದಂತವಾಸೋದ್ಯುಮಣಿರಘತಮೋ ನಾಶನಾಯಾಸ್ತ್ವಸೌ ನಃ ॥ ॥೩೩॥

ಪದ್ಮಾನಂದ ಪ್ರದಾತಾ—ಶ್ರೀ ಲಕ್ಷ್ಮೀದೇವಿಗೂ; ಕಮಲಗಳಿಗೂ—ಆನಂದವನ್ನು—ಅರಳುವಿಕೆಯನ್ನು; ಉಂಟುಮಾಡುವ; **ಪರಿಲಸದರುಣ ಶ್ರೀ ಪರೀತಾಗ್ರ ಭಾಗಃ**—ಹೊಳೆಯುವ ರಕ್ತವರ್ಣದಿಂದ ತುಂಬಿರುವ ಮುಂಭಾಗವನ್ನುಳ್ಳ; ತುಂಬಿದ ಕಾಂತಿಯ ಅರುಣಸಿಂದ ಆಕ್ರಮಿಸಲ್ಪಟ್ಟ ಮುಂಭಾಗವನ್ನುಳ್ಳ; **ಕಾಲೇ ಕಾಲೇಚ**—ವೈದಿಕ ವರ್ಣಾಶ್ರಮ ಧರ್ಮವು ಕ್ಷೀಣಿಸಿದಾಗಲೆಲ್ಲ ಅಧರ್ಮಿಷ್ಠರ ನಾಶಮಾಡಬೇಕಾಗಿ ಬಂದ ಸಮಯಗಳಲ್ಲೆಲ್ಲ; ದೇವತೆಗಳಿಂದ ಕುಡಿಯಲ್ಪಟ್ಟು ಕ್ಷೀಣನಾಗಲಾಗಿ, ಮತ್ತೆ ಅವನ್ನು ಸರಿಪಡಿಸಬೇಕಾಗಿ ಬಂದ ಸಮಯಗಳಲ್ಲೆಲ್ಲ; **ಕಂಬು ಪ್ರವರ ಶಶಧರಾ ಪೂರಣೇ ಪ್ರವೀಣಃ**—ಶಂಖ ಶ್ರೇಷ್ಠವಾದ ಪಾಂಚಜನ್ಯವೆಂಬ ಚಂದ್ರನನ್ನು ಶಬ್ದದಿಂದ ತುಂಬುವದರಲ್ಲಿ ಚತುರವಾಗಿರುವ; ಶ್ರೇಷ್ಠ ಶಂಖದಂತೆ ಶುಭ್ರವಾಗಿರುವ ಚಂದ್ರನನ್ನು ಮತ್ತೆ ಕಳೆಗಳಿಂದ ಪೂರ್ಣಮಾಡುವುದರಲ್ಲಿ ಪ್ರವೀಣನಾದ; **ವಕ್ತ್ರಾಕಾಶಾಂತರಸ್ಥಃ** — ಮುಖಾಕಾಶದ ಅಂಚಿನಲ್ಲಿರುವ; ಪ್ರಪಂಚದ ಮುಖವಾದ (ಸೃಷ್ಟಿಯ ಆದಿಯಾದ) ಆಕಾಶದಲ್ಲಿ ಇರುವ; **ದಂತತಾರೌಘಶೋಭಾಂ ನಿತರಾಂ ಯಃ ತಿರಯತಿ**—ನಕ್ಷತ್ರಗಳಂತೆ ಹೊಳೆಯುವ ಹಲ್ಲುಗಳ ವಿಲಾಸವನ್ನು ಯಾವುದು ಪೂರ್ಣವಾಗಿ ಮುಚ್ಚುವುದೋ; ಹಲ್ಲುಗಳಂತಿರುವ ನಕ್ಷತ್ರಗಳ ಕಾಂತಿಯನ್ನು ಯಾವುದು ಪೂರ್ಣವಾಗಿ ತಿರಸ್ಕಾರ ಮಾಡುವುದೋ; ಅಂಥ **ಶ್ರೀ ಭರ್ತುಃ ಅಸೌ ದಂತವಾಸೋದ್ಯುಮಣಿಃ**—ಶ್ರೀ ಲಕ್ಷ್ಮೀಪತಿಯ ತುಟಿಯೆಂಬ ಈ ಸೂರ್ಯನು; ತೇಜಸ್ಸಿಗೆಲ್ಲ ಬೀಡೇ [illegible] ತುಟಿಯಾತ ರಕ್ತವರ್ಣನಾಗಿರುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೂರ್ಯನು ; **ನಃ**—ನಮ್ಮ; **ಅಘುತಮೋ ನಾಶನಾಯ ಅಸ್ತು**—ಪಾಪ ವೆಂಬ ತಮೋಗುಣದ ನಾಶವನ್ನು ಮಾಡುವವನಾಗಲಿ; ಪಾಪಕ್ಕೆ ಕಾರಣ ವಾಗಿರುವ ಅಜ್ಞಾನಾಂಧಕಾರವನ್ನು ನಾಶಮಾಡುವವನಾಗಲಿ.

ಇಲ್ಲಿ ಶ್ರೀ ವಿಷ್ಣುವಿನ ತುಟಿಯನ್ನು ಪ್ರಸಿದ್ಧನಾದ ಸೂರ್ಯನೆಂದು ವರ್ಣಿಸಿದೆ. ಇಲ್ಲಿ ಹೇಳಿರುವ ವಿಶೇಷಣಗಳು ಶ್ರೀ ವಿಷ್ಣುವಿನ ತುಟಿಗಳಿಗೂ ಸೂರ್ಯನಿಗೂ ಅನ್ವಯಿಸುತ್ತವೆ.—೨೫.

ಹಲ್ಲುಗಳ ಪ್ರಾರ್ಥನೆ—

ನಿತ್ಯಂ ಸ್ನೇಹಾತಿರೇಕಾನ್ನಿಜಕವಿತುರಲಂ ವಿಪ್ರಯೋಗಾಕ್ಷಮಾ ಯಾ ವಕ್ತ್ರೇಂದೋರಂತರಾಲೇ ಕೃತವಸತಿರಿವಾ ಭಾತಿ ನಕ್ಷತ್ರ ರಾಜಿಃ ।
ಲಕ್ಷ್ಮೀಕಾಂತಸ್ಯ ಕಾಂತಾಕೃತಿರತಿ ವಿಲಸನ್ಮುಗ್ಧ ಮುಕ್ತಾಫಲ ಶ್ರೀಃ ದಂತಾಲೀ ಸಂತತಂ ಸಾ ನತಿನುತಿ ನಿರತಾನ್ ರಕ್ಷತಾದಕ್ಷತಾ ನಃ ॥
॥೨೬॥

ಸ್ನೇಹಾತಿರೇಕಾತ್—ಅಧಿಕವಾದ ಪ್ರೀತಿಯ ವಶದಿಂದ; **ನಿಜ ಕವಿತುಃ**—ತಮ್ಮ ಪತಿಯಾದ ಚಂದ್ರನ; **ಅಲಂ ವಿಪ್ರಯೋಗಾಕ್ಷಮಾ**—ವಿರಹವನ್ನು ಸ್ವಲ್ಪವೂ ತಾಳಲಾರದೆ; **ನಿತ್ಯಂ**—ಯಾವಾಗಲೂ; **ವಕ್ತ್ರೇಂದೋಃ ಅಂತರಾಲೇ**—ಮುಖ ಚಂದ್ರನ ಅಂತರಂಗದಲ್ಲಿಯೇ; **ಕೃತ ವಸತಿಃ**—ಮನೆ ಮಾಡಿಕೊಂಡಿರುವ; **ನಕ್ಷತ್ರರಾಜಿಃ ಇವ**—ನಕ್ಷತ್ರಗಳ ಗುಂಪೋ—ಎಂಬುತೆ; **ಯಾ ವಿಭಾತಿ**—ಯಾವುದು ಪ್ರಕಾಶಿಸುತ್ತಿದೆಯೋ; **ಅತಿವಿಲಸನ್ಮುಗ್ಧಮುಕ್ತಾಫಲ ಶ್ರೀಃ**—ವಿಶೇಷವಾಗಿ ಶೋಭಿಸುವ ಮುದ್ದು ಮುತ್ತಿನ ಬೆಡಗನ್ನುಳ್ಳ; **ಕಾಂತಾಕೃತಿಃ**—ಸುಂದರಾಕಾರದ; **ಶ್ರೀ ಕಾಂತಸ್ಯ ಸಾ ಅಕ್ಷತಾ ದಂತಾಲೀ**—ಶ್ರೀ ವಿಷ್ಣುವಿನ ಮುಕ್ಕಾಗದ ಆ ಹಲ್ಲುಗಳ ಸಾಲು; **ಸಂತತಂ ನತಿನುತಿನಿರತಾನ್**—ಯಾವಾಗಲೂ ನಮ ಸ್ಕಾರಪೂರ್ವಕವಾಗಿ ಸ್ತುತಿಸುತ್ತಿರುವ; **ನಃ**—ನಮ್ಮನ್ನು; **ಸತತಂ ರಕ್ಷ ತಾತ್**—ಯಾವಾಗಲೂ ರಕ್ಷಿಸಲಿ.—೨೬.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ವಿಷ್ಣುವಿನ ಮಾತುಗಳ ಪ್ರಾರ್ಥನೆ.—

ಬ್ರಹ್ಮನ್ ಬ್ರಹ್ಮಣ್ಯಜಿಹ್ಮಾಂ ಮತಿ ಮಪಿ ಕುರುಷೇ, ದೇವ ಸಂಭಾವಯೇ ತ್ವಾಂ ಶಂಭೋ, ಶಕ್ರ ತ್ರಿಲೋಕೀ ಮವಸಿ ಕಿಮಮರ್ತ್ಯೈಃ, ನಾರದಾದ್ಯಾಃ ಸುಖಂವಃ।
ಇತ್ಥಂ ಸೇವಾವನಮ್ರಂ ಸುರಮುನಿನಿಕರಂ ವೀಕ್ಷ್ಯ ವಿಷ್ಣೋಃ ಪ್ರಸನ್ನಸ್ಯ ಆಸ್ಯೇಂದೋರಾಸ್ರವಂತೀ ವರವಚನ ಸುಧಾ ಹ್ಲಾದಯೇನ್ಮಾನಸಂ ನಃ ॥ ॥೩೭॥

" ಬ್ರಹ್ಮನ್, ಬ್ರಹ್ಮಣಿ ಅಜಿಹ್ಮಾಂ ಮತಿಂ ಕುರುಷೇ ಅಪಿ?— ಎಲೈ ಬ್ರಹ್ಮದೇವ, ವೇದದಲ್ಲಿಯೂ, ಅದರಲ್ಲಿ ಪ್ರತಿಪಾದ್ಯವಾಗಿರುವ ಪರಬ್ರಹ್ಮ ತತ್ವದಲ್ಲಿಯೂ ಯಥಾರ್ಥವಾದ ತಿಳಿವನ್ನು ಹೊಂದಿರುವಿಯಷ್ಟೆ!; ದೇವ ಶಂಭೋ, ತ್ವಾಂ ಸಂಭಾವಯೇ—ಹೇ ಮಹಾದೇವ, ನಿನಗೆ ಸ್ವಾಗತವು; ಶಕ್ರ, ಅಮರ್ತ್ಯೈಃ ತ್ರಿಲೋಕೀಂ ಅವಸಿ ಕಿಂ?—ಹೇ ಇಂದ್ರ, ದೇವತೆಗಳೊಡನೆ ತ್ರಿಲೋಕವನ್ನೂ ಧರ್ಮದಿಂದ ರಕ್ಷಿಸುತ್ತಿದ್ದೀಯಲ್ಲವೇ?; ನಾರದಾದ್ಯಾಃ, ಸುಖಂ ವಃ?—ನಾರದಾದಿ ದೇವರ್ಷಿಗಳೇ, ನೀವೆಲ್ಲರೂ ಸುಖದಿಂದ್ದೀರಷ್ಟೆ?" — ಸೇವಾ ವನಮ್ರಂ ಸುರಮುನಿನಿಕರಂ—ಸೇವೆಗೆಂದು ಬಂದು ನಮಸ್ಕರಿಸುವ ದೇವತೆಗಳ ಮತ್ತು ಮುನಿಗಳ ಸಮೂಹವನ್ನು; ವೀಕ್ಷ್ಯ—ಅಭಿಮಾನಪೂರ್ವಕವಾಗಿ ನೋಡಿ; ಪ್ರಸನ್ನಸ್ಯ ವಿಷ್ಣೋಃ—ಆನಂದದಿಂದ ಪ್ರಸನ್ನನಾಗಿರುವ ಶ್ರೀ ವಿಷ್ಣುವಿನ; ಆಸ್ಯೇಂದೋಃ ಆಸ್ರವಂತೀ—ಮುಖ ಚಂದ್ರನಿಂದ ಹರಿದು ಬರುತ್ತಿರುವ; ವರವಚನಸುಧಾ—ಉತ್ತಮವಾದ ಮಾತಿನ ಅಮೃತವು; ನಃ ಮಾನಸಂ ಹ್ಲಾದಯೇತ್—ನಮ್ಮ ಮನಸ್ಸನ್ನು ಆನಂದಗೊಳಿಸಲಿ.—೩೭.

ಕಪೋಲ ವರ್ಣನೆ.—

ಕರ್ಣಸ್ಥ ಸ್ವರ್ಣಕಮ್ರೋಜ್ಜ್ವಲಮಕರಮಹಾಕುಂಡಲಪ್ರೋತ ದೀಪ್ಯನ್ಮಾಣಿಕ್ಯ ಶ್ರೀ ಪ್ರತಾನೈಃ ಪರಿಮಿಲಿತಮಲಿಶ್ಯಾಮಲಂ ಕೋಮಲಂ ತತ್ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರೋದ್ಯತ್ಸೂರ್ಯಾಂಶು ರಾಜನ್ಮರಕತಮಕರಾಕಾರಚೋರಂ
ಮುರಾರೇಃ ಗಾಢಾಮಾಗಾಮಿನೀಂ ನೋ ಗಮಯತು ವಿಪದಂ
ಗಂಡಯೋಃ ಮಂಡಲಂ ತತ್ ॥ ॥೩೮॥

ಕರ್ಣಸ್ಥ ಸ್ವರ್ಣ ಕಮ್ರೋಜ್ಜ್ವಲ ಮಕರ ಮಹಾ ಕುಂಡಲ ಪ್ರೋತದೀಪ್ಯನ್ಮಾಣಿಕ್ಯ ಶ್ರೀ ಪ್ರತಾನೈಃ ಪರಿಮಿಲಿತಂ—ಕಿವಿಗಳಲ್ಲಿರುವ ಸುವರ್ಣದಿಂದ ಮಾಡಿದ, ರಮ್ಯವಾಗಿರುವ; ಮೊಸಳೆಯ ಆಕಾರದ, ದೊಡ್ಡ ಕುಂಡಲಗಳಲ್ಲಿ ಮೆಚ್ಚಿರುವ, ಹೊಳೆಯುವ ಮಾಣಿಕ್ಯಗಳ ಕಾಂತಿಗಳ ಹೊರ ಹೊಮ್ಮುವಿಕೆಗಳಿಂದ ಮಿಶ್ರವಾಗಿರುವ; ಅಲಿಶ್ಯಾಮಲಂ—ದುಂಬಿಯಂತೆ ನೀಲ ವರ್ಣದ; ಕೋಮಲಂ—ಮೃದು ಮಧುರವಾಗಿರುವ; ಪ್ರೋದ್ಯತ್ಸೂರ್ಯಾಂಶು ರಾಜನ್ಮರಕತಮಕರಾಕಾರಚೋರಂ—ಉದಯಿಸುತ್ತಿರುವ ಸೂರ್ಯನ ಕಿರಣಗಳಿಂದ ಬೆಳಗುವ ಪಚ್ಚೆಕಲ್ಲಿನ ಮೊಸಳೆಯ ಆಕಾರವನ್ನು ಕದ್ದಿರುವಂತಿರುವ; ಮುರಾರೇಃ ಗಂಡಯೋಃ ಮಂಡಲಂ ತತ್—ಶ್ರೀ ವಿಷ್ಣುವಿನ ಕಪೋಲಗಳೆರಡರ ಆ ಮಂಡಲವು; ನಃ—ನಮ್ಮ; ಆಗಾಮಿನೀಂ ಗಾಢಾಂ ವಿಪದಂ ಗಮಯತು—ಮುಂದಿನ ದೃಢವಾದ ವಿಪತ್ತನ್ನು ಹೋಗಲಾಡಿಸಲಿ.—೩೮.

ನಾಸಿಕಾ ದಂಡದ ಪ್ರಾರ್ಥನೆ—

ವಕ್ತ್ರಾಂಭೋಜೇ ಲಸಂತಂ ಮುಹುರಧರಮಣಿಂ ಪಕ್ವಬಿಂಬಾಭಿ
ರಾಮಂ ದೃಷ್ಟ್ವಾ ದಷ್ಟುಂ ಶುಕಸ್ಯ ಸ್ಫುಟಮವತರತಸ್ತುಂಡ
ದಂಡಾಯತೇ ಯಃ ।
ಘೋಣಃ ಶೋಣೀ ಕೃತಾತ್ಮಾ ಶ್ರವಣಯುಗಲಸತ್ಕುಂಡಲೋಸ್ರೈಃ
ಮುರಾರೇಃ ಪ್ರಾಣಾಖ್ಯಸ್ಯಾನಿಲಸ್ಯ ಪ್ರಸರಣಸರಣಿಃ ಪ್ರಾಣ
ದಾನಾಯ ನಃ ಸ್ಯಾತ್ ॥ ॥೩೯॥

ಪಕ್ವಬಿಂಬಾಭಿರಾಮಂ—ಪಕ್ವವಾಗಿರುವ ತೊಂಡೇ ಹಣ್ಣಿನಂತೆ ಸುಂದರವಾಗಿರುವ; ಅಧರಮಣಿಂ—ತುಟಿರತ್ನವನ್ನು; ದೃಷ್ಟ್ವಾ—ಕಂಡು; ದಷ್ಟುಂ—ಕಚ್ಚಲು; ಅವತರತಃ—ಬರುತ್ತಿರುವ

Sri Vidyabharathi Book Centre, Sringeri

CC-O. In Public Domain. Digitized by eGangotri
ಶುಕಸ್ಯ—ಗಿಳಿಯ; ಸ್ಫುಟಂ ತುಂಡದಂಡಾಯತೇ ಯಃ—ಕೊಕ್ಕಿನಂತೆ ಸ್ಪಷ್ಟವಾಗಿ ಯಾವುದು ಬೆಳಗುತ್ತಿದೆಯೋ; ಶ್ರವಣಯುಗಲಸತ್ಕುಂಡಲೋಸ್ರೈಃ ಶೋಣೀಕೃತಾತ್ಮಾ--ಎರಡು ಕಿವಿಗಳಲ್ಲಿಯೂ ಶೋಭಿಸುವ ಕುಂಡಲಗಳ ಕಾಂತಿಗಳಿಂದ ಕೆಂಪಾಗಿರುವ; ಪ್ರಾಣಾಖ್ಯಸ್ಯ ಅನಿಲಸ್ಯ ಪ್ರಸರಣ ಸರಣಿಃ--ಪ್ರಾಣವಾಯುವಿನ ಸಂಚಾರದ ಮಾರ್ಗವಾಗಿರುವ; ಮುರಾರೇಃ ಘೋಣಃ--ಶ್ರೀ ವಿಷ್ಣುವಿನ ನಾಸಿಕಾ ದಂಡವು; ನಃ ಪ್ರಾಣದಾನಾಯ ಸ್ಯಾತ್—ನಮಗೆ ಚಿರ ಸುಖ ಜೀವನಕ್ಕೆ ಕಾರಣವಾಗಲಿ.--೩೯.

ನೇತ್ರಯುಗಲ ಪ್ರಾರ್ಥನೆ--

ದಿಕ್ಕಾಲೌ ವೇದಯಂತೌ ಜಗತಿ ಮುಹುರಿಮೌ ಸಂಚರಂತೌ ರವೀಂದೂ ತ್ರೈಲೋಕ್ಯಾಲೋಕದೀಪಾವಭಿದಧತಿ ಯಯೋರೇವ ರೂಪಂ ಮುನೀಂದ್ರಾಃ ।
ಅಸ್ಮಾನಬ್ಜಪ್ರಭೇ ತೇ ಮಧುರತರ ಕೃಪಾನಿರ್ಭರಂ ಪ್ರೇಕ್ಷಮಾಣೇ ಪಾತಾಮಾತಾಮ್ರಶುಕ್ಲಾಸಿತರುಚಿರುಚಿರೇ ಪದ್ಮನೇತ್ರಸ್ಯ ನೇತ್ರೇ ॥
॥೪೦॥

ದಿಕ್ಕಾಲೌ ವೇದಯಂತೌ--ಪೂರ್ವ ಪಶ್ಚಿಮಾದಿ ದಿಕ್ಕುಗಳನ್ನೂ, ಹಗಲು ರಾತ್ರಿ ಮೊದಲಾದ ಕಾಲಗಳನ್ನೂ ಲೋಕಕ್ಕೆ ತಿಳಿಸುತ್ತ; ಜಗತಿ--ಲೋಕದಲ್ಲಿ; ಮುಹುಃ ಸಂಚರಂತೌ--ಮತ್ತೆ ಮತ್ತೆ ವಿರಾಮವಿಲ್ಲದೆ ಸಂಚರಿಸುತ್ತಿರುವ; ತ್ರೈಲೋಕ್ಯಾಲೋಕದೀಪೌ—ಮೂರು ಲೋಕಗಳನ್ನೂ ಬೆಳಗಿಸುವ ದೀಪಗಳಾಗಿರುವ; ಇಮೌ ರವೀಂದೂ--ಈ ಸೂರ್ಯ ಚಂದ್ರರನ್ನು; ಯಯೋಃ ಏವ ರೂಪಂ—ಯಾವ ಶ್ರೀ ವಿಷ್ಣುವಿನ ನೇತ್ರಗಳದ್ದೇ ರೂಪವೆಂದು; ಮುನೀಂದ್ರಾಃ ಅಭಿದಧತಿ—ತತ್ವವನ್ನು ಬಲ್ಲ ಮುನಿಶ್ರೇಷ್ಠರು ಹೇಳುತ್ತಾರೋ; ಅಬ್ಜಪ್ರಭೇ—ಕಮಲದ ಶೋಭೆಯನ್ನುಳ್ಳ; ಪ್ರಚುರತರ ಕೃಪಾನಿರ್ಭರಂ ಪ್ರೇಕ್ಷಮಾಣೇ—ಅತಿಶಯವಾದ ದಯೆಯಿಂದ ಎಲ್ಲರನ್ನೂ ನೋಡುವ; ಆ ತಾಮ್ರ ಶುಕ್ಲಾಸಿತರುಚಿರುಚಿರೇ—ಸ್ವಲ್ಪ ಸ್ವಲ್ಪ ಕೆಂಪು, ಬಿಳುಪು ಮತ್ತು ಕಪ್ಪು ಬಣ್ಣಗಳಿಂದ ಸುಂದರ
Sri Vidyabharathi Book Centre, Sringeri

CC-O. In Public Domain. Digitized by eGangotri

ಗಳಾಗಿರುವ; ಪದ್ಮನೇತ್ರಸ್ಯತೇ ನೇತ್ರೇ—ಪುಂಡರೀಕಾಕ್ಷನಾದ ಶ್ರೀ ಮಹಾ ವಿಷ್ಣುವಿನ ಆ ಎರಡು ಕಣ್ಣುಗಳು; ಪಾತಾಂ—ನಮ್ಮನ್ನು ಕಾಪಾಡಲಿ. —೪೦.

. ಹುಬ್ಬುಗಳ ವರ್ಣನೆ—

ಲಕ್ಷ್ಮ್ಯಾಕಾರಾಲಕಾಲಿಸ್ಫುರದಲಿಕಶಶಾಂಕಾರ್ಧ ಸಂದರ್ಶವಿಾಲನ್ನೇ-
ತ್ರಾಂಭೋಜ ಪ್ರಬೋಧೋತ್ಸುಕ ನಿಭೃತತರಾಲೀನ ಭೃಂಗಚ್ಛ-
ದಾಭೇ ।
ಲಕ್ಷ್ಮೀನಾಥಸ್ಯ ಲಕ್ಷ್ಮೀಕೃತ ವಿಬುಧಗಣಾಪಾಂಗಬಾಣಾಸನಾರ್ಧ-
ಚ್ಛಾಯೇ ನೋ ಭೂತಿ ಭೂರಿ ಪ್ರಸವ ಕುಶಲತೇ ಭ್ರೂಲತೇ
ಪಾಲಯೇತಾಂ ॥ ॥೪೧॥

ಲಕ್ಷ್ಮ್ಯಾಕಾರಾಲಕಾಲಿಸ್ಫುರದಲಿಕ ಶಶಾಂಕಾರ್ಧ ಸಂದರ್ಶ ವಿಾಲನ್ನೇತ್ರಾಂಭೋಜ ಪ್ರಬೋಧೋತ್ಸುಕನಿಭೃತತರಾಲೀನ ಭೃಂಗ ಚ್ಛದಾಭೇ—ಚಿತ್ರಿತವಾಗಿರುವ ಮುಂಗುರುಳುಗಳ ಸಮೂಹದಿಂದ ಶೋಭಿಸುವ ಹಣೆಯ ಅರ್ಧಚಂದ್ರನ ಸಂದರ್ಶನದಿಂದ ಬಾಡಿ ಮೊಗ್ಗಾಗುವ ನೇತ್ರ ಕಮಲವನ್ನು ಎಚ್ಚರಗೊಳಿಸಿ ಅರಳಿಸುವುದಕ್ಕಾಗಿ ಹೆಚ್ಚು ಉದ್ಯುಕ್ತವಾಗಿರುವ ದುಂಬಿಯ ರೆಕ್ಕೆಯ ಶೋಭೆಯನ್ನು ಧರಿಸಿರುವ; **ಲಕ್ಷ್ಮೀಕೃತ ವಿಬುಧ ಗಣಾ ಪಾಂಗ ಬಾಣಾಸನಾರ್ಧಚ್ಛಾಯೇ**—ದೃಷ್ಟಿಗೆ ಗೋಚರವಾಗಿರುವ ದೇವತಾಗಣಗಳ ಮೇಲೆ ಕಟಾಕ್ಷಗಳ ಬಾಣಗಳನ್ನು ಎಸೆಯುವುದಕ್ಕಾಗಿ ಅರ್ಧ ಬಾಗಿರುವ ಬಿಲ್ಲಿಗೆ ಸಮಾನವಾಗಿ ಮೆರೆಯುವ; **ಲಕ್ಷ್ಮೀನಾಥಸ್ಯ**—ವಿಷ್ಣುವಿನ; **ಭೂತಿಭೂರಿ ಪ್ರಸವ ಕುಶಲತೇ**—ಐಶ್ವರ್ಯವನ್ನು ಅಪಾರ ವಾಗಿ ಉಂಟುಮಾಡುವುದರಲ್ಲಿ ಸಮರ್ಥಗಳಾದ; **ಭ್ರೂಲತೇ**—ಬಳ್ಳಿಯಂತೆ ಮನೋಹರವಾಗಿರುವ ಹುಬ್ಬುಗಳೆರಡೂ; **ನಃ ಪಾಲಯೇತಾಂ**—ನಮ್ಮನ್ನು ರಕ್ಷಿಸಲಿ.—೪೧.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ವಿಷ್ಣುವಿನ ಹುಬ್ಬನ್ನೇ ಮತ್ತೇ ವರ್ಣಿಸುತ್ತಾರೆ.—

ಪಾತಾತ್ಪಾತಾಲ ಪಾತಾತ್ಪತಗ ಪತಿಗತೇರ್ಭ್ರೂಯುಗಂ ಭಗ್ನಮಧ್ಯಂ
ಯೇನೇಷಚ್ಚಾಲಿತೇನ ಸ್ವಪದನಿಯಮಿತಾಃ ಸಾಸುರಾ ದೇವ
ಸಂಘಾಃ ।
ನೃತ್ಯಲ್ಲಾಲಾಟರಂಗೇ ರಜನಿಕರತನೋರರ್ಧಖಂಡಾವದಾತೇ ಕಾಲ
ವ್ಯಾಲದ್ವಯಂ ವಾ ವಿಲಸತಿ ಸಮಯಾ ಬಾಲಿಕಾಮಾತರಂನಃ ॥
॥೪೨॥

ಪತಗಪತಿಗತೇಃ—ಪಕ್ಷಿರಾಜನಾದ ಗರುಡನನ್ನೇ ವಾಹನವಾಗಿ ಉಳ್ಳ ಶ್ರೀ ವಿಷ್ಣುವಿನ; **ಭಗ್ನಮಧ್ಯಂ**—ಮಧ್ಯದಲ್ಲಿ ಸ್ವಲ್ಪ ವಕ್ರವಾಗಿರುವ; **ಭ್ರೂಯುಗಂ**—ಹುಬ್ಬುಗಳೆರಡು; **ಪಾತಾಲಪಾತಾತ್**—ನರಕಕ್ಕೆ ಬೀಳುವುದರಿಂದ; **ಪಾತು ನಃ**—ನಮ್ಮನ್ನು ರಕ್ಷಿಸಲಿ; **ಈಷಚ್ಚಾಲಿತೇನ ಯೇನ**—ಯಾವುದರ ಸ್ವಲ್ಪ ಚಲನೆ ಮಾತ್ರದಿಂದಲೇ; **ಸಾಸುರಾಃ ದೇವಸಂಘಾಃ**—ದೇವಾಸುರರೆಲ್ಲರೂ; **ಸ್ವಪದ ನಿಯಮಿತಾಃ**—ತಮ್ಮ ತಮ್ಮ ಸ್ಥಳಗಳಲ್ಲಿ ಬದ್ಧರಾಗಿ ನಿಯಮಿತರಾಗುತ್ತಾರೋ; ಅಂಥ ಭ್ರೂಯುಗವು, ಮತ್ತು, **ರಜನಿಕರತನೋಃ**—ಚಂದ್ರನ; **ಅರ್ಧ ಖಂಡಾವದಾತೇ**—ಅರ್ಧ ಭಾಗದಂತೆ ವಿಶಾಲವೂ ನಿರ್ಮಲವೂ ಆಗಿರುವ; **ನೃತ್ಯಲ್ಲಾಲಾಟರಂಗೇ**—ಹಣೆಯು ನಾಟ್ಯ ರಂಗಸ್ಥಳದಲ್ಲಿ; **ಬಾಲಿಕಾಮಾತರಂ ಸಮಯಾ**—ಹುಬ್ಬಿನ ಮೂಲದ ಸಮೀಪದಲ್ಲಿ; **ಕಾಲವ್ಯಾಲದ್ವಯಂ ವಾ ವಿಲಸತಿ**—ಕಾಲಸರ್ಪಗಳ ಜತೆಯಂತೆ ಯಾವುದು ಪ್ರಕಾಶಿಸುವುದೋ—ಅಂಥ ಭ್ರೂಯುಗವು. —೪೨.

ಶ್ರೀ ವಿಷ್ಣುವಿನ ಹಣೆಯಲ್ಲಿ ಶೋಭಿಸುವ ಊರ್ಧ್ವಪುಂಡ್ರವನ್ನು ಸ್ತುತಿಸುತ್ತಾರೆ.—

ರೂಕ್ಷಸ್ಮಾರೇಕ್ಷುಚಾಪಚ್ಯುತಶರನಿಕರಕ್ಷೀಣ ಲಕ್ಷ್ಮೀಕಟಾಕ್ಷಪ್ರೋ-
ತ್ಫುಲ್ಲತ್ಪದ್ಮಮಾಲಾವಿಲಸಿತ ಮಹಿತ ಸ್ಫಾಟಿಕೇಶಾನಲಿಂಗಂ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಭೂಯಾದ್ಭೂಯೋ ವಿಭೂತ್ಯೈ ಮಮ ಭುವನಪತೇರ್ಭ್ರೂಲತಾ ದ್ವಂದ್ವಮಧ್ಯಾತ್ ಉತ್ಥಂ ತತ್ಪುಂಡ್ರಮೂರ್ಧ್ವಂ ಜನಿಮರಣ ತಮಃ ಖಂಡನಂ ಮಂಡನಂ ಚ ॥ ॥೪೩॥

ರೂಕ್ಷಸ್ಮಾರೇಕ್ಷು ಚಾಪಚ್ಯುತ ಶರನಿಕರಕ್ಷೀಣ ಲಕ್ಷ್ಮೀಕಟಾಕ್ಷ ಪ್ರೋತ್ಫುಲ್ಲತ್ಪದ್ಮಮಾಲಾ ವಿಲಸಿತ ಮಹಿತ ಸ್ಫಾಟಿಕೇಶಾನ ಲಿಂಗಂ— ತೀಕ್ಷ್ಣವೂ, ಕ್ರೂರವೂ, ಕಠಿಣವೂ ಆದ ಮನ್ಮಥನ ಬಿಲ್ಲಿನಿಂದ ಹೊಡೆಯಲ್ಪಟ್ಟ ಬಾಣಗಳ ಸುರಿ ಮಳೆಗಳಿಂದ ಕ್ಷೀಣವಾಗಿದ್ದು, ಲಕ್ಷ್ಮೀ ದೇವಿಯ ಕಟಾಕ್ಷಗಳೆಂಬ ಅರಳಿದ ಪದ್ಮಮಾಲೆಗಳಿಂದ ಅಲಂಕೃತವಾದ ಸ್ಫಟಿಕದ ಶಿವ ಲಿಂಗವೋ ಎಂಬಂತೆ ಇರುವ; **ಭುವನಪತೇಃ**— ಜಗದೇಕಾಧಿಪತಿಯಾಗಿರುವ ಶ್ರೀ ವಿಷ್ಣುವಿನ; **ಭ್ರೂಲತಾದ್ವಂದ್ವಮಧ್ಯಾತ್ ಉತ್ಥಂ**— ಬಳ್ಳಿಯಂತಿರುವ ಹುಬ್ಬುಗಳೆರಡರ ಮಧ್ಯದಿಂದ ಎದ್ದಿರುವ; **ಜನಿಮರಣ ತಮಃ ಖಂಡನಂ**— ಜನನ ಮರಣಗಳನ್ನು ಕಳೆಯುವ; **ಮಂಡನಂ**— ಅಲಂಕಾರವಾದ; **ತತ್ ಊರ್ಧ್ವಂ ಪುಂಡ್ರಂ**— ಆ ಊರ್ಧ್ವ ತಿಲಕವು; **ಮಮ**— ನನ್ನ; **ಭೂಯೋ ವಿಭೂತ್ಯೈ ಭೂಯಾತ್**— ಅಧಿಕಾಧಿಕವಾದ ಸಂಪತ್ತಿಗೆ ಕಾರಣವಾಗಲಿ.

ವಿಷ್ಣುವಿನ ಹಣೆಯಲ್ಲಿ ಅಲಂಕಾರವಾಗಿರುವ ತಿಲಕವು ಊರ್ಧ್ವ ಪುಂಡ್ರವೆಂದೂ, ಇದು ಸ್ಫಟಿಕ ಶಿವಲಿಂಗಕ್ಕೆ ಸಮವಾಗಿದೆಯೆಂದು ಇಲ್ಲಿ ವರ್ಣಿಸಿದೆ. ಇದರಿಂದ, ಮೂರು ನಾಮಗಳನ್ನೂ, ಅವುಗಳಲ್ಲಿ ಮಧ್ಯದ್ದನ್ನು ರಕ್ತವರ್ಣದ್ದನ್ನಾಗಿಯೂ ವಿಷ್ಣುವಿಗೆ ಅಲಂಕಾರ ಮಾಡುವುದು ಅಪ್ರಾಮಾಣಿಕವೆಂದು ಸ್ಪಷ್ಟವಾಗುವುದು. ಇದಲ್ಲದೆ, ಈ ಊರ್ಧ್ವಪುಂಡ್ರವನ್ನು ಸ್ಫಟಿಕ ಲಿಂಗಕ್ಕೆ ಹೋಲಿಸಿರುವುದರಿಂದ, ಇದು ಭಸ್ಮಮಯವಾದುದೆಂದೂ ನಿಶ್ಚಿತವಾಗುತ್ತದೆ. ಮತ್ತು, ವಿಷ್ಣುವು ಇಂಥ ಊರ್ಧ್ವಪುಂಡ್ರಧಾರಿಯಾದ ಕಾರಣದಿಂದ ವಿಷ್ಣು ಭಕ್ತರೂ ಈ ವೇಷವನ್ನು ಧರಿಸುವುದು ಅನಾಚಾರವೇ ಸರಿ. ಸ್ಮಾರ್ತರು ಈಶ್ವರನಂತೆ ಭಸ್ಮರುದ್ರಾಕ್ಷಾದಿ ಧಾರಣೆ ಮಾಡುವುದಿಲ್ಲವೆ, ಎಂದು ಕೇಳಬಹುದು; ಶ್ರೀ ಭಗವತ್ಪಾದರೇ, ಇದಕ್ಕೆ ಉತ್ತರ ಹೇಳಿರುವಂತೆ,-- ಭಸ್ಮರುದ್ರಾಕ್ಷಾದಿಗಳ ಧಾರಣೆಯು ಶಾಸ್ತ್ರ ವಿಹಿತವಾದ್ದರಿಂದ ಅನುಷ್ಠೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳಾಗಿವೆಯೇ ಹೊರತು, ಈಶ್ವರನ ಅನುಕರಣೆಯಲ್ಲ ಇದು. ಊರ್ಧ್ವಪುಂಡ್ರಾದಿ ಧಾರಣೆಯು ಅವೈದಿಕ ತಾಂತ್ರಿಕರ ಆಚಾರವೇ ಹೊರತು ವೈದಿಕಾಚಾರವಲ್ಲ ವೆಂದು ತಿಳಿದುಬರುವುದು.--೪೩.

ಶ್ರೀ ವಿಷ್ಣುವಿನ ಹಣೆಯ ವರ್ಣನೆ.--

ಪೀಠೀಭೂತಾಲಕಾಂತೇ ಕೃತಮುಕುಟ ಮಹಾದೇವ ಲಿಂಗ ಪ್ರತಿಷ್ಠೇ ಲಾಲಾಟೇ ನಾಟ್ಯರಂಗೇ ವಿಕಟತರತಟೇ ಕೈಟಭಾರೇಶ್ಚಿರಾಯ ।

ಪ್ರೋದ್ಘಾಟ್ಯೈವಾತ್ಮತಂದ್ರೀ ಪ್ರಕಟ ಪಟಕುಟೀಂ ಪ್ರಸ್ಫುರಂತೀಂ ಸ್ಫುಟಾಂಗಂ ಪಟ್ವೀಯಂ ಭಾವನಾಖ್ಯಾಂ ಚಟುಲ ಮತಿನಟೀ ನಾಟಿಕಾಂ ನಾಟಯೇನ್ನಃ ॥ ॥೪೪॥

ನಃ ಇಯಂ ಚಟುಲಮತಿ ನಟೀ ಪಟ್ವೀ--ಈ ಚತುರಳಾದ ಚಪಲ ಸ್ವಭಾವದ ನಮ್ಮ ಮನಸ್ಸೆಂಬ ನರ್ತಕಿಯು; **ಪೀಠೀ ಭೂತಾಲಕಾಂತೇ**--ಪೀಠದಂತೆ ಇರುವ ಮುಂಗುರುಳುಗಳ ತುದಿಗಳಿಂದ ಅಲಂಕೃತ ವಾಗಿರುವ; **ವಿಕಟತರತಟೇ**--ಅತಿ ವಿಶಾಲವಾದ ಸ್ಥಳವನ್ನುಳ್ಳ; **ಕೃತಿ ಮುಕುಟ ಮಹಾದೇವ ಲಿಂಗ ಪ್ರತಿಷ್ಠೇ**--ಮುಕುಟ ರೂಪವಾದ ಮಹಾ ಲಿಂಗದ ಪ್ರತಿಷ್ಠೆಯನ್ನುಳ್ಳ; **ಕೈಟಭಾರೇಃ ಲಾಲಾಟೇ ನಾಟ್ಯರಂಗೇ**--ಶ್ರೀ ವಿಷ್ಣುವಿನ ಹಣೆಯ ನಾಟ್ಯರಂಗದಲ್ಲಿ; **ಆತ್ಮತಂದ್ರೀ ಪ್ರಕಟಪಟ ಕುಟೀಂ ಪ್ರೋದ್ಘಾಟ್ಯ**--ತನಗೆ ಸಹಜವಾದ ಸತ್ಕಾರ್ಯದಲ್ಲಿನ ಆಲಸ್ಯ ವೆಂಬ ಬಟ್ಟೆಯ ತೆರೆಯನ್ನು ಉದ್ಘಾಟಿಸಿ; **ಸ್ಫುಟಾಂಗಂ ಪ್ರಸ್ಫುರಂತೀ**--ಸ್ಪಷ್ಟವಾಗಿ ತನ್ನ ಅಂಗಗಳ ಹಾವ ಭಾವ ವಿಲಾಸಗಳನ್ನು ಪ್ರಕಟಪಡಿಸುವಂಥ; **ಭಾವನಾಖ್ಯಾಂ ನಾಟಿಕಾಂ ನಾಟಯೇತ್**--ಧ್ಯಾನವೆಂಬ ನಾಟಕೆಯನ್ನು ನಟಿಸಲಿ.--೪೪.

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಂಗುರುಳುಗಳ ಪ್ರಾರ್ಥನೆ.--

ಮಾಲಾಲೀವಾಲಿ ಧಾಮ್ನಃ ಕುವಲಯ ಕಲಿತಾ ಶ್ರೀಪತೇಃ ಕುಂತಲಾಲೀ ಕಾಲಿಂದ್ಯಾರುಹ್ಯ ಮೂರ್ಧ್ನೋ ಗಲತಿ ಹರಶಿರಃ ಸ್ವರ್ಧುನೀ ಸ್ಪರ್ಧಯಾನು ।
ರಾಹುರ್ವಾ ಯಾತಿ ವಕ್ತ್ರಂ ಸಕಲ ಶಶಿಕಲಾ ಭ್ರಾಂತಿಲೋಲಾಂತರಾತ್ಮಾ ಲೋಕೈರಾಲೋಚ್ಯತೇ ಯಾ ಪ್ರದಿಶತು ಸಕಲೈಃ ಸಾಖಿಲಂ ಮಂಗಲಂ ನಃ ॥ ॥೪೫॥

ಆಲಿಧಾಮ್ನಃ—ದುಂಬಿಯಂತೆ ನೀಲವರ್ಣದ ತೇಜಸ್ಸಿನಿಂದ ಬೆಳಗುವ ; **ಶ್ರೀಪತೇಃ ಕುಂತಲಾಲೀ**—ಶ್ರೀ ವಿಷ್ಣುವಿನ ಮುಂಗುರುಳುಗಳ ಸಾಲು ; **ಕುವಲಯ ಕಲಿತಾ ಮಾಲಾಲೀ ಇವ**—ಕನ್ನೈದಿಲೆಯಿಂದ ರಚಿತವಾದ ಮಾಲೆಯ ಸಾಲು—ಎಂದೋ ; **ಹರಶಿರಃ ಸ್ವರ್ಧುನೀ ಸ್ಪರ್ಧಯಾ ಕಾಲಿಂದೀ ಅರುಹ್ಯ ಮೂರ್ಧ್ನಃ ಗಲತಿ ನು ?**—ಪರಶಿವನ ಶಿರಸ್ಸಿನಿಂದ ಧುಮುಕುತ್ತಿರುವ ಗಂಗೆಯ ಮೇಲಿನ ಸ್ಪರ್ಧೆಯಿಂದ, ಕಾಳಿಂದಿ (ಯಮುನೆ)ಯು ವಿಷ್ಣುವಿನ ಶಿರಸ್ಸನ್ನು ಹತ್ತಿ ಅಲ್ಲಿಂದ ಹರಿಯುತ್ತಿದ್ದಾಳೋ—ಎಂದೋ ; **ಸಕಲ ಶಶಿಕಲಾ ಭ್ರಾಂತಿಲೋಲಾಂತರಾತ್ಮಾ ರಾಹುಃ ವಕ್ತ್ರಂ ಯಾತಿ ವಾ**—ಪೂರ್ಣ ಚಂದ್ರನೆಂದು ಭ್ರಾಂತಿಗೊಂಡು ರಾಹುವು ವಿಷ್ಣುವಿನ ಮುಖವನ್ನು ಕಬಳಿಸಲು ಬರುತ್ತಿದ್ದಾನೋ—ಎಂದೋ ; **ಸಕಲೈಃ ಲೋಕೈಃ ಯಾ ಆಲೋಚ್ಯತೇ**—ಎಲ್ಲ ಜನರೂ ಯಾವುದನ್ನು ಕಂಡು ಈ ಪ್ರಕಾರಗಳಿಂದ ಚಿಂತಿಸುತ್ತಾರೋ ; **ಸಾ**—ಆ ಮುಂಗುರುಳುಗಳ ಸಾಲು ; **ಅಖಿಲಂ ಮಂಗಳಂ ನಃ ಪ್ರದಿಶತು**—ಪೂರ್ಣವಾಗಿ ಮಂಗಳವನ್ನು ಅನುಗ್ರಹಿಸಲಿ.—೪೫.

ಕೇಶಪಾಶ ವರ್ಣನೆ.—

ಸುಪ್ತಾಕಾರಾಃ ಪ್ರಸುಪ್ತೇ ಭಗವತಿ ವಿಬುಧೈರಪ್ಯದೃಷ್ಟ ಸ್ವರೂಪಾ ವ್ಯಾಪ್ತವ್ಯೋಮಾಂತರಾಳಾಸ್ತರಳರುಚಿ ಜಲಾರಂಜಿತಾಃ ಸ್ಪಷ್ಟ ಭಾಸಃ ।

Sri Vidyabharathi Book Centre, Sringeri

CC-O. In Public Domain. Digitized by eGangotri

ದೇಹಚ್ಛಾಯೋದ್ಗಮಾಭಾ ರಿಪುವಪುರಗುರು ಪ್ಲೋಷರೋಷಾಗ್ನಿ
ಧೂಮ್ಯಾಃ ಕೇಶಾಃ ಕೇಶಿದ್ವಿಷೋ ನೋ ವಿದಧತು ವಿಪುಲ ಕ್ಲೇಶ
ಪಾಶ ಪ್ರಣಾಶಂ ॥ ॥೪೬॥

ಭಗವತಿ ಪ್ರಸುಪ್ತೇ ಸುಪ್ತಾಕಾರಾಃ—ಶ್ರೀ ವಿಷ್ಣುವು ತಾಮಸ ಮಾಯಾ ಪ್ರಕೃತಿಗೆ ಅಧೀನನಾಗಿ ನಿದ್ರಿಸುವಾಗ, ಅವನಂತೆ ಆಕಾರವುಳ್ಳ— ಎಂದರೆ ತಮೋಮಯವಾಗಿ ನೀಲ ವರ್ಣವಾಗಿರುವ; ಆದ್ದರಿಂದ ವಿಬುಧೈಃ ಅಪಿ ಅದೃಷ್ಟ ಸ್ವರೂಪಾಃ—ಜ್ಞಾನಿಗಳಿಗೂ ದೇವಾದಿಗಳಿಗೂ ತಿಳಿದು ಬರದ ಸ್ವರೂಪಗಳ; ವ್ಯಾಪ್ತವ್ಯೋಮಾಂತರಾಳಾಃ—ಅಂತರಿಕ್ಷವನ್ನೆಲ್ಲಾ ವ್ಯಾಪಿಸಿಕೊಂಡಿರುವ; ತರಳರುಚಿ ಜಲಾರಂಜಿತಾಃ—ಕ್ಷೀರ ಸಮುದ್ರದ ಚಲಿಸುತ್ತಿರುವ ತುಂತುರು ಹನಿಗಳಿಂದ ಅಲಂಕೃತಗಳಾಗಿ; ಸ್ಪಷ್ಟಭಾಸಃ— ಸ್ಪಷ್ಟವಾಗಿ ಪ್ರಕಾಶಿಸುತ್ತಿರುವ; ದೇಹಚ್ಛಾಯೋದ್ಗಮಾಭಾಃ—ವಿಷ್ಣು ವಿನ ದೇಹದ ನೀಲವಾದ ಕಾಂತಿಯೇ ಹೊರ ಹೊಮ್ಮಿದೆಯೋ—ಎಂಬಂತೆ ಇರುವ; ರಿಪುವಪುರಗುರುಪ್ಲೋಷರೋಷಾಗ್ನಿಧೂಮ್ಯಾಃ — ಧರ್ಮ ಶತ್ರುಗಳಾದ ದಾನವರ ಶರೀರಗಳೆಂಬ ಅಗುರುಗಳನ್ನು ದಹಿಸುವ ರೋಷಾ ಗ್ನಿಯ ಧೂಮಗಳೋ—ಎಂಬಂತೆ ತೋರುವ; ಕೇಶಿದ್ವಿಷಃ ಕೇಶಾಃ— ಶ್ರೀ ವಿಷ್ಣುವಿನ ಕೇಶಸಮೂಹಗಳು; ನಃ ವಿಪುಲಕ್ಲೇಶಪಾಶ ಪ್ರಣಾಶಂ ವಿದಧತು—ನಮ್ಮ ಅತಿಶಯವಾದ ಕ್ಲೇಶಗಳ ಪಾಶಗಳ ಪೂರ್ಣ ನಾಶವನ್ನು ಉಂಟುಮಾಡಲಿ.—೪೬.

ಶ್ರೀ ವಿಷ್ಣುವಿನ ಕಿರೀಟದ ವರ್ಣನೆ.—

ಯತ್ರ ಪ್ರತ್ಯುಪ್ತರತ್ನ ಪ್ರವರ ಪರಿಲಸದ್ಭೂರಿ ರೋಚಿಃ ಪ್ರತಾನ-
ಸ್ಫೂರ್ತ್ಯಾ ಮೂರ್ತಿ ರ್ಮುರಾರೇರ್ದ್ಯುಮಣಿ ಶತಚಿತ ವ್ಯೋಮ
ವದ್ದುರ್ನಿರೀಕ್ಷ್ಯಾ ।
ಕುರ್ವತ್ಪಾರೇ ಪಯೋಧಿ ಜ್ವಲದಕೃತಮಹಾಭಾಸ್ವ ದೌರ್ವಾಗ್ನಿ
ಶಂಕಾಂ ಶಶ್ವನ್ನಃ ಶರ್ಮ ದಿಶ್ಯಾತ್ಕಲಿಕಲುಷತಮಃ ಪಾಟನಂ
ತತ್ಕಿರೀಟಂ ॥ ।೪೭॥

Sri Vidyabharathi Book Centre, Sringeri

CC-O. In Public Domain. Digitized by eGangotri

ಯತ್ರ--ಯಾವ ಕಿರೀಟದಲ್ಲಿ; **ಪ್ರತ್ಯುಪ್ತರತ್ನ ಪ್ರವರ ಪರಿಲಸದ್ಭೂರಿ ರೋಚಿಃ ಪ್ರತಾನಸ್ಫುರತ್ಯಾ**—ಖಚಿತಗಳಾಗಿರುವ ರತ್ನಶ್ರೇಷ್ಠಗಳ, ಸುತ್ತಲೂ ಹರಡುವ ಕಾಂತಿಗಳ ವಿಸ್ತಾರಗಳ ಪ್ರಕಾಶಗಳಿಂದ; **ಮುರಾರೇಃ ಮೂರ್ತಿಃ**—ಶ್ರೀ ವಿಷ್ಣುವಿನ ದೇಹವು; **ದ್ಯುಮಣಿ ಶತಚಿತವ್ಯೋಮವತ್ ದುರ್ನಿರೀಕ್ಷ್ಯಾ**—ನೂರಾರು ಸೂರ್ಯರುಗಳಿಂದ ವ್ಯಾಪ್ತವಾದ ಆಕಾಶದಂತೆ ನೋಡುವುದಕ್ಕೆ ಅಶಕ್ಯವಾಗಿರುವುದೋ; **ಪಾರೇ ಪಯೋಧಿ**—ಸಮುದ್ರದ ಮಧ್ಯದಲ್ಲಿ; **ಜ್ವಲದಕೃತ ಮಹಾಭಾಸ್ವ ದೌರ್ವಾಗ್ನಿ ಶಂಕಾಂ ಕುರ್ವತ್**—ಜ್ವಲಿಸುತ್ತಿರುವ ಅಕೃತ್ರಿಮವಾದ ಅತಿಶಯ ಪ್ರಕಾಶದ ಬಡಬಾಗ್ನಿಯೋ--ಎಂಬ ಸಂದೇಹವನ್ನು ಉಂಟುಮಾಡುತ್ತಿರುವ; **ತತ್ಕಿರೀಟಂ**—ಶ್ರೀ ವಿಷ್ಣುವಿನ ಶಿರೋಭೂಷಣವಾಗಿರುವ ಆ ಕಿರೀಟವು; **ಕಲಿಕಲುಷತಮಃ ಪಾಟನಂ**—ಕಲಿದೋಷದ ಅಜ್ಞಾನಾಂಧಕಾರವನ್ನು ನಾಶಮಾಡತಕ್ಕದ್ದಾಗಿ; **ನಃ**—ನಮಗೆ; **ಶಶ್ವತ್ ಶರ್ಮದಿಶ್ಯಾತ್**—ನಿರಂತರವೂ ಸುಖವನ್ನು ಕೊಡಲಿ.--೪೭.

ಶ್ರೀ ವಿಷ್ಣುವಿನ ದೇಹದ ಸ್ತುತಿ.—

ಭ್ರಾಂತ್ವಾ ಭ್ರಾಂತ್ವಾ ಯದಂತ ಸ್ತ್ರಿಭುವನ ಗುರುರಪ್ಯಬ್ದಕೋಟೀ
ರನೇಕಾಃ ಗಂತುಂ ನಾಂತಂ ಸಮರ್ಥೋ ಭ್ರಮರ ಇವ ಪುನ
ರ್ನಾಭಿ ನಾಲೀಕನಾಲಾತ್ ।
ಉನ್ಮಜ್ಜನ್ನೂರ್ಜಿತ ಶ್ರೀ ಸ್ತ್ರಿಭುವನಮಪರಂ ನಿರ್ಮಮೇ ತತ್ಸದೃಕ್ಷಂ
ದೇಹಾಂಭೋಧಿಃ ಸ ದೇಯಾನ್ನಿರವಧಿರಮೃತಂ ದೈತ್ಯ
ವಿದ್ವೇಷಿಣೋ ನಃ ॥ ॥೪೮॥

ತ್ರಿಭುವನಗುರುಃ ಅಪಿ—ಲೋಕತ್ರಯಗಳಿಗೂ ಪಿತಾಮಹನಾದ ಬ್ರಹ್ಮದೇವನೂ ಸಹ; **ಅನೇಕಾಃ ಅಬ್ದಕೋಟೀಃ**—ಅನೇಕ ಕೋಟಿ ವರ್ಷಗಳ ಕಾಲ; **ಭ್ರಾಂತ್ವಾ ಭ್ರಾಂತ್ವಾ**—ಅಲೆದಲೆದೂ; **ಅಂತಂ ಗಂತುಂ ನ ಸಮರ್ಥಃ**—ಕೊನೆಯನ್ನು ಕಾಣಲು ಶಕ್ತನಾಗದೆ; **ಭ್ರಮರಃ ಇವ**—ದುಂಬಿಯಂತೆ; **ನಾಭಿನಾಲೀಕನಾಲಾತ್ ಪುನಃ ಉನ್ಮಜ್ಜನ್**—ನಾಭಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಮಲದ ನಾಳದ ಮೂಲಕ ಮತ್ತೆ ಹೊರಬಂದು; ಕಲ್ಪವೃಕ್ಷಂ—ಅಲ್ಲಿ ತಾನು ಕುಡಮುಡಕ್ಕೆ ಸಮವಾದ; ಅಪರಂ ತ್ರಿಭುವನಂ ನಿರ್ಮಮೇ—ಮತ್ತೊಂದು ತ್ರಿಲೋಕವನ್ನು ರಚಿಸಿದನೋ; ದೈತ್ಯವಿದ್ವೇಷಿಣಃ ಸಃ ನಿರವಧಿಃ ದೇಹಾಂಭೋಧಿಃ—ದಾನವ ವೈರಿಯಾದ ಶ್ರೀ ಮಹಾ ವಿಷ್ಣುವಿನ ಅಪಾರವೂ ಅಗಾಧವೂ ಆಗಿ ಸಮುದ್ರ ಸದೃಶವಾದ ಆ ದೇಹವು; ನಃ—ನಮಗೆ; ಅಮೃತಂ ದೇಯಾತ್—ಧ್ಯಾನ ಮಂಥನದಿಂದ ಮಥನ ಮಾಡಲ್ಪಟ್ಟದ್ದಾಗಿ ಮೋಕ್ಷವೆಂಬ ಅಮೃತವನ್ನು ಅನುಗ್ರಹಿಸಲಿ.—೪೮.

ಶ್ರೀ ಮಹಾ ವಿಷ್ಣುವಿನ ಅವತಾರ ವಿಶೇಷಗಳು —

ಮತ್ಸ್ಯಃ ಕೂರ್ಮೋ ವರಾಹೋ ನರಹರಿಣಪತಿರ್ವಾಮನೋ ಜಾಮದಗ್ನ್ಯಃ ಕಾಕುತ್ಸ್ಥಃ ಕಂಸಘಾತೀ ಮನಸಿಜವಿಜಯೀ ಯಶ್ಚ ಕಲ್ಕೀ ಭವಿಷ್ಯನ್ ।

ವಿಷ್ಣೋರಂಶಾವತಾರಾಃ ಭುವನಹಿತಕರಾ ಧರ್ಮಸಂಸ್ಥಾಪನಾರ್ಥಾಃ ಪಾಯಾಸುರ್ಮಾಂ ತ ಏತೇ ಗುರುತರ ಕರುಣಾಭಾರ ಖಿನ್ನಾಶಯಾ ಯೇ ॥ ॥೪೯॥

ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಶ್ರೀಕೃಷ್ಣ, ಬುದ್ಧ, ಕಲ್ಕೀ—ಈ ರೂಪಗಳನ್ನು ಧರಿಸಿದ; **ವಿಷ್ಣೋಃ**—ಶ್ರೀ ಮಹಾವಿಷ್ಣುವಿನ; **ಧರ್ಮ ಸಂಸ್ಥಾಪನಾರ್ಥಾಃ**—ವೈದಿಕ ವರ್ಣಾಶ್ರಮ ಧರ್ಮವನ್ನು ಸ್ಥಾಪಿಸುವುದಕ್ಕಾಗಿ ಆಗುವ; ಆದ್ದರಿಂದಲೇ **ಭುವನ ಹಿತಕರಾಃ**—ಸಕಲ ಲೋಕಕ್ಕೂ ವಸ್ತುತಃ ಹಿತವನ್ನು ಉಂಟುಮಾಡುವಂಥ; **ಗುರುತರಕರುಣಾಭಾರ ಖಿನ್ನಾಶಯಾಃ**—ಅತ್ಯಧಿಕವಾದ ದಯೆಯ ಭಾರದಿಂದ ಖೇದವನ್ನು ಹೊಂದಿರುವ ಅಭಿಪ್ರಾಯವುಳ್ಳ; **ಯೇ ಅಂಶಾವತಾರಾಃ**—ಯಾವ ಅಂಶಾವತಾರಗಳು ಇವೆಯೋ; **ತೇ ಏತೇ**—ಆ ಇವುಗಳು; **ಮಾಂ ಪಾಯಾಸುಃ** — ನನ್ನನ್ನು ಅಧರ್ಮದ ಭಯದಿಂದ ರಕ್ಷಿಸಲಿ.—೪೯.

Sri Vidyabharathi Book Centre, Sringeri

CC-O. In Public Domain. Digitized by eGangotri

'ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ'—ಎಂಬ ಶ್ರೀ ಭಗವಂತನ ಭರವಸೆಯಂತೆ, ಜಗದ್ರಕ್ಷಣೆಯಲ್ಲಿ ಅಧಿಕೃತನಾಗಿರುವ ಶ್ರೀ ಮಹಾ ವಿಷ್ಣುವಿನ ಈ ಹಲವಾರು ಅವತಾರಗಳು ವೈದಿಕ ವರ್ಣಾಶ್ರಮ ಧರ್ಮದ ರಕ್ಷಣೆಗೇ ಆಗಿವೆ. ಇದರಿಂದಲೇ ಜಗದ್ರಕ್ಷಣೆಯೂ ಆಗುತ್ತವೆ. ಶ್ರೀ ಭಗವಂತನಿಗೆ ಇದೇ ಮುಖ್ಯವಾಗಿ ಇಷ್ಟವಾದುದು. ನಿತ್ಯ ತೃಪ್ತನಾಗಿರುವ ಶ್ರೀ ಭಗವಂತನ ಅನುಗ್ರಹಕ್ಕೆ ವೈದಿಕ ಸ್ವವರ್ಣಾಶ್ರಮ ಧರ್ಮವನ್ನು ಪಾಲಿಸಿಕೊಂಡು ಬರುವುದೊಂದೇ ಉಪಾಯವು. ಆದ್ದರಿಂದ ಸರ್ವರೂ ತಮ್ಮ ತಮ್ಮ ವರ್ಣಾಶ್ರಮದಲ್ಲಿ ನಿರತರಾಗಿದ್ದು ಭಗವದನುಗ್ರಹಕ್ಕೆ ಪಾತ್ರರಾಗಿ, ಇಹಪರಗಳ ಶ್ರೇಯೋಭ್ಯುದಯಗಳಿಗೆ ಪಾತ್ರರಾಗತಕ್ಕದ್ದೆಂದು ತಾತ್ಪರ್ಯವು.

ಈ ಅವತಾರಗಳೆಲ್ಲ ಶ್ರೀ ಭಗವಂತನ ಅಂಶಾವತಾರಗಳು. ಇವುಗಳಲ್ಲಿ ಶ್ರೀ ರಾಮ ಅಥವಾ ಶ್ರೀ ಕೃಷ್ಣಾವತಾರಗಳನ್ನು ಪೂರ್ಣಾವತಾರವೆಂದು ಕೆಲವರು ಹೇಳುವುದು ಅವರ ಕೇವಲ ಭಕ್ತಿಯ ಭರವೆಂದು ಕಂಡುಬರುವುದು.

ದಯಾ ಭಾರದಿಂದ ಖಿನ್ನವಾಗಿರುವುದೆಂದು ಹೇಳುವುದರಿಂದ, ಇಷ್ಟು ಸ್ಪಷ್ಟವಾಗಿ ಶಾಸ್ತ್ರಯುಕ್ತಿವಿದ್ವದನುಭವ ಸಿದ್ಧವಾಗಿ ಶ್ರೇಯಸ್ಕರವೆಂದು ಸಿದ್ಧವಾಗಿರುವ ವೈದಿಕ ವರ್ಣಾಶ್ರಮ ಸ್ವಧರ್ಮದಲ್ಲಿ ಜನಗಳಿಗೆ ಶ್ರದ್ಧೆಯಿಲ್ಲವಲ್ಲ ಎಂದು ಶ್ರೀ ಭಗವಂತನೂ ಇವರುಗಳ ದೌರ್ಭಾಗ್ಯಕ್ಕೆ ಮರುಗುತ್ತಿರುವನೆಂದು ಸೂಚಿತವಾಗುವುದು. ಧರ್ಮ ಶ್ರದ್ಧಾರಹಿತರು ಈ ರೀತಿಯಲ್ಲಿ ಶ್ರೀ ಭಗವಂತನಿಗೇ ದುಃಖವನ್ನು ಉಂಟು ಮಾಡುತ್ತ ಮಹಾ ಪಾಪಿಗಳಾಗಿರುತ್ತಾರೆ.

ಕರ್ಶಯಂತಃ ಶರೀರಸ್ಥಂ ಭೂತ ಗ್ರಾಮಮಚೇತಸಃ ।
ಮಾಂ ಚೈವಾಂತಃ ಶರೀರಸ್ಥಂ ತಾನ್ವಿದ್ಧ್ಯಾಸುರ ನಿಶ್ಚಯಾನ್ ॥
(೧೭-೬)

—ಎಂಬ ಶ್ರೀ ಭಗವದ್ಗೀತೆಯ ವ್ಯಾಖ್ಯಾನದಲ್ಲಿ ಪರಮಾತ್ಮನ ದರ್ಶನವೆಂದರೆ, ಅವನು ವೇದಶಾಸ್ತ್ರದ ಮೂಲಕವಾಗಿ ಉಪದೇಶಿಸಿರುವ, ಜಗತ್ಕ್ಷೇಮಕರವಾಗಿ ಹಿತಕರವಾಗಿರುವ ವರ್ಣಾಶ್ರಮಸ್ವಧರ್ಮದ ಅನುಸರಣೆಯೆಂದು ಶ್ರೀ ಭಗವತ್ಪಾದರು ವಿವರಿಸುತ್ತಾರೆ.—೪೯.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಸ್ಮಾದ್ವಾಚೋ ನಿವೃತ್ತಾಃ ಸಮಮಪಿ ಮನಸಾ ಲಕ್ಷಣಾಮೀಕ್ಷ
ಮಾಣಾಃ ಸ್ವಾರ್ಥಾಲಾಭಾತ್ಪರಾರ್ಥವ್ಯಪಗಮ ಕಥನ ಶ್ಲಾಘಿನೋ
ವೇದವಾದಾಃ ।

ನಿತ್ಯಾನಂದಂ ಸ್ವಸಂವಿನ್ನಿರವಧಿಮಮೃತಂ ಸ್ವಾಂತ ಸಂಕ್ರಾಂತ ಬಿಂಬ-
ಚ್ಛಾಯಾಪತ್ಯಾಪಿ ನಿತ್ಯಂ ಸುಖಯತಿ ಯಮಿನೋ ಯತ್ತ-
ದವ್ಯಾನ್ಮಹೋ ನಃ ॥ ॥೫೦॥

ಯಸ್ಮಾತ್—ಶ್ರೀ ಮಹಾ ವಿಷ್ಣುವಿನ ಪಾರಮಾರ್ಥಿಕ ತತ್ವ ಸ್ವರೂಪ ದಿಂದ ; ಲಕ್ಷಣಾಂ ಈಕ್ಷಮಾಣಾಃ—ಲಕ್ಷಣಾ ವೃತ್ತಿಯನ್ನು ನಿರೀಕ್ಷಿಸುತ್ತ ; **ವಾಚಃ ಮನಸಾ ಸಮಂ ಅಪಿ**—ಮಾತುಗಳು ಮನಸ್ಸಿನ ಒಡನೆಯೇ ; **ನಿವೃತ್ತಾಃ**—ಆ ಸ್ವರೂಪವನ್ನು ನಿಲುಕಲಾರದೆ ಹಿಂತಿರುಗುವುವೋ ; **ವೇದ ವಾದಾಃ**—ವೇದದ ವಚನಗಳೂ ; **ಸ್ವಾರ್ಥಾಲಾಭಾತ್**—ತಮ್ಮ ಶಬ್ದಗಳಿಗೆ ಮುಖ್ಯವಾದ ಅರ್ಥವನ್ನು ಹೊಂದಲಾರದೆ ಹೋಗಿ ; **ಪರಾರ್ಥವ್ಯಪಗಮ ಕಥನ ಶ್ಲಾಘಿನಃ**—ಇತರ ವಿರುದ್ಧಾರ್ಥಗಳು ಇಲ್ಲವೆಂದು ಹೇಳುವ ಶ್ಲಾಘನೆ ಯನ್ನೇ ಉಳ್ಳವುಗಳಾಗಿವೆಯೋ ; **ನಿತ್ಯಾನಂದಂ**—ಶಾಶ್ವತವಾದ ಆನಂದ ಸ್ವರೂಪವೂ ; **ಸ್ವಸಂವಿತ್**—ಸ್ವಪ್ರಕಾಶವೂ ; **ನಿರವಧಿಂ**—ಅಪಾರವೂ ನಿರತಿಶಯವೂ ; **ಅಮೃತಂ**—ಅಮೃತ ಸ್ವರೂಪವೂ, ಆಗಿದ್ದು ; **ಸ್ವಾಂತ ಸಂಕ್ರಾಂತ ಬಿಂಬಚ್ಛಾಯಾಪತ್ಯಾ ಅಪಿ**—ಅಂತಃಕರಣದಲ್ಲಿ ಪ್ರತಿಬಿಂಬಿಸಿ, ಬಿಂಬ ರೂಪದ ಛಾಯೆಯ ರೂಪದಿಂದಲೂ ; **ಯಮಿನಃ**—ಸಾಧಕರಾದ ಯೋಗಿಗಳನ್ನು ; **ನಿತ್ಯಂ**—ಯಾವಾಗಲೂ ; **ಯತ್ ಮಹಃ**—ಯಾವ ನಿತ್ಯ ನಿರತಿಶಯಾದ್ವಿತೀಯ ತೇಜೋ ರೂಪ ವಸ್ತುವು ; **ಸುಖಯತಿ**—ಆನಂದಗೊಳಿಸುತ್ತಿದೆಯೋ ; **ತತ್**—ಆ ದಿವ್ಯ ತೇಜಸ್ಸು ; **ನಃ ಅವ್ಯಾತ್**—ನಮ್ಮನ್ನು ರಕ್ಷಿಸಿ ಆನಂದಗೊಳಿಸಲಿ.

ಪರಬ್ರಹ್ಮವಸ್ತುವು ಸಗುಣ ನಿರ್ಗುಣ ರೂಪವಾಗಿದೆ. ನಿರ್ಗುಣ ಸ್ವರೂಪವು ಪಾರಮಾರ್ಥಿಕವಾದುದು. ಸಗುಣ ರೂಪವು ಮಾಯೆಯ ಗುಣ ಗಳ ಉಪಾಧಿಯಿಂದ ಆದುದು. ಇದು ಅಸಂಖ್ಯಾತವಾಗಿದೆ. ವ್ಯವಹಾರಾ

Sri Vidyabharathi Book Centre, Sringeri

CC-O. In Public Domain. Digitized by eGangotri

ವಸ್ಥೆಯಲ್ಲಿ ಈ ರೂಪಗಳು ಶಾಸ್ತ್ರಾನುಸಾರವಾಗಿ ಬೇರೆ ಬೇರೆ ಪ್ರಯೋಜನ ಗಳನ್ನು ಉಂಟುಮಾಡತಕ್ಕವುಗಳಾಗಿವೆ. ಆಯಾ ಫಲಗಳಿಗಾಗಿ ಆಯಾ ರೂಪಗಳನ್ನು ಸೇವಿಸಬೇಕು. ಇಂಥ ಸಗುಣ ರೂಪಗಳಲ್ಲಿ ಸತ್ವಗುಣ ಪ್ರಧಾನವಾಗಿ ಜಗದ್ರಕ್ಷಣೆಯಲ್ಲಿ ಅಧಿಕೃತವಾಗಿರುವ ಶ್ರೀ ವಿಷ್ಣು ಸ್ವರೂಪವು ವ್ಯವಹಾರಾವಸ್ಥೆಯಲ್ಲಿ ಸೇವ್ಯವಾಗಿರುತ್ತದೆ.

ಮಾಯಿಕ ರೂಪವು ಮಿಥ್ಯಾಭೂತವಾಗಿದ್ದು, ಸೇವೆಗೆ ಅನರ್ಹವಾಗಿರುತ್ತದೆ. ಇಂಥ ಈ ಮಾಯಿಕ ರೂಪವನ್ನು ಪಾರಮಾರ್ಥಿಕವಾದ ಇದರ ಮೂಲರೂಪದಿಂದಲೇ ಆರಾಧಿಸಬೇಕು--ಎಲ್ಲವೂ ಪರಮಾತ್ಮನ ರೂಪವೆಂದೇ ತಿಳಿದು, ಪಾರಮಾರ್ಥಿಕವಾದ ಪರಮಾತ್ಮನ ರೂಪದಿಂದಲೇ ಸೇವಿಸಬೇಕು. ಪರಮಾತ್ಮನಿಗೆ ಬೇರೆಯಾಗಿ ವಸ್ತುತಃ ಏನೊಂದೂ ಇರುವುದಿಲ್ಲವಾದ್ದರಿಂದ, ಪರಮಾತ್ಮನಿಗೆ ಬೇರೆಯೆಂದು ಯಾವುದನ್ನು ತಿಳಿಯುವುದೂ ತಪ್ಪು ತಿಳಿವೇ ಆಗಿ ಅನರ್ಥಕರವಾಗುವುದು. 'ಅನ್ಯೋಽಸೌ ಅನ್ಯೋಽಹಮಸ್ಮೀತಿ ನ ಸ ವೇದ ಯಥಾ ಪಶುಃ ಏವಂ ಸ ದೇವಾನಾಂ'--'ಆರಾಧ್ಯವಾದುದು ಬೇರೆಯಾದುದು, ಆರಾಧಕನಾದ ನಾನು ಬೇರೆಯಾದವನು--ಎಂದು ತಿಳಿಯುವವನಿಗೆ ಸರಿಯಾದ ತಿಳಿವು ಇರುವುದಿಲ್ಲ. ಇಂಥವನು ಪಶು ಸಮಾನನು' ಎಂದು ಶ್ರುತಿಯು ತಿಳಿಸುತ್ತದೆ. ಆದ್ದರಿಂದಲೇ ಶ್ರೀ ಭಗವತ್ಪಾದರು ಶ್ರೀ ವಿಷ್ಣುವಿನ ಸಗುಣ ರೂಪವನ್ನು ಇದು ವರೆಗೂ ಅದ್ಭುತಕರವಾಗಿ ವರ್ಣಿಸಿ ಸ್ತುತಿಸಿ, ಈ ಪದ್ಯದಲ್ಲಿ ಈ ರೂಪದ ಮೂಲರೂಪವಾದ ಪಾರಮಾರ್ಥಿಕ ನಿರ್ಗುಣ ತತ್ವವನ್ನು ಪ್ರತಿಪಾದಿಸಿ ಸ್ತುತಿಸಿದ್ದಾರೆ.

'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ'--ಎಂದು ನಿರ್ಗುಣ ತತ್ತ್ವವು ಮಾತು ಮನಗಳಿಗೆ ಗೋಚರವಲ್ಲವೆಂದು ಶ್ರುತಿಯೇ ತಿಳಿಸುತ್ತದೆ. ಹೇಳುವುದಕ್ಕಾಗಲಿ, ಚಿಂತಿಸುವುದಕ್ಕಾಗಲಿ ಸಗುಣರೂಪವೇ ಸಾಧ್ಯವಾದುದು. ನಿರ್ಗುಣ ರೂಪವು ಸ್ತುತಿಗೂ ವಿಷಯವಾಗುವುದಲ್ಲ--'ಏತದಪ್ರಮೇಯಂ'--ಯಾವ ಪ್ರಮಾಣಕ್ಕೂ ಗೋಚರಿಸುವುದಲ್ಲ. ಆದರೆ, ನಿರ್ಗುಣ ತತ್ತ್ವದಲ್ಲಿಯೂ ವೇದವೊಂದೇ ಪ್ರಮಾಣವಾಗಿದೆ. 'ಮತ್ತೆ ವೇದವು ಈ ನಿರ್ಗುಣ ತತ್ತ್ವವನ್ನು ಬೋಧಿಸುವುದು ಹೇಗೆ?'--ಎಂದರೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಲಕ್ಷಣಾ ವೃತ್ತಿಯಿಂದಲೇ ಅದು ಅದನ್ನು ಬೋಧಿಸುತ್ತದೆ. ಶಬ್ದದಿಂದ ಸಾಕ್ಷಾತ್ತಾಗಿ ತಿಳಿದು ಬರುವ ಅರ್ಥವು ಅದರ ವಾಚ್ಯಾರ್ಥವೆನಿಸುವುದು, ಇದು ಸಗುಣ ರೂಪವೇ ಆಗಿರುತ್ತದೆ. ವಾಚ್ಯಾರ್ಥಕ್ಕೆ ಸಂಬಂಧಿಸಿರುವುದನ್ನು ಸೂಚಿಸುವಿಕೆಯೂ ಲಕ್ಷಣಾವೃತ್ತಿಯೆನಿಸುತ್ತದೆ. ಶಬ್ದವು ವಾಚ್ಯಾರ್ಥವನ್ನು ನೇರವಾಗಿ ತಿಳಿಸಿ, ಅದರಲ್ಲಿ ಅನುಗತವಾಗಿ, ಅದಕ್ಕೆ ಸ್ವರೂಪವನ್ನು ಕೊಟ್ಟು, ಅದರ ಸಂಬಂಧವು ಲೇಶಮಾತ್ರವೂ ಇಲ್ಲದ ಪಾರಮಾರ್ಥಿಕ ನಿರ್ಗುಣ ತತ್ತ್ವಸ್ವರೂಪವನ್ನು ಈ ಲಕ್ಷಣಾವೃತ್ತಿಯಿಂದ ತಿಳಿಸುತ್ತದೆ. ಈ ಪದ್ಯದ ಮೊದಲನೆಯ ಪಾದದಲ್ಲಿ ಈ ಅಭಿಪ್ರಾಯವನ್ನು ಹೇಳಿದೆ.

ಕೆಲವರು--“ನಿರ್ಗುಣ ವಸ್ತುವಿನಲ್ಲಿ ಪ್ರಮಾಣವೇ ಸಂಭವಿಸುವುದಿಲ್ಲವೆಂದು ಸ್ಪಷ್ಟವಿರುವುದರಿಂದ, ಅಂಥ ನಿರ್ಗುಣ ವಸ್ತುವು ಇರುವುದೇ ಇಲ್ಲ; ಸಗುಣರೂಪವೇ ಪಾರಮಾರ್ಥಿಕತತ್ತ್ವವು; ಇದು ಅನಂತ ಕಲ್ಯಾಣ ಗುಣ ಪರಿಪೂರ್ಣವಾದುದರಿಂದ ಮಾತಿನಿಂದಾಗಲಿ ಮನಸ್ಸಿನಿಂದಾಗಲಿ ಇದನ್ನು ಪೂರ್ಣವಾಗಿ ಗೋಚರಿಸುವುದು ಸಾಧ್ಯವಲ್ಲದ್ದರಿಂದ, ಸಗುಣ ರೂಪವನ್ನೇ ಮನೋವಾಚಾ ಅಗೋಚರವೆಂದು ಶ್ರುತಿಯು ಹೇಳುತ್ತದೆ”--ಎಂದು ಅಭಿಪ್ರಾಯವನ್ನು ವರ್ಣಿಸುತ್ತಾರೆ. ಅನಂತ ಗುಣಗಳನ್ನೆಲ್ಲವನ್ನೂ ವಿಷಯೀಕರಿಸುವುದು ಅಶಕ್ಯವಾದರೂ, ಅಲ್ಪ ಮಟ್ಟಿಗಾದರೂ ಹೇಳಲೂ ಚಿಂತಿಸಲೂ ಸಾಧ್ಯವಾಗುವುದರಿಂದ, ಮಾತು ಮನಗಳು ನಿಲುಕದೆಯೇ ಹಿಂತಿರುಗುವುವು --ಎಂಬ ಶ್ರುತಿಗೆ ಈ ವ್ಯಾಖ್ಯಾನವು ಸಮಂಜಸವಾಗಿ ಕಂಡುಬರುವುದಿಲ್ಲ. ನಿರ್ಗುಣವಸ್ತುವಿನಲ್ಲಿ ಪ್ರಮಾಣವಿಲ್ಲವೆಂಬುದೂ ಸರಿಯಲ್ಲ; ಸಗುಣದಲ್ಲಿ ಪ್ರಮಾಣವಾದುದೇ, ಅದರಲ್ಲಿ ಅನುಗತವಾಗಿರುವ ನಿರ್ಗುಣ ರೂಪದಲ್ಲಿಯೂ ಲಕ್ಷಣಾವೃತ್ತಿಯಿಂದ ಪ್ರಮಾಣವಾಗುತ್ತದೆ. ಚಿನ್ನವನ್ನು ತೋರಿಸಬೇಕಾದರೆ, ಗಟ್ಟಿ, ಸಲಾಕೆ, ಆಭರಣ, ತಂತಿ, ಗುಂಡು--ಮುಂತಾದ ಯಾವುದಾದರೂ ಅದರ ಕಾರ್ಯರೂಪವನ್ನೇ ತೋರಿಸಬೇಕಾಗುವುದೇ ಹೊರತು, ಶುದ್ಧವಾದ ಚಿನ್ನದ ರೂಪದಿಂದಲೇ ಅದನ್ನು ತೋರಿಸಲಾಗುವುದಿಲ್ಲ; ಆದ ಮಾತ್ರಕ್ಕೆ ಚಿನ್ನದ ವಾಸ್ತವವಾದ ಅರಿವು ಆಗುವುದಿಲ್ಲವೆಂದೇನೂ ಇಲ್ಲ--ಒಂದು ಆಭರಣವನ್ನು ತೋರಿಸಿ--ಇದು ಚಿನ್ನ--ಎಂದು ತಿಳಿಸಿದರೆ, ಕೇಳುವವನಿಗೆ ಚಿನ್ನದ ಅರಿವು ಆಗುತ್ತದೆ. ಏಕೆಂದರೆ, ಬೇರೊಂದು ಚಿನ್ನದ ಪದಾರ್ಥವನ್ನು ಕಂಡು

Sri Vidyabharathi Book Centre, Sringeri

CC-O. In Public Domain. Digitized by eGangotri

'ಇದು ಚಿನ್ನ'--ಎಂದು ಕೂಡಲೆ ಗುರುತಿಸುತ್ತಾನೆ. ಆದ್ದರಿಂದ ನಿರ್ಗುಣ ವಸ್ತುವಿನಲ್ಲಿ ಪ್ರಮಾಣವಿಲ್ಲವೆಂದು ಹೇಳುವುದು ಯುಕ್ತವಲ್ಲ.

ನಿರ್ಗುಣ ತತ್ತ್ವದಲ್ಲಿ ಪ್ರಮಾಣಭೂತವಾಗಿರುವ ವೇದವು ವಾಚ್ಯವೃತ್ತಿಯಿಂದ ಅದನ್ನು ತಿಳಿಸಲಾರದೆ, ಅನ್ಯವ್ಯಾವೃತ್ತಿರೂಪದಿಂದ—ಎಂದರೆ ವಾಚ್ಯಾರ್ಥಕ್ಕೆ ವಿರುದ್ಧವಾದ ಅರ್ಥವಲ್ಲ—ಎಂದು ತಿಳಿಸುತ್ತದೆ. ಶ್ರುತಿಯು ಬ್ರಹ್ಮವನ್ನು--'ಸತ್ಯಂ ಜ್ಞಾನಂ ಅನಂತಂ ಬ್ರಹ್ಮ' ಎಂದು--ಬೋಧಿಸುತ್ತದೆ. ಇಲ್ಲಿ--ಸತ್ಯ--ಎಂದರೆ ಸತ್ಯತೆಯನ್ನು ಉಳ್ಳದ್ದು; ಜ್ಞಾನವುಳ್ಳದ್ದು, ಅನಂತ--ಎಂದರೆ ಅನಂತವಾದದ್ದು--ಎಂದು ಅರ್ಥವಲ್ಲ; ಹೀಗಾದರೆ ಸತ್ಯ ಜ್ಞಾನ-ಮುಂತಾದ ಧರ್ಮಗಳನ್ನುಳ್ಳದ್ದು--ಎಂದು ಸಗುಣರೂಪವೇ ಆಗುವುದು. ಆದ್ದರಿಂದ—ಸತ್ಯವೆಂದರೆ ಅಸತ್ಯವಲ್ಲ; ಜ್ಞಾನವೆಂದರೆ ಜಡವಲ್ಲ, ಅನಂತವೆಂದರೆ ಅಂತವುಳ್ಳದ್ದಲ್ಲ—ಎಂದು ಅರ್ಥವು. ಹೀಗೆ ಶ್ರುತಿಯು ತನ್ನ ಪದಗಳ ವಾಚ್ಯಾರ್ಥಗಳಿಗೆ ವಿರುದ್ಧವಾದುದಲ್ಲವೆಂದು ಮಾತ್ರ ಉಪಲಕ್ಷಣೆಯಾಗಿ ನಿರ್ವಿಶೇಷ ಸ್ವರೂಪ ತತ್ತ್ವವನ್ನು ಬೋಧಿಸುತ್ತದೆ.

'ಹೀಗಾದರೆ ಬ್ರಹ್ಮವು ಅಭಾವ ರೂಪವೋ?'—ಎಂದರೆ, ಹಾಗಲ್ಲ. ಶ್ರುತಿಯು ಬ್ರಹ್ಮವನ್ನು--'ಅತದ್ವ್ಯಾವೃತ್ತಿ ರೂಪೇಣ, ಸಾಕ್ಷಾದ್ವಿಧಿ ಮುಖೇನ ಚ'—ಎಂಬಂತೆ—'ಇಂಥದ್ದಲ್ಲವೆಂದೂ, ಇಂಥ ರೂಪದ್ದೆಂದೂ'—ಎರಡು ವಿಧವಾಗಿಯೂ ಬೋಧಿಸುತ್ತದೆ. ಹೀಗೆ ಹೇಳಿದ್ದರಿಂದ ಬ್ರಹ್ಮವು ಭಾವರೂಪವಾದುದೆಂದೂ ನಿರ್ವಿಶೇಷ ಸ್ವರೂಪದ್ದೆಂದೂ ಸಿದ್ಧಿಸುತ್ತದೆ. ಈ ಪದ್ಯದ ಉತ್ತರಾರ್ಧದಲ್ಲಿ ಭಾವ ರೂಪದಿಂದ ನಿರ್ವಿಶೇಷವಾದ ಚಿನ್ಮಾತ್ರ ಬ್ರಹ್ಮವನ್ನು ವರ್ಣಿಸಿರುತ್ತೆ.—೫೦.

ಆಪಾದಾದಾಚ ಶೀರ್ಷ್ಣೋ ವಪುರಿದಮನಘಂ ವೈಷ್ಣವಂ ಯಃ
ಸ್ವಚಿತ್ತೇ ಧತ್ತೇ ನಿತ್ಯಂ ನಿರಸ್ತಾಖಿಲ ಕಲಿ ಕಲುಷೇ ಸಂತತಾಂತಃ
ಪ್ರಮೋದ

Sri Vidyabharathi Book Centre, Sringeri

CC-O. In Public Domain. Digitized by eGangotri

ಜುಹ್ವಜ್ಜಿಹ್ವಾಕೃಶಾನೌ ಹರಿಚರಿತಹವಿಃ ಸ್ತೋತ್ರ ಮಂತ್ರಾನು
ಪಾಠೈಃ ತತ್ಪಾದಾಂಭೋರುಹಾಭ್ಯಾಂ ಸತತ ಮಪಿ ನಮಸ್ಕುರ್ಮಹೇ
ನಿರ್ಮಲಾಭ್ಯಾಂ ॥ ॥೫೧॥

॥ ಇತಿ ಶ್ರೀಮಚ್ಛಂಕರ ಭಗವತ್ಪಾದ ವಿರಚಿತಂ ಶ್ರೀ ವಿಷ್ಣು ಪಾದಾದಿ
ಕೇಶಾಂತ ವರ್ಣನ ಸ್ತೋತ್ರಂ ಸಂಪೂರ್ಣಂ ॥

ಸಗುಣ ನಿರ್ಗುಣ ತತ್ತ್ವವನ್ನು ಈ ಪ್ರಕಾರವಾಗಿ ಸ್ಪಷ್ಟವಾಗಿ ವಿವರಿಸಿ ತೋರಿಸಿ, ವರ್ಣಿಸಲು ತಕ್ಕದ್ದಾದ ಸಗುಣ ಸ್ವರೂಪದ ಸ್ತುತಿಯನ್ನು ಇದರ ಮಹಿಮೆಯನ್ನು ತಿಳಿಸುತ್ತ ಉಪಸಂಹರಿಸುತ್ತಾರೆ.—

ಸ್ತೋತ್ರ ಮಂತ್ರಾನು ಪಾಠೈಃ—ಈ ಸ್ತೋತ್ರರೂಪವಾದ ಮಂತ್ರವನ್ನು ಗುರುಗಳಿಂದ ಅರ್ಥಪೂರ್ವಕವಾಗಿ ಕಲಿತು ಪಠಿಸುವ ಮೂಲಕವಾಗಿ; **ಹರಿಚರಿತ ಹವಿಃ**—ಶ್ರೀ ವಿಷ್ಣುವಿನ ಚರಿತೆ—ಅವನು ಧರ್ಮ ಸಂಸ್ಥಾಪನೆಗಾಗಿ ಮಾಡಿದ ಅನಂತಾನಂತ ಕಾರ್ಯಗಳು—ಎಂಬ ಹವಿಸ್ಸನ್ನು; **ಜಿಹ್ವಾಕೃಶಾನೌ**—ನಾಲಿಗೆಯೆಂಬ ಅಗ್ನಿಯಲ್ಲಿ; **ಜುಹ್ವತ್**—ಹೋಮ ಮಾಡುತ್ತ; **ವೈಷ್ಣವಂ ಅನಘಂ ಇದಂ ವಪುಃ**—ಶ್ರೀ ಮಹಾ ವಿಷ್ಣುವಿನ ಪರಮ ಪವಿತ್ರವಾಗಿ ಈ ಸ್ವರೂಪವನ್ನು; **ಆಪಾದಾತ್ ಆ ಚ ಶೀರ್ಷ್ಣಃ**—ಹೆಜ್ಜೆಯಿಂದ ಶಿರಸ್ಸಿನವರೆಗೂ ಈ ಸ್ತುತಿಯಲ್ಲಿ ವರ್ಣಿಸಿರುವಂತೆ; **ಯಃ**—ಯಾರು; **ಸಂತತಾಂತಃ ಪ್ರಮೋದಃ**—ನಿರಂತರವಾಗಿ ಆನಂದಪಡುತ್ತ; **ನಿರಸ್ತಾಖಿಲ ಕಲಿ ಕಲುಷೇ ಸ್ವಚಿತ್ತೇ ನಿತ್ಯಂ ಧತ್ತೇ**—'ಅನೇಕ ಜನ್ಮ ಸಂಸಿದ್ಧಃ'—ಎಂಬ ನ್ಯಾಯದಂತೆ ಹಲವಾರು ಜನ್ಮಗಳಲ್ಲಿ ಅನುಷ್ಠಿಸಿಕೊಂಡು ಬಂದ ನಿಷ್ಕಾಮ ಸ್ವವರ್ಣಾಶ್ರಮ ಧರ್ಮಗಳಿಂದ ಸಕಲ ದೋಷಗಳೂ ಕಳೆದು ನಿತಾಂತ ನಿರ್ಮಲವಾದ ಚಿತ್ತದಲ್ಲಿ ಯಾವಾಗಲೂ ಧ್ಯಾನಿಸುತ್ತಿರುವನೋ; **ತತ್ಪಾದಾಂಭೋರುಹಾಭ್ಯಾಂ ನಿರ್ಮಲಾಭ್ಯಾಂ**—ಪರಮ ಪಾವನಗಳಾಗಿರುವ ಅಂಥ ಮಹನೀಯನ ಪಾದ ಕಮಲಗಳಿಗೆ; **ಸತತಂ ಅಪಿ ನಮಸ್ಕುರ್ಮಹೇ**—ಯಾವಾಗಲೂ ನಮಸ್ಕರಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲೆ ತಿಳಿಸಿರುವಂತೆ ಸಗುಣಧ್ಯಾನವು ನಿರ್ಗುಣ ತತ್ತ್ವದವರೆಗೂ ಅನ್ವಯಿಸುತ್ತ ಅಲ್ಲಿಯೇ ತಾತ್ಪರ್ಯದ್ದಾಗಿರುವುದರಿಂದ, ಇಂಥ ತತ್ತ್ವಜ್ಞರಾದ ಭಗವದ್ಭಕ್ತರು—'ಭಕ್ತಾಸ್ತೇಽತೀವ ಮೇ ಪ್ರಿಯಾಃ; ಜ್ಞಾನೀ ತ್ವಾತ್ಮೈವ ಮೇ ಮತಮ್; ಪ್ರಿಯೋ ಹಿ ಜ್ಞಾನಿನೋಽತ್ಯರ್ಥಂ ಅಹಂ, ಸ ಚ ಮಮ ಪ್ರಿಯಃ'—ಎಂದು ಮುಂತಾದ ಪ್ರಮಾಣ ವಚನ ನಿಚಯಗಳಿಂದ, ಭಗವತ್ತತ್ತ್ವಜ್ಞಾನಿಯೇ ವಾಸ್ತವವಾಗಿ ಭಗವದ್ಭಕ್ತನು. ಇವನು ಸಾಕ್ಷಾಜ್ಜೀವನ್ಮುಕ್ತನಾಗಿದ್ದಾನೆ. 'ಆತ್ಮಜ್ಞ ಹ್ಯರ್ಚಯೇದ್ಭೂತಿ ಕಾಮಃ'—ಎಂದು ಶ್ರುತಿಯು ಆತ್ಮಜ್ಞನಾದ ಜೀವನ್ಮುಕ್ತನನ್ನು ಶ್ರೇಯಃ ಸಿದ್ಧಿಗಾಗಿ ಪೂಜಿಸಬೇಕೆಂದು ಉಪದೇಶಿಸುತ್ತದೆ. ಆದ್ದರಿಂದ ಇಂಥವನನ್ನು ನಮಸ್ಕರಿಸುತ್ತೇನೆಂದು ಹೇಳಿರುವುದು ಅತ್ಯಂತ ಸಮಂಜಸವಾಗಿದೆ. ಶ್ರೀ ಭಗವತ್ಪಾದರು ಗ್ರಂಥಗಳನ್ನು ರಚಿಸಿರುವುದು ತಮ್ಮ ಪ್ರಯೋಜನಕ್ಕಾಗಿ ಅಲ್ಲವೆಂಬುದನ್ನು ಮೊದಲೇ ತಿಳಿಸಿರುತ್ತೆ. ಆದ್ದರಿಂದ ತತ್ತ್ವಜ್ಞರಾದ ಭಗವದ್ಭಕ್ತರನ್ನು ಶ್ರೇಯಸ್ಕಾಮಿಗಳು ಯಾವಾಗಲೂ ಅರ್ಚಿಸಬೇಕೆಂಬ ಹಿತವನ್ನು ಉಪದೇಶಿಸುತ್ತಾರೆಂದು ತಿಳಿಯಬೇಕು.

|| ಇತಿ ಸರ್ವಂ ಮಂಗಳಂ ||

ಶ್ರೀಮಚ್ಛಂಕರ ದೇಶಿಕೇಂದ್ರರಚಿತಂ ಪಾದಾದಿಕೇಶಾವಧಿ
ಸ್ತೋತ್ರಂ ವಿಶ್ವಮಯಸ್ಯ ಚಾದಿಪುರುಷಸ್ಯೇದಂ ಹಿ ತತ್ತ್ವಾರ್ಥಕಮ್ ।
ಯದ್ಧ್ಯಾನಾನ್ನಿತರಾಂ ವಿಶುದ್ಧ ಮನಸಃ ಸಿದ್ಧ್ಯೇತ್ಪುಮರ್ಥಃ ಪರಃ
ತದ್ವ್ಯಾಖ್ಯಾತಮಿದಂ ಯಥಾಮತಿ ಮಯಾ ಪ್ರೀಣಾತು ಸರ್ವೇಶ್ವರಃ ॥

ಶೃಂಗಗಿರಿ-ಕವಿ-ನರಸಿಂಹ ಶರ್ಮ ವಿರಚಿತವಾದ ಶ್ರೀ ಭಗವತ್ಪಾದೀಯ
ಶ್ರೀ ವಿಷ್ಣುಪಾದಾದಿ ಕೇಶಾಂತ ಸ್ತುತಿಯ ವಿವರಣ ಸಹಿತ
ಕನ್ನಡಾನುವಾದವು ಸಮಾಪ್ತವು.

—★—

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾಸ್ಕರ್ ಪ್ರಿಂಟರ್ಸ್
ಮೂರನೇ ಕ್ರಾಸ್, ನಾಲ್ಕನೇ ವಿಭಾಗ
ರಾಜಾಜಿನಗರ
ಬೆಂಗಳೂರು-೧೦ :
೧೯೭೪

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶಂಕರ ಸೇವಾ ಸಮಿತಿಯ ಪ್ರಕಟಣೆಗಳು

ಕನ್ನಡ ಅನುವಾದ ಮತ್ತು ವಿವರಣೆಯೊಡನೆ—

			ಬೆಲೆ
1.	ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ	....	1–00
2.	ಗೀತಾರಾಧನಮ್	....	1–00
3.	ದಶ ಶ್ಲೋಕೀ (ಸಿದ್ಧಾಂತ ಬಿಂದುವಿನ ಸಾರದೊಡನೆ)	....	1–50
4.	ಸನಾತನ ಧರ್ಮ (ಪ್ರಶ್ನೋತ್ತರ ರೂಪದಲ್ಲಿ)	....	0–50
5.	ಮನೀಷಾಪಂಚಕ ಮತ್ತು ವಿಜ್ಞಾನ ನೌಕ	....	ಅಚ್ಚಿನಲ್ಲಿ
6.	ಹಸ್ತಾಮಲಕ ಪ್ರಕರಣ	....	,,
7.	ಗಣೇಶ ಮಹಿಮಾ (ಗಣೇಶ ಸ್ತೋತ್ರಗಳು ಮತ್ತು ಗಣೇಶ ಅಥರ್ವ ಶಿರ ಉಪನಿಷತ್)	....	,,
8.	ದೇವೀ ಸ್ತೋತ್ರಗಳು	....	,,
9.	ಮಹಾ ನಾರಾಯಣ ಉಪನಿಷತ್	....	,,
10.	ಶಾಂಕರ ಬ್ರಹ್ಮಸೂತ್ರ ಭಾಷ್ಯ	....	,,
11.	ಭಾರತ ಸಾವಿತ್ರೀ	....	,,

ಶ್ರೀ ಶಂಕರ ಸೇವಾ ಸಮಿತಿಯ ಕಟ್ಟಡದ ನಿಧಿಗೆ ಆಸ್ತಿಕ ಮಹನೀಯರು ಉದಾರವಾಗಿ ಧನ ಸಹಾಯ ಮಾಡಬೇಕೆಂದು ಪ್ರಾರ್ಥಿಸಲಾಗಿದೆ.

Sri Vidyabharathi Book Centre, Sringeri